**ಸಂಪುಟ: 05 ಸಂಚಿಕೆ: 273 ಪುಟಗಳು: 08 ಬುಧವಾರ 17 ಡಿಸೆಂಬರ್ 2025**

www.udayavahini.in · epaper.udayavahini.in · Udaya vahini news · Udaya vahini news · Udayavahini news youtube · udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 · +91 8035841833 · ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ದೈವದ ಸಹಾಯವಿಲ್ಲದೆ ಜಯ ಸಿಗದು. ಸ್ವಪ್ರಯತ್ನವಿಲ್ಲದೆ ದೈವದ ಸಹಾಯ ಸಿಗದು

# ವಿಧಾನಸಭೆಯಲ್ಲೂ ವೋಟ್ ಚೋರಿ ಪ್ರತಿಧ್ವನಿ

• ಉದಯವಾಹಿನಿ, ಬೆಳಗಾವಿ


ವೋಟ್ ಚೋರಿ ವಿಚಾರವಾಗಿ ಕಾಂಗ್ರೆಸ್ ರಾಷ್ಟ್ರೀಯ ಮಟ್ಟದಲ್ಲಿ ಕ್ಯಾಂಪೇನ್ ಮಾಡುತ್ತಿದೆ. ಈ ನಡುವೆ ವಿಧಾನಸಭೆಯಲ್ಲೂ ಮತ ಕಳ್ಳತದ ಬಗ್ಗೆ ಆಡಳಿತ ವಿಪಕ್ಷದ ಸದಸ್ಯರ ನಡುವೆ ಬಿಸಿ ಬಿಸಿ ಮಾತುಗಳ ವಿನಿಮಯ ನಡೆದವು. ಪ್ರಶ್ನೋತ್ತರ ಕಲಾಪದ ಬಳಿಕ ಕಾಂಗ್ರೆಸ್ ಸದಸ್ಯ ಬಿ ಆರ್ ಪಾಟೀಲ್ ಆಳಂದ ವೋಟ್ ಚೋರಿ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದರು. ನನಗೆ ವಿಧಾನಸಭೆಗೆ ಬರಲು ಅಡ್ಡಿ ಮಾಡುವ ಪ್ರಯತ್ನ ನಡೆದಿತ್ತು. ಆ ಪ್ರಯತ್ನ ಇದೀಗ ಬಯಲಾಗಿದೆ. ವೋಟ್ ಚೋರಿ ಪ್ರಕರಣ ಬಹಿರಂಗವಾಗಿದೆ. ಈ ಬಗ್ಗೆ ಚರ್ಚೆಗೆ ಅವಕಾಶ ನೀಡಬೇಕು ಎಂದು ಬಿ ಆರ್ ಪಾಟೀಲ್ ಆಗ್ರಹಿಸಿದರು. ಇದಕ್ಕೆ ವಿಪಕ್ಷದ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ವೋಟ್ ಚೋರಿ ಪದ್ಧತಿ ಕಾಂಗ್ರೆಸ್‌ನಿಂದ ಬಂದಿದೆ ಎಂದು ತಿರುಗೇಟು ನೀಡಿದರು.

ಮತ್ತೊಂದು ಕಡೆಯಲ್ಲಿ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಿ ಎಂದು ಕಾಂಗ್ರೆಸ್ ಸದಸ್ಯರ ಆಗ್ರಹಿಸಿದರು.

**70ರೂ.ಗೆ ಹರಾಜಾಗ್ತಿದೆ:** ಬಿ ಆರ್ ಪಾಟೀಲ್ ಪರವಾಗಿ ಪ್ರಿಯಾಂಕ್ ಖರ್ಗೆ ಧ್ವನಿ ಎತ್ತಿ 70 ರೂಪಾಯಿಗೆ ಚುನಾವಣಾ ಪ್ರಕ್ರಿಯೆ ಹರಾಜು ಆಗ್ತಿದೆ.

ಹೀಗಾಗಿ ಸದನದಲ್ಲಿ ಚರ್ಚೆಗೆ ಅವಕಾಶ ಕೊಡಿ ಎಂದು ಮನವಿ ಮಾಡಿದರು. ಈ ಸದನದಲ್ಲಿ ಚರ್ಚೆ ಮಾಡಲಿಲ್ಲ ಅಂದ್ರೆ ಇನ್ನೆಲ್ಲಿ ಮಾಡ್ತಿರಾ ವಿಷಯ ಗಂಭೀರ ಇದೆ. 70 ರೂಪಾಯಿಗೆ ಒಬ್ಬ ಶಾಸಕರ ಹುದ್ದೆ ಮಾರಾಟಕ್ಕೆ ಹೊರಟಿದ್ದಾರೆ. 70 ರೂಪಾಯಿಗೆ ಚುನಾವಣಾ ಪ್ರಕ್ರಿಯೆ ಮಾರಾಟ ಮಾಡಲು ಮುಂದಾಗಿದ್ದಾರೆ. ಯಾರು ಮಾಡ್ತಿದ್ದಾರೆ, ಹೇಗೆ ಮಾಡ್ತಿದ್ದಾರೆ ಅಂತ ಚರ್ಚೆ ಆಗಬಾರದಾ.. ಎಲೆಕ್ಷನ್ ಕಮಿಷನ್, ಸಂವಿಧಾನದ ಬಗ್ಗೆ ಚರ್ಚೆ ಆಗೋದು ಬೇಡವೇ ಎಂದು ವಿಪಕ್ಷಗಳ ಮೇಲೆ ಮಾತಿನ ಪ್ರಹಾರ ನಡೆಸಿದರು. 70 ರೂಪಾಯಿಗೆ ಮತ ಕಳ್ಳತನ ಮಾಡಿ ಇಲ್ಲಿ ಕೂತಿದ್ದಾರಲ್ಲ ಇವರಿಗೆ ನೈತಿಕತೆ ಇದೆಯಾ ಪ್ರಸ್ತಾವನೆ ಮಾಡೋದಕ್ಕಾದರೂ ಅವಕಾಶ ಕೊಡಿ ಎಂದು ಪ್ರಿಯಾಂಕ್ ಆಗ್ರಹಿಸಿದರು.

ಇದಕ್ಕೆ ಅಷ್ಟೇ ತೀವ್ರವಾಗಿ ತಿರುಗೇಟು ನೀಡಿದ ಪ್ರಿಯಾಂಕ್ ಖರ್ಗೆ, ಹೈಕೋರ್ಟ್‌ನಲ್ಲಿರುವ ವಿಷಯಗಳನ್ನ ಇಲ್ಲಿ ಚರ್ಚೆ ಮಾಡಿಲ್ವಾ ಮುಡಾ ಪ್ರಕರಣ ಚರ್ಚೆ ಆಗಿಲ್ವಾ ವಾಲ್ಮೀಕಿ ಪ್ರಕರಣ ಚರ್ಚೆ ಮಾಡಿಲ್ವಾ ಇದೆಲ್ಲಾ ಚರ್ಚೆ ಆಗೋವಾಗ ಮಧ್ಯಂತರ ವರದಿ ಬಂದಿತ್ತಾ ಎಂದು ಮರು ಪ್ರಶ್ನೆ ಹಾಕಿದರು. ಇದಕ್ಕೆ ಸುನಿಲ್ ಕುಮಾರ್ ಮಾತನಾಡಿ, ಸಂಬಂಧಪಟ್ಟ ಮಂತ್ರಿ ಮಾತಾಡಲಿ ಎಂದರು. ಈ ವೇಳೆ ನಮ್ಮ ಜಿಲ್ಲೆಯಲ್ಲಿ ಆಗಿರೋದು ಎಂದು ಪ್ರಿಯಾಂಕ್ ಉತ್ತರಿಸಿದರು. ಈ ಸಂದರ್ಭದಲ್ಲಿ ಸುನಿಲ್ ಕುಮಾರ್ ಹಾಗೂ ಸಚಿವ ಪ್ರಿಯಾಂಕ್ ಖರ್ಗೆ ನಡುವೆ ಮಾತಿಮ ಜಟಾಪಟಿ ನಡೆಯಿತು.

**ಸುನೀಲ್ ಮಧ್ಯಪ್ರವೇಶ**

**ಬಿಜೆಪಿ ಶಾಸಕ ಸುನಿಲ್ ಕುಮಾರ್ ಮಧ್ಯ ಪ್ರವೇಶ ಮಾಡಿ, ವೋಟ್ ಚೋರಿ ಬಗ್ಗೆ ಅವರು ಏನೋ ಚರ್ಚೆ ಮಾಡೋದಕ್ಕೆ ರೆಡಿ ಇದ್ದಾರೆ. ಸರ್ಕಾರ ಎಸ್ ಐಟಿಯ ಮಧ್ಯಂತರ ವರದಿ ಕೊಡಲಿ. ನಾವು ಚರ್ಚೆ ಮಾಡೋಕೆ ತಯಾರಿದ್ದೇವೆ. ಎಸ್‌ಐಟಿ ವರದಿ ಮಂಡನೆ ಮಾಡಲಿ ಎಂದು ಒತ್ತಾಯಿಸಿದರು. ಅಲ್ಲದೆ,ಧರ್ಮಸ್ಥಳದ್ದು ವರದಿ ಮಂಡನೆ ಮಾಡಲಿ. ನಾವು ಚರ್ಚೆಗೆ ತಯಾರಿದ್ದೇವೆ. ದಿಢೀರ್ ಅಂತ ಚರ್ಚೆಗೆ ತೆಗೆದುಕೊಳ್ಳಿ ಎಂದರೆ ಆಗುವುದಿಲ್ಲ ಎಂದು ತೀಕ್ಷ್ಣವಾಗಿ ತಿರುಗೇಟು ನೀಡಿದರು.**

## ತಾ.ಪಂ, ಜಿ.ಪಂ ಚುನಾವಣೆ ತಡ: 1,279 ಕೋಟಿ ಅನುದಾನಕ್ಕೆ ಕತ್ತರಿ

• ಉದಯವಾಹಿನಿ, ನವದೆಹಲಿ

ಕರ್ನಾಟಕ ಸರ್ಕಾರವು ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗಳನ್ನು ಸಕಾಲಕ್ಕೆ ನಡೆಸದ ಕಾರಣ 15ನೇ ಹಣಕಾಸು ಆಯೋಗದ 1,279 ಕೋಟಿ ಅನುದಾನಕ್ಕೆ ಕತ್ತರಿ ಬಿದ್ದಿದೆ.

ಲೋಕಸಭೆಯಲ್ಲಿ ಮಂಗಳವಾರ ಪ್ರಶೋತ್ತರ ಅವಧಿಯಲ್ಲಿ ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್.ಮಂಜುನಾಥ್ ಕೇಳಿರುವ ಪ್ರಶ್ನೆಗೆ ಕೇಂದ್ರ ಪಂಚಾಯತ್‌ರಾಜ್ ಸಚಿವ ರಾಜೀವ್ ರಂಜನ್ ಸಿಂಗ್ ನೀಡಿರುವ ಲಿಖಿತ ಉತ್ತರದಲ್ಲಿ ಈ ಮಾಹಿತಿ ಇದೆ. 15ನೇ ಹಣಕಾಸು ಆಯೋಗದ ಅನುದಾನಗಳ ಅನುಷ್ಠಾನಕ್ಕಾಗಿ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ 2021ರಲ್ಲೇ ಮಾರ್ಗಸೂಚಿ ನೀಡಲಾಗಿತ್ತು. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಕಾಲಿಕ ಚುನಾವಣೆಗಳನ್ನು ನಡೆಸಿದರೆ ಮಾತ್ರ. ಅನುದಾನ ಬಿಡುಗಡೆ ಮಾಡಲಾಗುತ್ತದೆ ಎನ್ನುತ್ತದೆ ನಿಯಮ. ಕರ್ನಾಟಕ ಸರ್ಕಾರವು 2020–21 ರಿಂದ ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಚುನಾವಣೆಗಳನ್ನು ನಡೆಸದ ಕಾರಣ ಅನುದಾನ ತಡೆ ಹಿಡಿಯಲಾಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಹಣಕಾಸು ಆಯೋಗವು ರಾಜ್ಯದ ಸ್ಥಳೀಯ ಸಂಸ್ಥೆಗಳಿಗೆ 13,184 ಕೋಟಿ ಹಂಚಿಕೆ ಮಾಡಿತ್ತು. ಇಲ್ಲಿಯವರೆಗೆ 11,905 ಕೋಟಿ ಮಾತ್ರ ಕೊಟ್ಟಿದೆ.

## ಜಿಬಿಎ: ಜನಪ್ರತಿನಿಧಿಗಳ ಹೆಸರು ಸೇರ್ಪಡೆಗೆ ಮಸೂದೆ

• ಉದಯವಾಹಿನಿ, ಬೆಳಗಾವಿ

ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಸದಸ್ಯರ ಪಟ್ಟಿಯಲ್ಲಿ ಕೆಲವು ಜನಪ್ರತಿನಿಧಿಗಳ ಹೆಸರುಗಳು ಬಿಟ್ಟು ಹೋಗಿರುವುದರಿಂದ ಅವರ ಹೆಸರು ಸೇರಿಸುವ ಉದ್ದೇಶದ ಎರಡನೇ ತಿದ್ದುಪಡಿ ಮಸೂದೆಗೆ ವಿಧಾನಸಭೆ ಅಂಗೀಕಾರ ನೀಡಿತು. ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಡಿ.ಕೆ.ಶಿವಕುಮಾರ್ ಮಸೂದೆ ಮಂಡಿಸಿದರು. ಚಿಕ್ಕಬಳ್ಳಾಪುರ ಸಂಸದ ಕೆ. ಸುಧಾಕರ್ ಅವರ ಕ್ಷೇತ್ರದ ಕೆಲವು ಭಾಗ ಪಾಲಿಕೆ ವ್ಯಾಪ್ತಿಗೆ ಬರುತ್ತವೆ. ರಾಜ್ಯಸಭೆ ಸದಸ್ಯೆ ಸುಧಾಮೂರ್ತಿ ಬೆಂಗಳೂರಿನಲ್ಲಿದ್ದಾರೆ. ಅವರು ಸೇರಿದಂತೆ ಜಿಬಿಎ ಸದಸ್ಯರ ಪಟ್ಟಿಯಲ್ಲಿ ಪಾಲಿಕೆ ವ್ಯಾಪ್ತಿಯ ನಿವಾಸಿಯಾಗಿರುವ ಜನಪ್ರತಿನಿಧಿಗಳ ಹೆಸರು ಬಿಟ್ಟು ಹೋಗಿದೆ. ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು, ವಿಧಾನ ಪರಿಷತ್ ಸದಸ್ಯರು ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಮತ್ತು ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳನ್ನೂ ಜಿಬಿಎ ಸದಸ್ಯರನ್ನಾಗಿ ಸೇರಿಸಲಾಗುವುದು ಎಂದು ಅವರು ಹೇಳಿದರು. 'ಜಿಬಿಎ ಪ್ರಾಧಿಕಾರಕ್ಕೆ ಯಾವುದೇ ರೀತಿ ಚುನಾವಣೆ ನಡೆಯುವುದಿಲ್ಲ. ಇದು ರಾಜ್ಯ ಮಟ್ಟದ ಸಂಸ್ಥೆಯಾಗಿದೆ. ಮುಂದೆ ಹೊಸ ಪ್ರದೇಶವನ್ನು ಪಾಲಿಕೆ ವ್ಯಾಪ್ತಿಗೆ ಸೇರಿಸಿಕೊಂಡಾಗ ಆ ಭಾಗದಲ್ಲಿ 6 ತಿಂಗಳ ಒಳಗೆ ಚುನಾವಣೆ ನಡೆಸಬೇಕಾಗುತ್ತದೆ. ಈ ಪ್ರದೇಶದಲ್ಲಿ ಯಾರಾದರೂ ಪಂಚಾಯಿತಿ ಸದಸ್ಯರಾಗಿದ್ದರೆ, ಅವರಿಗೆ ಇದರಲ್ಲಿ ಮತದಾನದ ಹಕ್ಕು ಬರುವುದಿಲ್ಲ. ಈ ಬದಲಾವಣೆ ಹಂತದಲ್ಲಿ ಆ ಪ್ರದೇಶವನ್ನು ಪ್ರತಿನಿಧಿಸಲು ಅವಕಾಶ ಕಲ್ಪಿಸಿದ್ದೇವೆ.

ಇದು ಅಗತ್ಯವಿಲ್ಲ ಬೇಡ ಎಂದರೆ ಇದನ್ನು ತೆಗೆದು ಹಾಕಲು ಸಿದ್ಧನಿದ್ದೇನೆ. ನಿಮ್ಮ ಸಲಹೆಯಂತೆ ನಾಮ ನಿರ್ದೇಶಿತ ಸದಸ್ಯರ ಸೇರ್ಪಡೆ ಕೈಬಿಡುತ್ತೇನೆ ಎಂದು ಶಿವಕುಮಾರ್ ಹೇಳಿದರು.

## ಎಂಎಲ್‌ಸಿ ಕುಶಾಲಪ್ಪಗೆ ಅಧಿಕಾರಿ ಸವಾಲು: ಹಕ್ಕು ಭಾದ್ಯತಾ ಸಮಿತಿಗೆ

• ಉದಯವಾಹಿನಿ, ಬೀದರ್

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕೊಡಗು ಜಿಲ್ಲಾ ಅಧಿಕಾರಿ ಕೆ.ಆರ್.ಕೃಷ್ಣಮೂರ್ತಿ ಅವರು ವಿಧಾನ ಪರಿಷತ್ತಿನ ಸದಸ್ಯ ಎಂ.ಪಿ.ಕುಶಾಲಪ್ಪ ಅವರ ವಿರುದ್ಧ ಮಾಧ್ಯಮಗಳಿಗೆ ಹೇಳಿಕೆ ನೀಡಿದ ವಿಚಾರವನ್ನು ಸಭಾಪತಿ ಬಸವರಾಜ ಹೊರಟ್ಟಿ ಅವರು ಸದನದ ಹಕ್ಕುಭಾದ್ಯತಾ ಸಮಿತಿಗೆ ವಹಿಸಿದ್ದಾರೆ.

ವಿಧಾನ ಪರಿಷತ್ತಿನಲ್ಲಿ ಮಂಗಳವಾರ ಕಲಾಪದ ವೇಳೆ ಕುಶಾಲಪ್ಪ ಅವರು, ವಿಧಾನ ಪರಿಷತ್ತಿನ ಸದಸ್ಯರು ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯ ವಸತಿ ನಿಲಯಗಳಿಗೆ ಭೇಟಿ ನೀಡಿ, ವರದಿ ನೀಡಲಿ ಎಂದು ಕೃಷ್ಣಮೂರ್ತಿ ಅವರು ಮಾಧ್ಯಮಗಳ ಮೂಲಕ ಸವಾಲು ಹಾಕಿದ್ದಾರೆ. ಇದು ಸದನಕ್ಕೆ ಮಾಡಿರುವ ಅವಮಾನ' ಎಂದು ವಿಷಯ ಪ್ರಸ್ತಾಪಿಸಿದರು. ಈ ವಿಚಾರವನ್ನು ಸದನದ ಹಕ್ಕು ಭಾದ್ಯತಾ ಸಮಿತಿಗೆ ವಹಿಸಬೇಕು ಎಂದು ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಕೋರಿದರು.

# ಸದನದಲ್ಲಿ ಭಾರೀ ಸಂಚಲನ ನಾನೇ ಸಿಎಂ ಕಂಪನ

# ವಿಧಾನಸಭೆಯಲ್ಲಿ ಸಿದ್ದರಾಮಯ್ಯ ಹೇಳಿಕೆ



## ಈಗಲೂ ನಾನೇ, ಮುಂದೆನೂ ನಾನೇ ಮುಖ್ಯಮಂತ್ರಿ

## ಕಲಾಪದಲ್ಲಿ ಗುಡುಗಿದ ಸಿದ್ದರಾಮಯ್ಯ ಕಾಲೆಳೆದ ವಿಪಕ್ಷ

**ಸದನದಲ್ಲಿ ಸಿದ್ದರಾಮಯ್ಯ ಸ್ಪಷ್ಟನೆ**

**140 ಜನ ಶಾಸಕರು ನಮ್ಮ ಜೊತೆ ಇದ್ದಾರೆ ನಮ್ಮದೇ ಸರ್ಕಾರ ಇದೆ, ಐದು ವರ್ಷ ಜನರು ನಮಗೆ ಆಶೀರ್ವಾದ ಮಾಡಿದ್ದಾರೆ. ಎಲ್ಲಾ 140 ಜನ ಶಾಸಕರು ನಮ್ಮ ಜೊತೆ ಇದ್ದಾರೆ. 2028ಕ್ಕೂ ನಾವೇ ಅಧಿಕಾರಕ್ಕೆ ಬರುತ್ತೇವೆ. ಬಿಜೆಪಿಯವರಿಗೆ ಯಾವ ಕಾರಣಕ್ಕೂ ಕರ್ನಾಟಕದ ಜನರು ಆಶೀರ್ವಾದ ಮಾಡಲ್ಲ. ಎರಡು ಬಾರಿ ಹಿಂದೆ ಅಧಿಕಾರ ಮಾಡಿದ್ರಲ್ಲ... ಯಾವಾತ್ತಾದರೂ ಜನರು ಆಶೀರ್ವಾದ ತಗೊಂಡು ಅಧಿಕಾರ ಮಾಡಿದ್ದೀರಾ ಎಂದು ಸಿಎಂ ಸಿದ್ದರಾಮಯ್ಯ ಪ್ರಶ್ನಿಸಿದರು. ಆಪರೇಷನ್ ಕಮಲ, ಬರೀ ಹಿಂಬಾಗಿಲಿನಿಂದ ನೀವು ಅಧಿಕಾರಕ್ಕೆ ಬಂದವರು. ಜನರು ಯಾವತ್ತೂ ನಿಮಗೆ ಆಶೀರ್ವಾದ ಮಾಡಲ್ಲ ಎಂದು ಟೀಕಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಆರ್. ಅಶೋಕ್, 2019ರಲ್ಲಿ ನಿಮಗೆ ಜನರು ಆಶೀರ್ವಾದ ಮಾಡಿದ್ರಾ, ಜೆಡಿಎಸ್ ನವರ ಜೊತೆ ಹೋದ್ರಲ್ಲ. ಅವರ ಮನೆ ಬಾಗಿಲಿಗೆ ಹುಡುಕಿಕೊಂಡು ಹೋಗಿದ್ರಲ್ಲ ಎಂದು ಕಿಚಾಯಿಸಿದರು. ಅದಕ್ಕೆ ಉತ್ತರಿಸಿದ ಸಿಎಂ ಸಿದ್ದರಾಮಯ್ಯ, ನಾವು ಅವರ ಮನೆಗೆ ಹೋಗಿರಲಿಲ್ಲ. ಜೆಡಿಎಸ್ ನವರು ಹೇಳ್ಕೊಳ್ತಾರೆ ನಾವು ಹೋಗಿಲ್ಲ. ಆವಾಗ ಬಿಜೆಪಿಯವರು ಅಧಿಕಾರಕ್ಕೆ ಬರಬಾರದು ಅಂತಾ ಅಷ್ಟೇ ಇದ್ದಿದ್ದು. ನೀವು ಯಾಕೇ ಜೆಡಿಎಸ್‌ನವರ ಜೊತೆ ಹೋಗಿದ್ದೀರಿ ಎಂದು ಸಿಎಂ ತಿರುಗೇಟು ನೀಡಿದರು.**



ಬೆಳಗಾವಿ: ವಿಧಾನಸಭೆ ಕಲಾಪದಲ್ಲಿ ನಾಯಕತ್ವ ಬದಲಾವಣೆ ಚರ್ಚೆ ಪ್ರತಿಧ್ವನಿಸಿತು. ನಾಯಕತ್ವ ಗೊಂದಲ ವಿಚಾರವನ್ನು ಪ್ರಸ್ತಾಪಿಸಿದ ಪ್ರತಿಪಕ್ಷಗಳಿಗೆ ಉತ್ತರಿಸಿದ ಸಿಎಂ ಸಿದ್ದರಾಮಯ್ಯ, ಜನರು ನಮಗೆ ಐದು ವರ್ಷ ಆಶೀರ್ವಾದ ನೀಡಿದ್ದು, ಹೈಕಮಾಂಡ್ ಹೇಳುವ ತನಕ ನಾನೇ ಸಿಎಂ ಆಗಿ ಮುಂದುವರಿಯುತ್ತೇನೆ ಎಂದು ಸ್ಪಷ್ಟಪಡಿಸಿದರು. ಪ್ರಶ್ನೋತ್ತರ ಅವಧಿಯಲ್ಲಿ ನಾಯಕತ್ವ ಬದಲಾವಣೆ ವಿಚಾರವನ್ನು ಪ್ರತಿಪಕ್ಷ ನಾಯಕ ಆರ್.ಅಶೋಕ್ ಪ್ರಸ್ತಾಪಿಸಿದರು. ಶಾಸಕ ರಂಗನಾಥ್‌ರ ಕುಣಿಗಲ್ ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಅನುದಾನ ಬಿಡುಗಡೆ ಸಂಬಂಧ ಕೇಳಿದ ಪ್ರಶ್ನೆಗೆ ಸಿಎಂ ಸಿದ್ದರಾಮಯ್ಯ ಉತ್ತರಿಸುತ್ತಾ, ನನ್ನ ಮೇಲೆ ವಿಶ್ವಾಸವಿಡಿ ಅದನ್ನು ಸರಿಪಡಿಸೋಣ ಎಂದರು. ಆಗ ಮಧ್ಯಪ್ರವೇಶಿಸಿದ ವಿಪಕ್ಷ ನಾಯಕ ಆರ್.ಅಶೋಕ್, ಈ ವೇಳೆ ಬೇಕು ಅಂತಾ ತಾರತಮ್ಯ ಮಾಡಿದ್ರಾ, ಹೇಗೆ ಎಂದು ಸಿಎಂ ಅವರನ್ನು ಪ್ರಶ್ನಿಸಿದರು. ಈ ವೇಳೆ, ಸಿಎಂ ಸಿದ್ದರಾಮಯ್ಯ ನೀವು ಉರಿಯೋ ಬೆಂಕಿಗೆ ತುಪ್ಪ ಹಾಕೋಕೆ ಹೋಗಬೇಡ ಎಂದರು. ಆಗ ವಿಪಕ್ಷ ನಾಯಕ ಆರ್.ಅಶೋಕ್, ಹಾಗಿದ್ದರೆ ಉರಿಯುತ್ತಿರುವುದು ಗ್ಯಾರಂಟಿಯಲ್ವಾ ಎಂದು ಕಿಚಾಯಿಸಿದರು. ಈ ವೇಳೆ ಸಿಎಂ ಸಿದ್ದರಾಮಯ್ಯ, ಅದು ಗಾದೆ ಮಾತು ಎಂದರು. ಇದಕ್ಕೆ ಆರ್.ಅಶೋಕ್, ಈ ನಡುವೆ ಅವರು ಪೂಜೆ ಪುರಸ್ಕಾರಗಳನ್ನು ಮಾಡ್ತಿದ್ದಾರೆ. ಅವರು ಸಿಎಂ ಆಗೋಕೆ ಎಂದು ಡಿಕೆಶಿ ಕಡೆ ಬೆರಳು ತೋರಿಸಿ ಕಾಲೆಳೆದರು. ಉರಿಯುತ್ತಿರುವ ಬೆಂಕಿಗೆ ತುಪ್ಪ ಸುರಿಯಬೇಡ ಅಂತಿದ್ದಾರೆ. ಅಧ್ಯಕ್ಷರೇ ಹಾಗಿದ್ದರೆ ಅಲ್ಲಿ ಉರಿಯುತ್ತಿರೋದು ನಿಜಾ ಅಲ್ಲವಾ ಎಂದು ಪ್ರಶ್ನಿಸಿದರು. ಈ ವೇಳೆ ಸುನೀಲ್ ಕುಮಾರ್ ಮಾತನಾಡಿ, ಗಾದೆ ಮಾತಾಡಿದ್ರೋ, ನಿಮ್ಮಲ್ಲಿ ಆಗ್ತಿರೋದನ್ನು ಹೇಳಿದ್ರೋ ಎಂದು ಕಿಚಾಯಿಸಿದರು. ಅದಕ್ಕೆ ಪ್ರತಿಕ್ರಿಯಿಸಿ, ನಿಮಗೆ ಗಾದೆ ಮಾತುಗೊತ್ತಿಲ್ಲ ಅಂದರೆ ನಾನು ಏನು ಹೇಳಲಿ. ಉರಿಯೋ ಬೆಂಕಿಗೆ ತುಪ್ಪ ಹಾಕೋದೇ ವಿರೋಧ ಪಕ್ಷದವರ ಕೆಲಸ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಅದಕ್ಕೆ ಆರ್.ಅಶೋಕ್, ನಾವು ತುಪ್ಪ ಹಾಕಿದರೆ ಪರವಾಗಿಲ್ಲ, ಆದರೆ ದಿನ ಅವರೇ ತುಪ್ಪ ಹಾಕ್ತಾ ಇದ್ದಾರಲ್ಲಾ ಎಂದು ಪ್ರಶ್ನಿಸಿದರು. ಅವರು ಸುಮ್ಮನೆ ಇದ್ದಾರೆ ನೀನು ಯಾಕೇ ಸುಮ್ಮನೆ ಇರಲ್ಲ. ಅವರು ಏನು ಮಾಡುತ್ತಿಲ್ಲ. ಆದರೆ ಎಲ್ಲವನ್ನೂ ನೀವೇ ಮಾಡ್ತಿರೋದು. ವಿರೋಧ ಪಕ್ಷದವರು ಏನೇ ಪ್ರಚೋದನೆ ಮಾಡಿದ್ರು, ನಮ್ಮವರು ಯಾರು ಕೂಡ ಪ್ರಚೋದನೆಗೆ ಒಳಗಾಗುವುದಿಲ್ಲ ಎಂದು ಸಿಎಂ ತಿರುಗೇಟುಕೊಟ್ಟರು.

**ಜನ ಆಶೀರ್ವಾದ ಮಾಡಿದ್ದಾರೆ!**

**ರಾಜ್ಯದ ಜನರು ಆಶೀರ್ವಾದ ಮಾಡಿದ್ದಾರೆ. ನೀವೇ ಐದು ವರ್ಷ ಇರಿ ಎಂದು,ಹಾಗಾಗಿ ಐದು ವರ್ಷ ನಾವೇ ಇರುತ್ತೇವೆ ಎನ್ನುವ ಮೂಲಕ ಸಿಎಂ ಸಿದ್ದರಾಮಯ್ಯ ಅವರು ಚರ್ಚೆಗೆ ತೆರೆ ಎಳೆಯಲು ಪ್ರಯತ್ನ ನಡೆಸಿದರು.ಆದರೆ ವಿಪಕ್ಷದ ನಾಯಕರು ಇದಕ್ಕೆ ಅವಕಾಶ ಕೊಡಲಿಲ್ಲ, ಬದಲಾಗಿ ಸಿದ್ದರಾಮಯ್ಯ ಅವರನ್ನು ಮತ್ತಷ್ಟು ಕೆಣಕಿದರು. ನೀವು ಐದು ವರ್ಷ ಇರುವುದು ಗ್ಯಾರಂಟಿನಾ ಡಿಕೆಶಿ ಆಪ್ತ ಶಾಸಕರ ರಂಗನಾಥ್ ಅವರು ಡಿಕೆ ಸಿಎಂ ಆಗಲಿ ಎಂದು ಪೂಜೆ ಪುರಸ್ಕಾರ ಮಾಡ್ತಿದ್ದಾರೆ ಎಂದು ಕಾಲೆಳೆದರು.**

**1** ನಾಯಕತ್ವ ಬದಲಾವಣೆ ವಿಚಾರದಲ್ಲಿ ಸಿಎಂ ಸಿದ್ದು ಲಾಕ್ ಮಾಡಿದ ವಿಪಕ್ಷ

**2** ನೀವು ಹುಳಿ ಹಿಂಡುವ ಕೆಲಸ ಮಾಡಬೇಡಿ, ಈಗಲೂ ನಾನೇ ಸಿಎಂ ಮುಂದೆಯೂ ನಾನೇ ಸಿಎಂ ಎಂದು ಘೋಷಣೆ

**3** ನೀವೇ 5 ವರ್ಷ ಸಿಎಂ ಆಗಿರೋದೋ ಪಕ್ಕಾನಾ ಎಂದು ಕಾಲೆಳೆದ ವಿಪಕ್ಷದ ನಾಯಕರು

**ಈಗಲೂ ನಾನೇ, ಮುಂದೆಯೂ ನಾನೇ ಮುಖ್ಯಮಂತ್ರಿ**

**ಐದು ವರ್ಷ ಇರೀ ಎಂದು ಜನ ಆಶೀರ್ವಾದ ಮಾಡಿದ್ದಾರೆ. ಐದು ವರ್ಷ ನಾವೇ ಅಧಿಕಾರದಲ್ಲಿ ಇರುತ್ತೇವೆ. ಐದು ವರ್ಷ ನನಗೆ ಆಶೀರ್ವಾದ ಮಾಡಿದ್ದಾರೆ. 2028ಕ್ಕೆ ನಾವೇ ಅಧಿಕಾರಕ್ಕೆ ಬರುತ್ತೇವೆ ಎಂದು ಸಿಎಂ ಸ್ಪಷ್ಟಪಡಿಸಿದರು. ಈ ವೇಳೆ ಮಧ್ಯಪ್ರವೇಶಿಸಿದ ಸುರೇಶ್ ಕುಮಾರ್, ಸಿಎಂ ನಾವೇ ಐದು ವರ್ಷ. ಅಂತಾ ಏಕವಚನದಿಂದ ಬಹುವಚನಕ್ಕೆ ಬಂದಿದ್ದಾರೆ. ನಾನು ಹೋದಲ್ಲಿ ಮಾತ್ರ ಹೋಗುತ್ತೇನೆ ಎಂಬ ಕನಕದಾಸರ ಮಾತಿನಂತೆ ಆಗಿದೆ ಸಿದ್ದರಾಮಯ್ಯನವರ ಮಾತು ಎಂದು ಕಿಚಾಯಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ನಾನು ಹೋದರೆ ಹೋದೇನೂ ಅಂತಾ ಕನಕದಾಸರು ಹೇಳಿರೋದು. ಕನಕದಾಸರಿಗೂ ನನಗೂ ಹೋಲಿಕೆ ಮಾಡೋಕೆ ಹೋಗಬೇಡಿ. ನಾವು ಸರ್ಕಾರ ರಚನೆ ಮಾಡಿದ್ದೇವೆ. ಸರ್ಕಾರ ಇರುವಾಗ ನಾವು ಅಂತಾ ಹೇಳಬೇಕು, ನನ್ನ ಸರ್ಕಾರ ಅಂತಾ ಅಲ್ಲ. ಹೈಕಮಾಂಡ್ ಹೇಳೋವರೆಗೆ ನಾನೇ ಮುಖ್ಯಮಂತ್ರಿ ಎಂದು ಪುನರುಚ್ಚರಿಸಿದರು.ಈ ವೇಳೆ ಇಲ್ಲೇ ಇರೋದು ಪ್ರಾಬ್ಲಂ. ನಾನೇ ಮುಂದಿನ ಐದು ವರ್ಷ ಸಿಎಂ ಅಂದಿದ್ರಲ್ಲ ನೀವು ಈಗೇನಂತೀರಿ ಎಂದು ಸುನೀಲ್ ಕುಮಾರ್ ಕಾಲೆಳೆದರು. ಆಗ ಸಿಎಂ ಸಿದ್ದರಾಮಯ್ಯ, ಬಿಜೆಪಿಯವರಿಗೆ ನೀವು ಮೂರು ಜನರನ್ನು ಬದಲಾವಣೆ ಮಾಡಿದ್ರಲ್ಲ. ಈವಾಗ್ಲೂ ನಾನೇ ಮುಖ್ಯಮಂತ್ರಿ, ಮುಂದೆನೂ ಮುಖ್ಯಮಂತ್ರಿ ಎಂದು ಸಿಎಂ ಸ್ಪಷ್ಟಪಡಿಸಿದರು.**

# 1600 ಪಿಎಸ್‌ಐ ಹುದ್ದೆಗಳ ನೇಮಕಾತಿಗೆ ಪ್ರಸ್ತಾವನೆ

• ಉದಯವಾಹಿನಿ, ಬೆಂಗಳೂರು

ಪೊಲೀಸ್ ಹುದ್ದೆ ಆಕಾಂಕ್ಷಿಗಳಿಗೆ ಗುಡ್‌ನ್ಯೂಸ್ . 1600 ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳ ನೇಮಕಾತಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂದು ಗೃಹ ಸಚಿವ ಡಾ. ಜಿ ಪರಮೇಶ್ವರ್ ಮಾಹಿತಿ ನೀಡಿದ್ದಾರೆ. ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯುತ್ತಿರುವ ಚಳಿಗಾಲದ ವಿಧಾನಮಂಡಲದ ಅಧಿವೇಶನದಲ್ಲಿ ಮಂಗಳವಾರ ಕಾರ್ಯಕಲಾಪಗಳಲ್ಲಿ ಪೊಲೀಸ್ ಇಲಾಖೆಗೆ ಸಂಬಂಧಿಸಿದಂತೆ ವಿಧಾನಸಭೆಯಲ್ಲಿ ಸದಸ್ಯರು ಕೇಳಿದ ಪ್ರಶ್ನೆಗೆ ಗೃಹ ಸಚಿವರು ಉತ್ತರಿಸಿದರು.

**ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಕೆ:** ರಾಜ್ಯದಲ್ಲಿ ಖಾಲಿ ಇರುವ 1600 ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳ ನೇಮಕಾತಿಗೆ ಅನುಮತಿ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಹಿಂದಿನ ಸರ್ಕಾರದಲ್ಲಿ 545 ಪಿ.ಎಸ್.ಐ ನೇಮಕಾತಿ ವಿಚಾರದಲ್ಲಿ ಗೊಂದಲ ಉಂಟಾಗಿ ನೇಮಕಾತಿ ಪ್ರಕ್ರಿಯೆ ಸ್ಥಗಿತವಾಗಿತ್ತು. ಸದ್ಯ ಸರ್ಕಾರ 947 ಪಿ.ಎಸ್.ಐ ಹುದ್ದೆಗಳನ್ನು ಭರ್ತಿ ಮಾಡಿದೆ. ಆಯ್ಕೆಗೊಂಡ ಅಭ್ಯರ್ಥಿಗಳು ತರಬೇತಿ ಪಡೆಯುತ್ತಿದ್ದಾರೆ ಎಂದು ತಿಳಿಸಿದರು.

**ತರಬೇತಿ ಬಳಿಕ ಶಿವಮೊಗ್ಗದಲ್ಲಿ 32 ಹುದ್ದೆ ನೇಮಕ:** ಶಿವಮೊಗ್ಗ ಜಿಲ್ಲೆಯಲ್ಲಿ ಖಾಲಿ ಇರುವ 42 ಪಿ.ಎಸ್.ಐ ಹುದ್ದೆಗಳ ಪೈಕಿ 32 ಹುದ್ದೆಗಳಿಗೆ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳನ್ನು ನೇಮಕ ಮಾಡಲಾಗುವುದು. ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು 33 ಪೊಲೀಸ್ ಠಾಣೆಗಳಿದ್ದು, 1549 ಹುದ್ದೆಗಳಲ್ಲಿ 1394 ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 155 ಹುದ್ದೆಗಳು ಖಾಲಿಯಿವೆ. ಪೊಲೀಸ್ ಠಾಣೆಗಳ ದಿನನಿತ್ಯದ ಕರ್ತವ್ಯಕ್ಕೆ ತೊಂದರೆಯಾಗದಂತೆ 103 ಗೃಹ ರಕ್ಷಕ ಸಿಬ್ಬಂದಿ ನೇಮಿಸಿಕೊಂಡು ಕರ್ತವ್ಯ ಭಾರವನ್ನು ಸರಿದೂಗಿಸಲಾಗಿದೆ ಎಂದು ಹೇಳಿದರು.



**ಪೊಲೀಸ್ ಹುದ್ದೆ ಆಕಾಂಕ್ಷಿಗಳಿಗೆ ಗುಡ್‌ನ್ಯೂಸ್**

**ಶಿವಮೊಗ್ಗ ನಗರ ವ್ಯಾಪ್ತಿಯಲ್ಲಿ ಪೊಲೀಸ್ ಕಮಿಷನರೇಟ್**

**ಮುಂಬರುವ ದಿನಗಳಲ್ಲಿ ಮಾನದಂಡಗಳನ್ನು ಆಧರಿಸಿ ಶಿವಮೊಗ್ಗ ನಗರ ವ್ಯಾಪ್ತಿಯಲ್ಲಿ ಪೊಲೀಸ್ ಕಮಿಷನರೇಟ್ ಸ್ಥಾಪಿಸುವ ಕುರಿತು ಕ್ರಮ ಕೈಗೊಳ್ಳಲಾಗುವುದು. ಜಿಲ್ಲೆಯ ಕಾನೂನು ಸುವ್ಯವಸ್ಥೆ ಹದಗೆಡದಂತೆ ಕಾಪಾಡಲು ಸ್ಪೆಷಲ್ ಆಕ್ಷನ್ ಫೋರ್ಸ್ ಶಿವಮೊಗ್ಗದಲ್ಲಿ ನಿಯೋಜಿಸಲಾಗಿದೆ ಎಂದು ಉತ್ತರಿಸಿದ್ದಾರೆ.**

# ಕರ್ನಾಟಕ ರಾಜ್ಯದ ಬಾಡಿಗೆ ವಿಧೇಯಕ 2025 ಅಂಗೀಕಾರ

## ■ ಮಾಲೀಕರು, ಬ್ರೋಕರ್‌ಗಳಿಗೆ ಬೀಳುತ್ತೆ ಭಾರೀ ದಂಡ! ಏನೆಲ್ಲಾ ಹೊಸ ನಿಯಮ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ವಿಧಾನಸಭೆ ಅಧಿವೇಶನದಲ್ಲಿ ಮಂಗಳವಾರ ಕರ್ನಾಟಕ ಬಾಡಿಗೆ (ತಿದ್ದುಪಡಿ) 2025 ವಿಧೇಯಕದ ಮೇಲೆ ದೀರ್ಘ ಚರ್ಚೆ ನಡೆಸಿ ಅನುಮೋದನೆ ನೀಡಲಾಗಿದೆ.


ವಿಧೇಯಕವನ್ನು ಸದನದ ಸದಸ್ಯರ ಚರ್ಚೆಗೆ ಮುಂದಿಟ್ಟು ವಿವರಣೆ ನೀಡಿದ ಸಚಿವ ಕೃಷ್ಣ ಬೈರೇಗೌಡ ಅವರು, ''ಇದೊಂದು ಸರಳ ವಿಧೇಯಕ. ಇದರಲ್ಲಿರುವುದು ದೇಶದ ಹಳೆಯ ಕಾನೂನು.

ಬಹುತೇಕ ರಾಜ್ಯಗಳಲ್ಲಿ ಹೋಲಿಕೆ ಇರುವ ಕಾನೂನು. ಈ ಹಿಂದೆ ಕೇಂದ್ರ ಸರ್ಕಾರ ಮಾದರಿ ವಿಧೇಯಕವನ್ನು ರೂಪಿಸಿದ ನಂತರ ಅದನ್ನು ಎಲ್ಲಾ ರಾಜ್ಯಗಳೂ ಒಂದೇ ಮಾದರಿಯಲ್ಲಿ ಅಳವಡಿಸಿಕೊಂಡಿದ್ದವು. ಆದರೆ, ಪ್ರಸ್ತುತ ಈ ವಿಧೇಯಕದಲ್ಲಿ ಕೆಲವು ಸರಳ ತಿದ್ದುಪಡಿಗಳನ್ನು ತರಲಾಗಿದೆ'' ಎಂದರು.

**ಜೈಲು ಶಿಕ್ಷೆ ಇಲ್ಲ; ದಂಡ ಶುಲ್ಕ ಅಧಿಕ**

ಮೂಲ ವಿಧೇಯಕದಲ್ಲಿ ಉಲ್ಲಂಘನೆಯಾದರೆ ಉಲ್ಲಂಘಿಸಿದವರಿಗೆ ಜೈಲು ಶಿಕ್ಷೆ ವಿಧಿಸಲು ಕಾನೂನಿನಲ್ಲಿ ಅವಕಾಶ ಇತ್ತು. ಆದರೆ, ಇಂತಹ ಸಣ್ಣಪುಟ್ಟ ತಪ್ಪಿಗೆ ಜೈಲು ಶಿಕ್ಷೆ ಸರಿಯಲ್ಲ ಎಂಬ ಚರ್ಚೆ ಇದೀಗ ದೇಶದಾದ್ಯಂತ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಈ ತಿದ್ದುಪಡಿಯ ಕರಡನ್ನು ಸಿದ್ಧಪಡಿಸಿ ನಮಗೆ ಕಳಿಸಿಕೊಟ್ಟಿದೆ. ನಾವು ಈ ತಿದ್ದುಪಡಿ ಮೂಲಕ ಹೊಸ ಕಾನೂನುಗಳನ್ನು ಅಳವಡಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇವೆ. ಶಿಕ್ಷೆಯ ರೂಪದಲ್ಲಿ ದಂಡ ಶುಲ್ಕ ಅಧಿಕವಾಗಬಹುದು ಆದರೆ, ಜೈಲಿಗೆ ಹೋಗುವ ಅಂಶವನ್ನು ತೆಗೆದುಹಾಕಲಾಗಿದೆ'' ಎಂದು ತಿಳಿಸಿದರು.

''ಇವತ್ತಿಗೂ ಸಣ್ಣಪುಟ್ಟ ಬಾಡಿಗೆದಾರರಿಗೆ ಶೋಷಣೆ ಆಗುತ್ತಿದೆ ಎಂಬುದು ನಿಜ. ಅಂತವರನ್ನೂ ರಕ್ಷಿಸಲು ಈ ಕಾನೂನಿನಲ್ಲಿ ಅವಕಾಶ ಇದೆ. ಆದರೆ, ನಾವು ಈ ಕಾನೂನನ್ನು ಅನುಸರಣೆ ಮಾಡುವುದನ್ನೇ ಮರೆತಿದ್ದೇವೆ. ನಾವೆಲ್ಲರೂ ಒಟ್ಟಾಗಿ ಈ ಕಾನೂನನ್ನು ಅನುಷ್ಠಾನ ಮಾಡಿದರೆ, ಜನರಿಗೂ ಅರಿವು ಮೂಡಿಸಿದರೆ ಸಣ್ಣ ಬಾಡಿಗೆದಾರರ ಮೇಲಿನ ಶೋಷಣೆಯನ್ನು ಗಣನೀಯವಾಗಿ ತಡೆಯಬಹುದು'' ಎಂದು ಸಚಿವರು ತಿಳಿಸಿದರು.






**ಯಾರಿಗೆ ಅನುಕೂಲ**

**ಬೆಂಗಳೂರು ಸೇರಿದಂತೆ ನಗರಗಳಲ್ಲಿ ಬಾಡಿಗೆ ಮನೆಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಮಾಲೀಕರು, ಬಾಡಿಗೆದಾರರ ನಡುವೆ ಆಗಾಗ ತಕರಾರುಗಳು ಉಂಟಾಗುತ್ತಿವೆ. ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ನೆರವಾಗಲಿದೆ. ಈ ಹೊಸ ನಿಯಮಗಳು ಬಾಡಿಗೆದಾರರು ಮತ್ತು ಮನೆ ಮಾಲೀಕರು ಇಬ್ಬರಿಗೂ ಅನ್ವಯವಾಗಲಿದ್ದು, ನಿಯಮ ಉಲ್ಲಂಘಿಸಿದರೆ ದೊಡ್ಡ ಮೊತ್ತದ ದಂಡ ವಿಧಿಸಲಾಗುತ್ತದೆ. ಬಾಡಿಗೆ ವ್ಯಾಜ್ಯಗಳನ್ನು ಶೀಘ್ರ ಇತ್ಯರ್ಥಪಡಿಸಲು ಫಾಸ್ಟ್ ಟ್ರ್ಯಾಕ್ ವ್ಯವಸ್ಥೆಯನ್ನು ಜಾರಿಗೆ.**

**ಏನೆಲ್ಲಾ ಹೊಸ ನಿಯಮ**

- **ಬಾಡಿಗೆ ಒಪ್ಪಂದಗಳನ್ನು ಆನ್‌ಲೈನ್‌ನಲ್ಲಿ ನೋಂದಾಯಿಸಲು ಪೋರ್ಟಲ್ ಆರಂಭ. ನೋಂದಣಿ ಕಡ್ಡಾಯ.**
- **ಬಾಡಿಗೆದಾರರು ತಮ್ಮ ಮಾಲೀಕರ ಅನುಮತಿಯಿಲ್ಲದೆ ಮನೆಯನ್ನು ಬೇರೆಯವರಿಗೆ ಬಾಡಿಗೆಗೆ ನೀಡಿದರೆ, ಈಗಿರುವ 5000 ರೂಪಾಯಿ ದಂಡವನ್ನು 50,000 ರೂಪಾಯಿಗೆ ಹೆಚ್ಚಿಸಲಾಗಿದೆ. ಇದು ಶೇಕಡಾ 90ರಷ್ಟು ಹೆಚ್ಚಳವಾಗಿದೆ.**
- **ಮನೆ ಮಾಲೀಕರು ಬಾಡಿಗೆದಾರರನ್ನು ಹೊರಹಾಕುವ 3 ತಿಂಗಳು ಮೊದಲು ನೋಟಿಸ್ ನೀಡಬೇಕಾಗುತ್ತದೆ.**
- **ಅನಧಿಕೃತವಾಗಿ ಕಾರ್ಯನಿರ್ವಹಿಸುವ ಬ್ರೋಕರ್‌ಗಳಿಗೂ ಸರ್ಕಾರ ಕಡಿವಾಣ. ಕಾಯ್ದೆಯ ಸೆಕ್ಷನ್ 20ರ ಅಡಿಯಲ್ಲಿ ನೋಂದಣಿ ಮಾಡಿಸದ ಬ್ರೋಕರ್‌ಗಳಿಗೆ ದಿನಕ್ಕೆ 25,000 ರೂಪಾಯಿ ದಂಡ ವಿಧಿಸಲಾಗುತ್ತದೆ.**

**ಈ ದಿನದ ದರ** | ಪೆಟ್ರೋಲ್: 102.92 ₹/L | ಡೀಸೆಲ್ : 90.99 ₹/L | ಬಂಗಾರ: ₹13,386/Gram24ct ₹12,270/Gram22ct | ಬೆಳ್ಳಿ: ₹199.10/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
**ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ**
**ರಾಮೋಹಳ್ಳಿ**

### ಆರ್ಯ - ದ್ರಾವಿಡ ವಾದ

ಭಾರತದ ಮೂಲ ಜನಾಂಗವನ್ನು ಆರ್ಯರು ದ್ರಾವಿಡರು ಎಂದು ವಿಂಗಡಿಸುವುದುಂಟು. ಮಧ್ಯ ಏಷ್ಯಾದ ಪರ್ಷಿಯನ್ ಇಂದಿನ ಇರಾನ್ ದೇಶದಿಂದ ಉತ್ತರ ಭಾರತದ ಸಿಂಧೂನದಿಯ ಕಣಿವೆಯ ಮೂಲಕ ಭಾರತಕ್ಕೆ ಒಲಸೆ ಬಂದವರು ಆರ್ಯರು. ಇವರದು ಸಂಸ್ಕೃತ ಭಾಷೆ ವೈದಿಕ ಸಂಸ್ಕೃತಿ. ದಕ್ಷಿಣ ಭಾರತದ ಮೂಲನಿವಾಸಿ ಜನಾಂಗ ದ್ರಾವಿಡರು. ತಮಿಳು ತೆಲುಗು ಕನ್ನಡ ಮಳಯಾಳಂ ಮುಂತಾದವು ಇವರ ಭಾಷೆಗಳು. ದೇವತೆಗಳು ಆರ್ಯರ ಸೃಷ್ಟಿ. ಆರ್ಯರು ಭಾರತದ ಮೂಲ ಜನಾಂಗವನ್ನು ಕೆಟ್ಟದಾಗಿ ಬಿಂಬಿಸಿ ರಾಕ್ಷಸರೆಂದು ಕರೆದರು ಎಂಬಿತ್ಯಾದಿ ವಿವಾದಗಳಿವೆ. ಆದರೆ ಆಧುನಿಕ ಇತಿಹಾಸಕಾರರು ಇದನ್ನು ಒಪ್ಪುವುದಿಲ್ಲ. ಇತ್ತೀಚಿನ ಸಂಶೋಧನೆಗಳು ಆರ್ಯ ಹಾಗೂ ದ್ರಾವಿಡರ ನಡುವೆ ಕೇವಲ ಭಾಷಾ ಮತ್ತು ಸಾಂಸ್ಕೃತಿಕ ವ್ಯತ್ಯಾಸ ಇವೆ. ಹೊರತು ಕಟ್ಟುನಿಟ್ಟಿನ ಜನಾಂಗೀಯ ವಿಂಗಡನೆ ಇಲ್ಲ, ಈ ಇಬ್ಬರೂ ಭಾರತದ ಜನಸಂಖ್ಯೆಯ ಭಾಗವೇ ಆಗಿದ್ದಾರೆ, ಆಧುನಿಕ ಭಾರತದ ಎಲ್ಲಾ ಜನರು ಆರ್ಯ ಮತ್ತು ದ್ರಾವಿಡ ಮೂಲದ ಡಿಎನ್‌ಎ ಮಿಶ್ರಣ ಹೊಂದಿದ್ದಾರೆ ಎಂದಿವೆ. ಈ ಹಿನ್ನೆಲೆಯಲ್ಲಿ ಹಿಂದುಗಳು ಹೊರಗಿನಿಂದ ಬಂದವರೆಂದು ಭಾವಿಸದೇ ಹಿಂದು - ಹಿಂದುಧರ್ಮವನ್ನು ದ್ವೇಷಿಸದೇ ನಾವೆಲ್ಲ ಒಂದೆಂಬ ವಿಶಾಲ ತಳಹದಿಯ ಮೇಲೆ ಬಾಳುವುದು ಇಂದಿನ ತುರ್ತು ಅಗತ್ಯ.

# ನಮ್ಮ ಮೆಟ್ರೋ ವಿಸ್ತರಣೆ ಬಗ್ಗೆ ಶಾಸಕ ಶರತ್ ಬಚ್ಚೇಗೌಡ ಮಾಹಿತಿ

## ಟಿನ್ ಫ್ಯಾಕ್ಟರಿಯಿಂದ ಕೆಆರ್‌ಪುರ ಮೂಲಕ ಹೊಸಕೋಟೆಗೆ ವಿಸ್ತರಿಸುವಂತೆ ಶಾಸಕ ಸಲಹೆ

• **ಉದಯವಾಹಿನಿ, ಬೆಂಗಳೂರು**

ನಮ್ಮ ಮೆಟ್ರೋ ಮಾರ್ಗವನ್ನು ಹೊಸಕೋಟೆಗೆ ವಿಸ್ತರಣೆ ಮಾಡುವ ಬಗ್ಗೆ ಸರ್ಕಾರ ಹಿಂದಿನ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದೆ. ಈ ನಡುವೆ ಈ ಯೋಜನೆಯನ್ನು ಇನ್ನಷ್ಟು ವೇಗಗೊಳಿಸಲು ಹೊಸಕೋಟೆ ಶಾಸಕ ಶರತ್ ಬಚ್ಚೇಗೌಡ ಅವರು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ್ ಜತೆ ಚರ್ಚೆ ನಡೆಸಿದ್ದಾರೆ.

ಚರ್ಚೆಯ ಬಳಿಕ ಡಿಕೆ ಶಿವಕುಮಾರ್ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಕಾಂಗ್ರೆಸ್ ಸರ್ಕಾರ ಅವಧಿಯಲ್ಲೇ ಹೊಸಕೋಟೆಗೆ ಮೆಟ್ರೋ ವಿಸ್ತರಿಸುವ ಯೋಜನೆ ಸಾಕಾರವಾಗಲಿದೆ ಎಂದು ಶರತ್ ಬಚ್ಚೇಗೌಡ ತಿಳಿಸಿದ್ದಾರೆ. ಇತ್ತೀಚೆಗೆ ಹೊಸಕೋಟೆ ತಾಲ್ಲೂಕಿನ ಅನುಗೊಂಡನಹಳ್ಳಿ ಹೋಬಳಿಯ ದೇವಲಾಪುರ ಗ್ರಾಮದಿಂದ ದೇವನಗುಂದಿ ತನಕ 60 ಲಕ್ಷ ರೂಪಾಯಿ ವೆಚ್ಚದಲ್ಲಿರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ಕಾರ್ಯಕ್ರಮದಲ್ಲಿ ಈ ಬಗ್ಗೆ ಮಾತನಾಡಿದರು.




**60 ಲಕ್ಷ ರೂ. ವೆಚ್ಚದಲ್ಲಿರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ**

**ಟಿನ್ ಫ್ಯಾಕ್ಟರಿಯಿಂದ ಕಾಡುಗೋಡಿವರೆಗೆ ಇರುವ ಮೆಟ್ರೋ ಸೇವೆಯನ್ನು ಟಿನ್ ಫ್ಯಾಕ್ಟರಿಯಿಂದ ಕೆಆರ್‌ಪುರ ಮೂಲಕ ಹೊಸಕೋಟೆಗೆ ವಿಸ್ತರಿಸುವಂತೆ ಸರಕಾರದ ಮೇಲೆ ಒತ್ತಡ ಹೇರಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದರು.**

**ಪಿಡಿಒಗೆ ತರಾಟೆ:** ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಮರ್ಪಕ ಮೂಲಸೌಕರ್ಯಗಳಿಲ್ಲದೆ ಸಾರ್ವಜನಿಕರು ಪರದಾಡುವಂತಾಗಿದ್ದು.

ಈ ಹಿನ್ನೆಲೆಯಲ್ಲಿಶಾಸಕರ ಮುಂದೆಯೇ ದೇವನಗುಂದಿ ಗ್ರಾಮ ಪಂಚಾಯಿತಿಯ ಪಿಡಿಒ ಹರೀಶ್ ಅವರನ್ನು ದೇವಲಾಪುರ ಗ್ರಾಮಸ್ಥರು ತರಾಟೆಗೆ ತೆಗೆದುಕೊಂಡ ಪ್ರಸಂಗ ನಡೆಯಿತು. ಗ್ರಾಮಕ್ಕೆ ಸರಿಯಾದ ರಸ್ತೆ, ಸಮರ್ಪಕ ಚರಂಡಿ ವ್ಯವಸ್ಥೆ ಇಲ್ಲ. 15 ರಿಂದ 20 ದಿನವಾದರೂ ನೀರು ಪೂರೈಸಲ್ಲ. ಕಸ ವಿಲೇವಾರಿ ಸಮಸ್ಯೆ ಇದೆ. ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದರೂ, ಪ್ರಯೋಜನವಾಗುತ್ತಿಲ್ಲ. ಗ್ರಾಮ ಪಂಚಾಯಿತಿ ಅಧಿಕಾರಿ ನಿರ್ಲಕ್ಷ್ಯ ಮತ್ತು ಪಕ್ಷಪಾತ ತೋರುತ್ತಿದ್ದಾರೆ ಎಂದು ದೂರಿದರು.

ಸರಕಾರದಿಂದ ಮಂಜೂರಾಗಿರುವ 1 ಎಕರೆ 2 ಗುಂಟೆ ಸಾರ್ವಜನಿಕ ಸ್ಮಶಾನ ಭೂಮಿ ಗುರಿತಿಸಿಲ್ಲ. ಕೇವಲ 12 ಗುಂಟೆ ಜಾಗದಲ್ಲಿಶವಗಳನ್ನು ಹೂಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರಭಾವಿಗಳು ಸರಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಒತ್ತುವರಿ ತೆರವುಗೊಳಿಸಿ ನಿವೇಶನ ರಹಿತರನ್ನು ಗುರುತಿಸಿ ಹಂಚಿಕೆ ಮಾಡಿ.

ಇನ್ನಾದರೂ ಹುಸಿ ಭರವಸೆ ನೀಡುವುದನ್ನು ಬಿಟ್ಟು ಮೂಲಸೌಲಭ್ಯ ಕಲ್ಪಿಸಿ. ಕನಿಷ್ಠ ಎರಡು ದಿನಕ್ಕೆ ಒಮ್ಮೆಯಾದರೂ ನೀರು ಸರಬರಾಜಿಗೆ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

## ಭಾರತೀಯ ವಿದ್ಯಾಭವನದಲ್ಲಿ ಕು|| ದಿಯಾ ಉದಯ್ ನೃತ್ಯ ಪ್ರದರ್ಶನ

• **ಉದಯವಾಹಿನಿ, ಬೆಂಗಳೂರು**

ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಪರಿಷತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಫೆಡರೇಷನ್ ಆಫ್



ಇಂಟರ್ನ್ಯಾಷನಲ್ ಸ್ಟೂಡೆಂಟ್ಸ್ ಅಸೋಸಿಯೇಷನ್ ಮತ್ತು ಭಾರತೀಯ ವಿದ್ಯಾಭವನ ಇವುಗಳ ಸಂಯುಕ್ತಾಶ್ರಯದಲ್ಲಿ ಡಿಸೆಂಬರ್ 19, ಶುಕ್ರವಾರ ಸಂಜೆ 6-30ಕ್ಕೆ ನಗರದ ರೇಸ್ ಕೋರ್ಸ್ ರಸ್ತೆಯಲ್ಲಿರುವ ಭಾರತೀಯ ವಿದ್ಯಾಭವನದಲ್ಲಿ ಡಾ|| ಸುಪರ್ಣ ವೆಂಕಟೇಶ್ ಅವರ ಶಿಷ್ಯೆ ಯುವ ಪ್ರತಿಭೆ ಕೆಂಪೇಗೌಡ ಪ್ರಶಸ್ತಿ ವಿಜೇತೆ ಕು|| ದಿಯಾ ಉದಯ್ ಅವರ ಭರತನಾಟ್ಯ ಪ್ರದರ್ಶನ ಕಾರ್ಯಕ್ರಮ ಏರ್ಪಡಿಸಲಾಗಿದೆ. (ಉಚಿತ ಪ್ರವೇಶ).

## ಸುತ್ತಮುತ್ತ ಮುಂಜಾನೆ ದಟ್ಟ ಮಂಜು: 48 ವಿಮಾನ ಹಾರಾಟ ವ್ಯತ್ಯಯ

• **ಉದಯವಾಹಿನಿ, ಬೆಂಗಳೂರು**

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಮುತ್ತ ಮುಂಜಾನೆ ದಟ್ಟವಾಗಿ ಮಂಜು ಆವರಿಸಿದ್ದರಿಂದ 48 ವಿಮಾನಗಳ ಹಾರಾಟದಲ್ಲಿ ವ್ಯತ್ಯಯವಾಗಿದೆ. ಬೆಳಗ್ಗೆ 4.39 ರಿಂದ 10.30 ಗಂಟೆವರೆಗೂ ರನ್ ವೇ ಸಂಪೂರ್ಣ ಮಂಜಿನಿಂದ ಆವೃತ್ತವಾಗಿತ್ತು. ಇದರಿಂದಾಗಿ ಎರಡು ಅಂತರ ರಾಷ್ಟ್ರೀಯ ವಿಮಾನ ಹಾಗೂ 46 ದೇಶೀಯ ವಿಮಾನ ತಲುಪುವುದು ವಿಳಂಬವಾಗಿದೆ ಎಂದು ವಿಮಾನ ನಿಲ್ದಾಣದ ವಕ್ತಾರರು ಮಾಹಿತಿ ನೀಡಿದ್ದಾರೆ.

ಹವಾಮಾನ ಇಲಾಖೆ ಪ್ರಕಾರ ಡಿ.15ರಂದು ಬೆಂಗಳೂರಿನಲ್ಲಿ ಕನಿಷ್ಠ ತಾಪಮಾನ 14.6 ಡಿಗ್ರಿ ಸೆಲ್ಸಿಯಸ್ ಇತ್ತು. ಇದು ಸರಾಸರಿ ತಾಪಮಾನಕ್ಕಿಂತ 2.2 ಡಿಗ್ರಿ ಸೆಲ್ಸಿಯಸ್‌ನಷ್ಟು ಕಡಿಮೆ ಎಂದು ಹೇಳಿದೆ. ಅಷ್ಟೇ ಅಲ್ಲದೇ ದೇವನಹಳ್ಳಿ ಸುತ್ತಮುತ್ತ ಹೆದ್ದಾರಿಗಳಲ್ಲಿ ಮುಂಜಾನೆ ಬಹಳ ಹೊತ್ತು ಮಂಜು ಕವಿದಿದ್ದ ಕಾರಣ ವಾಹನಗಳು ನಿಧಾನ ಗತಿಯಲ್ಲಿ ಸಾಗಿದವು.

## ಗ್ರೀನ್ ಕಾರಿಡಾರ್‌ನಲ್ಲಿ ಹೃದಯ ರವಾನೆ

• **ಉದಯವಾಹಿನಿ, ಬೆಂಗಳೂರು**

ಜೀವ ರಕ್ಷಣೆಯ ಮಹತ್ವದ ಕಾರ್ಯಾಚರಣೆಯಾಗಿ ಡೊಡ್ಡನೆಕ್ಕುಂದಿಯ ಕಿಮ್ಸ್ ಆಸ್ಪತ್ರೆಯಿಂದ ವೈಟ್‌ಫೀಲ್ಡ್‌ನ ಆಸ್ಟರ್ ಆಸ್ಪತ್ರೆಗೆ ಗ್ರೀನ್ ಕಾರಿಡಾರ್‌ನಲ್ಲಿ ಹೃದಯವನ್ನು ರವಾನಿಸಲಾಯಿತು. 10ದೊಡ್ಡನಕ್ಕುಂದಿಯ ಕಿಮ್ಸ್ ಆಸ್ಪತ್ರೆಯಿಂದ ಬಿ.ನಾರಾಯಣಪುರ, ಸಿಂಗಯ್ಯನಪಾಳ್ಯ, ಗರುಡಾಚಾರ್‌ಪಾಳ್ಯ, ಹೂಡಿ ವೃತ್ತ, ರಾಜಪಾಳ್ಯ ಮಾರ್ಗವಾಗಿ ವಾಹನ ಸಾಗಿತು. ಒಟ್ಟು ಏಳು ಕಿಮೀ ದೂರವನ್ನು ಏಳು ನಿಮಿಷಗಳಲ್ಲಿ ಕ್ರಮಿಸಿತು. ಮಹದೇವಪುರ ಸಂಚಾರ ಪೊಲೀಸರು ಸಹಕಾರ ನೀಡಿದರು. ವೈದ್ಯರು ಮತ್ತು ಪೊಲೀಸರ ಸಮನ್ವಯದಿಂದ ಹೃದಯವನ್ನು ನಿಗದಿತ ಸಮಯದಲ್ಲಿ ವೈಟ್ ಫೀಲ್ಡ್ ಆಸ್ಟರ್ ಆಸ್ಪತ್ರೆಗೆ ತಲುಪಿಸಲಾಗಿದೆ.

## ಪಿಟಿಸಿಎಲ್ ಪ್ರಕರಣ: 28 ವರ್ಷಗಳ ನಂತರದ ಅರ್ಜಿ ಅಮಾನ್ಯ

• **ಉದಯವಾಹಿನಿ, ಬೆಂಗಳೂರು**

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಮುದಾಯದವರಿಗೆ ಸರ್ಕಾರದಿಂದ ಮಂಜೂರಾದ ಜಮೀನನ್ನು ಮಾರಾಟ ಮಾಡಿದ ಬಳಿಕ ಪರಿಶಿಷ್ಟ ಜಾತಿ ಮತ್ತು ಪಂಗಡಗಳ (ಕೆಲವು ಜಮೀನುಗಳ ಪರಾಭಾರೆ ನಿರ್ಬಂಧ ಪಿಟಿಸಿಎಲ್) ಕಾಯ್ದೆಯಡಿ ಮರು ಸ್ಥಾಪನೆ ಕೋರಿ 28 ವರ್ಷಗಳ ಬಳಿಕ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲು ಅವಕಾಶವಿಲ್ಲ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ಈ ಅವಧಿಯನ್ನು ಸಮಂಜಸ ಅವಧಿ ಎಂದು ಪರಿಗಣಿಸಲು ಆಗದು ಎಂದು ನ್ಯಾಯಮೂರ್ತಿ ಅನು ಶಿವರಾಮನ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಅಭಿಪ್ರಾಯಪಟ್ಟಿದೆ. ಸರ್ಕಾರದಿಂದ ಮಂಜೂರಾಗಿದ್ದ ಜಮೀನನ್ನು ಮಾರಾಟ ಮಾಡಿದ ಬಳಿಕ ಮತ್ತೆ ಜಮೀನಿನ ಮೇಲೆ ತಮ್ಮ ಹಕ್ಕುಗಳನ್ನು ಪುನರ್‌ಸ್ಥಾಪಿಸಿ ಉಪವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿ ಹೊರಡಿಸಿದ್ದ ಆದೇಶ ರದ್ದುಪಡಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಲಾದ ಮೇಲ್ಮನವಿಯಲ್ಲಿ ಈ ಕುರಿತಂತೆ ಆದೇಶಿಸಲಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿಯ ವಿನೋಬಾ ನಗರದ ನಿವಾಸಿಗಳಾದ ಪೂಜಾರಿ ನಾರಾಯಣಪ್ಪ, ಅವರ ವಾರಸುದಾರರು ಸಲ್ಲಿಸಿದ್ದ ಮೇಲ್ಮನವಿಯಲ್ಲಿ ಈ ಕುರಿತಂತೆ ಆದೇಶ ಹೊರಡಿಸಲಾಗಿದೆ.

## ಲೇಔಟ್ ನಿರ್ಮಾಣ ಭೂ ಸ್ವಾಧೀನ ಪ್ರಶ್ನಿಸಿದ್ದ ಅರ್ಜಿ ವಜಾಗೊಳಿಸಿದ ಹೈಕೋರ್ಟ್

• **ಉದಯವಾಹಿನಿ, ಬೆಂಗಳೂರು**

ನಗರದ ಹೆಣ್ಣೂರಿನಲ್ಲಿ ಅರ್ಕಾವತಿ ಬಡಾವಣೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡಿರುವ ಅಪಾರ ಬೆಲೆಬಾಳುವ 26 ಎಕರೆ 12 ಗುಂಟೆ ಜಮೀನನ್ನು ಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲು ಬಿಡಿಎಗೆ ಆದೇಶಿಸುವಂತೆ ಕೋರಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ. ಇದರಿಂದಾಗಿ ನೂರಾರು ಕೋಟಿ ರೂ. ಮೌಲ್ಯದ ಜಮೀನು ಬಿಡಿಎ ಸುಪರ್ದಿಯಲ್ಲಿ ಉಳಿದಂತಾಗಿದೆ. ಭೂ ಮಾಲೀಕರಾದ ಪ್ರೇಮ್ ಸಿಂಗ್, ಅವರ ಪುತ್ರಿ ಬೀಜಾಕ್ಷರಿ ವರ್ಮನ್ ಮತ್ತು ಪುತ್ರ ಶಾಹಿಲ್ ವರ್ಮನ್ ಸಲ್ಲಿಸಿದ್ದ ತಕರಾರು ಅರ್ಜಿ ವಜಾಗೊಳಿಸಿ ನ್ಯಾಯಮೂರ್ತಿ ಡಿ.ಕೆ. ಸಿಂಗ್ ನೇತೃತ್ವದ ವಿಭಾಗೀಯ ಪೀಠ ಆದೇಶಿಸಿದೆ. ಅರ್ಕಾವತಿ ಲೇಔಟ್ ಬಡಾವಣೆ ನಿರ್ಮಾಣಕ್ಕೆ ಭೂ ಸ್ವಾಧೀನಪಡಿಸಿಕೊಳ್ಳಲು ಸರಕಾರ 2003 ರ ಫೆ.3 ರಂದು ಪ್ರಾಥಮಿಕ ಮತ್ತು 2004ರ ಫೆ.23ರಂದು ಅಂತಿಮ ಅಧಿಸೂಚನೆ ಹೊರಡಿಸಿದೆ.

ಈ ಅಧಿಸೂಚನೆಯಂತೆ ಬಿಡಿಎ, ಅರ್ಜಿದಾರರ ಜಮೀನು ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿದೆ. ಈ ಹಿಂದೆ ಭೂಸ್ವಾಧೀನ ಪ್ರಕ್ರಿಯೆಗೆ ತಮ್ಮದೇನೂ ಆಕ್ಷೇಪಣೆ ಇಲ್ಲಹಾಗೂ ಜಮೀನಿಗೆ ಪರಿಹಾರ ಕಲ್ಪಿಸುವಂತೆ ಪ್ರೇಮ್‌ಸಿಂಗ್ ಅವರ ಪತ್ನಿಯೇ ಬಿಡಿಎಗೆ ತಿಳಿಸಿದ್ದರು.

## ರಾಜ್ಯದ ಹಲವು ಕಡೆ ಬೆಳ್ಳಂಬೆಳಗ್ಗೆ ಲೋಕಾಯುಕ್ತ ದಾಳಿ ಹಣ ಕಮೋಡ್‌ಗೆ ಸುರಿದ ಅಧಿಕಾರಿ!

• **ಉದಯವಾಹಿನಿ, ಬೆಂಗಳೂರು**

ಲೋಕಾಯುಕ್ತ ಅಧಿಕಾರಿಗಳು ಬೆಳ್ಳಂಬೆಳಗ್ಗೆ ಹಲವು ಭ್ರಷ್ಟ ಅಧಿಕಾರಿಗಳಿಗೆ ಶಾಕ್ ನೀಡಿದ್ದು, ಶಿವಮೊಗ್ಗ, ಧಾರವಾಡ, ವಿಜಯನಗರ ಸೇರಿದಂತೆ ರಾಜ್ಯದ ಹಲವು ಕಡೆ ಅಧಿಕಾರಿಗಳಿಗೆ ಸೇರಿದ ಮನೆ, ಕಚೇರಿ ಮೇಲೆ ದಾಳಿ ನಡೆಸಿ, ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ. ಅಕ್ರಮ ಆಸ್ತಿಗಳಿಕೆ ಆರೋಪದ ಹಿನ್ನೆಲೆಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ರೂಪ್ಲಾನಾಯ್ಕ್ ಅವರ ಮನೆ ಮೇಲೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ.

ಶಿವಮೊಗ್ಗ ನಗರದ ಬಸವನಗುಡಿ ಪ್ರದೇಶದಲ್ಲಿರುವ ರೂಪ್ಲಾನಾಯ್ಕ್ ಅವರ ನಿವಾಸ, ಗ್ರಾಮೀಣ ಕುಡಿಯುವ ನೀರು, ನೈರ್ಮಲ್ಯ ಇಲಾಖೆಯ ಕಚೇರಿ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ಸುದೀರ್ಘ ಪರಿಶೀಲನೆ ನಡೆಸುತ್ತಿದ್ದಾರೆ.

ಇಂದು ಬೆಳಗ್ಗೆಯಿಂದಲೇ ಅಧಿಕಾರಿಗಳು ದಾಖಲೆಗಳು, ಬ್ಯಾಂಕ್ ಖಾತೆಗಳು, ಆಸ್ತಿ ದಾಖಲೆಗಳು ಸೇರಿದಂತೆ ವಿವಿಧ ದಾಖಲೆಗಳ ಪರಿಶೀಲನೆಯಲ್ಲಿ ತೊಡಗಿದ್ದಾರೆ. ಇದರ ಜೊತೆಗೆ, ರೂಪ್ಲಾನಾಯ್ಕ್ ಅವರ ಕುಟುಂಬ ನೆಲೆಸಿರುವ ಬೆಂಗಳೂರಿನ ನಿವಾಸದ ಮೇಲೂ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದು, ಅಲ್ಲಿ ಕೂಡ ಆಸ್ತಿ ಸಂಬಂಧಿತ ದಾಖಲೆಗಳ ಶೋಧ ಕಾರ್ಯ ಮುಂದುವರಿದಿದೆ.

**ವಿಜಯನಗರದಲ್ಲೂ ರೇಡ್:** ವಿಜಯನಗರ ಡಿಎಚ್‌ಒ ಡಾ. ಎಲ್.ಆರ್. ಶಂಕರ್ ನಾಯ್ಕ್ ಅವರ ಮನೆ, ಕಚೇರಿ ಹಾಗೂ ಪತ್ನಿ ನಿರ್ವಹಿಸುತ್ತಿರುವ ಖಾಸಗಿ ಆಸ್ಪತ್ರೆಯ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ಪರಿಶೀಲನೆ ನಡೆಸಿದರು. ಡಿಎಚ್‌ಒ ಡಾ. ಎಲ್.ಆರ್. ಶಂಕರ್ ನಾಯ್ಕ್ ಅವರು ತಮ್ಮ ಮನೆಯ ಸಮೀಪ ಖಾಸಗಿ ಆಸ್ಪತ್ರೆಯನ್ನು ಸಹ ನಡೆಸುತ್ತಿದ್ದು, ಲೋಕಾಯುಕ್ತ ಅಧಿಕಾರಿಗಳು ಅಲ್ಲಿಗೆ ಸಹ ತೆರಳಿ ಪರಿಶೀಲನೆ ನಡೆಸಿದರು. ಡಿಎಚ್‌ಒ ಅವರ ಪತ್ನಿ ಈ ಆಸ್ಪತ್ರೆಯ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದಾರೆ.




**ಲೋಕಾಯುಕ್ತ ಅಧಿಕಾರಿಗಳು ದಾಳಿ**


**ಬೆಳಗಾವಿ ಕೃಷಿ ಇಲಾಖೆ ಜಂಟಿ ನಿರ್ದೇಶಕರಾಗಿರುವ ರಾಜಶೇಖರ್ ಅವರ ಧಾರವಾಡದ ಸಿಲ್ವರ್ ಆರ್ಚೆಡ್ ಬಡಾವಣೆಯಲ್ಲಿರುವ ನಿವಾಸದ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ರಾಜಶೇಖರ್ ಅವರಿಗೆ ಸೇರಿದ ಒಟ್ಟು ಮೂರು ಕಡೆ ದಾಳಿ ನಡೆದಿದೆ. ರಾಣಿ ಚೆನ್ನಮ್ಮ ನಗರದಲ್ಲಿರುವ ರಾಜಶೇಖರ್‌ಗೆ ಸೇರಿದ ಖಾಸಗಿ ಕಚೇರಿ, ಯರಿಕೊಪ್ಪ ಗ್ರಾಮದ ಬಳಿಯ ಫಾರ್ಮ್ ಹೌಸ್ ಮೇಲೂ ದಾಳಿ ನಡೆಸಲಾಗಿದೆ. ಲೋಕಾಯುಕ್ತ ಸಿಬ್ಬಂದಿ ಕಂಡು ಬೆದರಿದ ರಾಜಶೇಖರ್ ಅವರು ಸುಮಾರು 50 ಸಾವಿರ ರೂ. ಹಣವನ್ನು ಕಮೋಡ್‌ಗೆ ಸುರಿದು ಫ್ಲಶ್ ಮಾಡಿದ್ದಾರೆ. ಸುಮಾರು ಅರ್ಧಗಂಟೆ ಕಾಲ ಲೊಕಾಯುಕ್ತ ಪೊಲೀಸರನ್ನು ಮನೆ ಹೊರಗೆ ಕಾಯಿಸಿ ಬಳಿಕ ಬಾಗಿಲು ತೆಗೆದಿದ್ದಾರೆ ಎನ್ನಲಾಗಿದೆ.**

## ರಾಜಕೀಯ ಲಾಭ ಆಗುವ ರೀತಿಯಲ್ಲಿ ವಾರ್ಡ್ ವಿಂಗಡಣೆ

• **ಉದಯವಾಹಿನಿ, ಬೆಂಗಳೂರು**

ಗ್ರೇಟರ್ ಬೆಂಗಳೂರು ಆಡಳಿತ ತಿದ್ದುಪಡಿ ಮಸೂದೆ ಸಂವಿಧಾನ ವಿರೋಧಿಯಾಗಿದೆ.

ಈ ಕೂಡಲೇ ಇದನ್ನು ವಾಪಸ್ ಪಡೆಯಬೇಕು ಎಂದು ಜೆಡಿಎಸ್ ನಗರ ಘಟಕದ ಅಧ್ಯಕ್ಷ ಎಚ್.ಎಂ. ರಮೇಶ್ ಅವರು ಒತ್ತಾಯಿಸಿದ್ದಾರೆ. ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಅವರು, ಹಾಗೂ ಕಾಂಗ್ರೆಸ್‌ಗೆ ರಾಜಕೀಯ ಲಾಭ ಆಗುವ ರೀತಿಯಲ್ಲಿ ವಾರ್ಡ್ ವಿಂಗಡಣೆ




ಮಾಡಲಾಗಿದೆ. ಈ ವಿಂಗಡಣೆಯು ಸಾಕಷ್ಟು ನ್ಯೂನತೆಗಳಿಂದ ಕೂಡಿದೆ. ಬೆಂಗಳೂರು ಅಭಿವೃದ್ಧಿಗೆ ಮಾರಕವಾಗಿರುತ್ತದೆ ಎಂದು ಆರೋಪಿಸಿದರು.

ಚುನಾವಣೆ ನಡೆಸಲು ಹೊಸ ವಾರ್ಡ್‌ಗಳಿಗೆ ಕಾರ್ಪೊರೇಟರ್‌ಗಳನ್ನು ನಾಮನಿರ್ದೇಶನ ಮಾಡಲು ಸಂವಿಧಾನವು ಸರ್ಕಾರಕ್ಕೆ ಅವಕಾಶ ನೀಡುವುದಿಲ್ಲ.

74ನೇ ತಿದ್ದುಪಡಿ ಕಾಯ್ದೆ, ಹಾಗೂ 1992ರಿಂದ ಸ್ಥಾಪಿಸಲ್ಪಟ್ಟ ಪುರಸಭೆಯನ್ನು ನಿಯಂತ್ರಿಸುವ ಮೂಲಭೂತ ತತ್ವವೆಂದರೆ ಎಲ್ಲಾ ವಾರ್ಡ್ ಪ್ರತಿನಿಧಿಗಳಿಗೆ ನೇರ ಚುನಾವಣೆಗೆ ಸ್ಪರ್ಧಿಸುವ ಅವಕಾಶ ಇರುತ್ತದೆ ಎಂದು ಅವರು ತಿಳಿಸಿದ್ದಾರೆ.

## ಕ್ರಿಸ್ತು ಜಯಂತಿ ವಿಶ್ವವಿದ್ಯಾಲಯಕ್ಕೆ ಚಾಲನೆ




• **ಉದಯವಾಹಿನಿ, ಬೆಂಗಳೂರು**

ಕ್ರಿಸ್ತು ಜಯಂತಿ ಕಾಲೇಜು ಡೀಮ್ಸ್ ಟು ಬಿ ವಿಶ್ವವಿದ್ಯಾಲಯವಾಗಿ ಕಾರ್ಯಾರಂಭಿಸಿದೆ.ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯವು ಕ್ರಿಸ್ತು ಜಯಂತಿ ಡೀಮ್ಸ್ ಟುಬಿ ವಿಶ್ವವಿದ್ಯಾಲಯಕ್ಕೆ ಅನುಮೋದನೆ ನೀಡಿರುವುದರಿಂದ, ಅದರ ಐತಿಹಾಸಿಕ ಮೈಲಿಗಲ್ಲಿನ ಸ್ಮರಣೆಗಾಗಿ ಉದ್ಘಾಟನಾ ಸಮಾರಂಭ' ಆಯೋಜಿಸಲಾಗಿತ್ತು.

ವಿಶ್ವವಿದ್ಯಾಲಯದ ಲೋಗೊ ಬಿಡುಗಡೆ ಮಾಡಿ ಮಾತನಾಡಿದ ದಿ ಹಿಂದೂ ಪತ್ರಿಕೆಯ ಮಾಜಿ ಸಂಪಾದಕ ಎನ್. ರಾಮ್, ಗುಣಮಟ್ಟದ ಶಿಕ್ಷಣ ನೀಡಲು ಮತ್ತು ಸಮಾಜದ ಎಲ್ಲಾ ವರ್ಗದ ಜನರಿಗೆ ಶಿಕ್ಷಣ ಲಭ್ಯವಾಗುವಂತೆ ಮಾಡಲು ವಿಶ್ವವಿದ್ಯಾಲಯ ಕೈಗೊಂಡಿರುವ ಕಾರ್ಯಗಳನ್ನು ಶ್ಲಾಘಿಸಿದರು. ಮುಖ್ಯ ಮಾನವ ಸಂಪನ್ಮೂಲ ಅಧಿಕಾರಿ ಜೋಶಿ ಮ್ಯಾಥ್ ರಚಿಸಿರುವ ಲುಮಿನೆಸೆನ್ಸ್ ಕ್ರಿಸ್ತು ಜಯಂತಿ ವಿಶ್ವವಿದ್ಯಾಲಯದ ಬೆಳ್ಳಿ ಪಯಣ ಎಂಬ ಕೃತಿಯನ್ನು ಕ್ರಿಸ್ತು ಜಯಂತಿ ವಿಶ್ವವಿದ್ಯಾಲಯದ ಕುಲಪತಿ ಅಗಸ್ಟೀನ್ ಜಾರ್ಜ್ ಬಿಡುಗಡೆ ಮಾಡಿದರು.

ಕಾರ್ಮೆಲೈಟ್ಸ್ ಆಫ್ ಮೇರಿ ಇಮ್ಮಾಕ್ಯುಲೇಟ್ (ಸಿಎಂಐ) ಸಭೆಯ ಪ್ರಿಯರ್ ಜನರಲ್ ಥಾಮಸ್ ಚಾಥಂಪರಂಪಿಲ್ ಅವರು, ವಿದ್ಯಾರ್ಥಿಗಳಿಗೆ ಅಂತರ್ಗತ ಮತ್ತು ಸಮಗ್ರ ಜೀವನ ಶಿಕ್ಷಣವನ್ನು ಬೆಳೆಸುವಲ್ಲಿ ವಿಶ್ವವಿದ್ಯಾನಿಲಯದ ಪಾತ್ರದ ಬಗ್ಗೆ ಒತ್ತಿಹೇಳಿದರು.

ಕ್ರಿಸ್ತು ಜಯಂತಿ ವಿಶ್ವವಿದ್ಯಾಲಯದ ಕುಲಾಧಿಪತಿ ಅಬ್ರಹಾಂ ವೆಟ್ಟಿಯಂಕಲ್ ಭಾಗವಹಿಸಿದ್ದರು. ಸಂಸ್ಥೆಯ ಎಲ್ಲಾ ಮಾಜಿ ಪ್ರಾಂಶುಪಾಲರು, ಸಿಎಂಐ ಸಭೆಯ ಮಿಷನರಿಗಳನ್ನು ಈ ಸಂದರ್ಭದಲ್ಲಿ ಗೌರವಿಸಲಾಯಿತು.

## ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ಪಲ್ಸ್ ಪೋಲಿಯೊ ಅಭಿಯಾನ

• **ಉದಯವಾಹಿನಿ, ಬೆಂಗಳೂರು**

ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯಲ್ಲಿ ಇದೇ ಡಿಸೆಂಬರ್ 21 ರಿಂದ 24 ರವರೆಗೆ 4 ದಿನಗಳ ಕಾಲ 'ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನ' ನಡೆಯಲಿದೆ. ಡಿಸೆಂಬರ್ 21 ರಿಂದ 24 ರವರೆಗೆ ಆಯೋಜಿಸಲಾಗಿರುವ ರಾಷ್ಟ್ರೀಯ ಪಲ್ಸ್ ಪೋಲಿಯೊ ಕಾರ್ಯಕ್ರಮದಡಿಯಲ್ಲಿ, ಕರ್ನಾಟಕ ಆರೋಗ್ಯ ಇಲಾಖೆಯು ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ (ಜಿಬಿಎ) ತನ್ನ ಐದು ನಿಗಮಗಳ ಮೂಲಕ ಒಟ್ಟು 11,34,988 ಮಕ್ಕಳಿಗೆ ಲಸಿಕೆ ಹಾಕುವ ಗುರಿಯನ್ನು ನೀಡಿದೆ.

ನಗರದಲ್ಲಿನ ನಿರ್ಮಾಣ ಕಾರ್ಮಿಕರ ಮಕ್ಕಳು ಲಸಿಕೆಯಿಂದ ವಂಚಿತರಾಗದಂತೆ ನೋಡಿಕೊಳ್ಳಲು, ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಶನ್ (ಬಿಎಎಫ್) ಮತ್ತು ಕಾನ್ಫೆಡರೇಶನ್ ಆಫ್ ರಿಯಲ್ ಎಸ್ಟೇಟ್ ಡೆವಲಪರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಕ್ರೆಡೈ) ಜೊತೆ ಜಿಬಿಎ ಚರ್ಚಿಸಿದೆ ಎಂದು ಜಿಬಿಎ ಮುಖ್ಯ ಆರೋಗ್ಯ ಅಧಿಕಾರಿ ಡಾ. ಸಿರಾಜುದ್ದೀನ್ ಮದನಿ ತಿಳಿಸಿದ್ದಾರೆ.

ಮಕ್ಕಳು ಲಸಿಕೆಯಿಂದ ವಂಚಿತರಾಗುವ ಸಾಧ್ಯತೆ ಹೆಚ್ಚಿರುವುದರಿಂದ ನಿರ್ಮಾಣ ಸ್ಥಳಗಳು





ಮತ್ತು ಕೊಳೆಗೇರಿಗಳನ್ನು ಹೆಚ್ಚಿನ ಅಪಾಯದ ತಾಣಗಳೆಂದು ಪರಿಗಣಿಸಲಾಗುತ್ತದೆ. ನಗರದಲ್ಲಿ ಹಲವಾರು ಮೆಗಾ ನಿರ್ಮಾಣ ಯೋಜನೆಗಳು ನಡೆಯುತ್ತಿವೆ, ಅಲ್ಲಿ ನೂರಾರು ಕಾರ್ಮಿಕರು, ಮುಖ್ಯವಾಗಿ ವಲಸಿಗರು ಕೆಲಸ ಮಾಡುತ್ತಿದ್ದಾರೆ. ಈ ಎಲ್ಲಾ ಕಾರ್ಮಿಕರ ಮಕ್ಕಳಿಗೆ ಲಸಿಕೆ ಹಾಕಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ನಾವು ಕಾನ್ಫೆಡರೇಶನ್ ಆಫ್ ರಿಯಲ್ ಎಸ್ಟೇಟ್ ಡೆವಲಪರ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ ಸಹಾಯವನ್ನು ಕೋರಿದ್ದೇವೆ. ಇದಲ್ಲದೆ, ಬಿಎಎಫ್ ಸಹಾಯದಿಂದ 2,700 ಕ್ಕೂ ಹೆಚ್ಚು ಅಪಾರ್ಟ್‌ಮೆಂಟ್‌ಗಳನ್ನು ಪರಿಶೀಲಿಸುವ ಗುರಿ ಹೊಂದಿದ್ದೇವೆ ಎಂದು ಡಾ. ಮದನಿ ತಿಳಿಸಿದರು.

## ಬೆಂಗಳೂರಿನಲ್ಲಿ ಡಿಜಿಟಲ್ ಅರೆಸ್ಟ್‌ಗೊಳಗಾದ ಟೆಕ್ಕಿ

• **ಉದಯವಾಹಿನಿ, ಬೆಂಗಳೂರು**

ಡಿಜಿಟಲ್ ಅರೆಸ್ಟ್ ಬಗ್ಗೆ ಸರ್ಕಾರ ನಾನಾ ರೀತಿಯಲ್ಲಿ ಜಾಗೃತಿ ಮೂಡಿಸುತ್ತಲೇ ಇದೆ. ಹೀಗಿದ್ದರೂ ಸಹ ಬಂಧನಕ್ಕೊಳಗಾದ ವೈದ್ಯರು, ಸಾಫ್ಟ್‌ವೇರ್ ಇಂಜಿನಿಯರ್‌ಗಳು, ಉದ್ಯಮಿಗಳು ಹಣವನ್ನು ಕಳೆದುಕೊಳ್ಳುತ್ತಿದ್ದಾರೆ. ಸದ್ಯ ಇದರಿಂದ ಬೆಂಗಳೂರಿನಲ್ಲಿ ಮಹಿಳಾ ಟೆಕ್ಕಿಯೊಬ್ಬರು ತಮ್ಮ ಸ್ವಂತ ಫ್ಲ್ಯಾಟ್, ಸೈಟ್‌ಗಳನ್ನು ಮಾರಾಟ ಮಾಡಿ ಸುಮಾರು 2 ಕೋಟಿ ರೂ. ಹಣ ಕಳೆದುಕೊಂಡ ಘಟನೆ ಬೆಳಕಿಗೆ ಬಂದಿದೆ. ಎರಡು ಕೋಟಿ ಕಳೆದುಕೊಂಡ ಮಹಿಳಾ ಟೆಕ್ಕಿ ಬಬಿತಾ ದಾಸ್ ಉಳಿದುಕೊಂಡಿರುವುದು ವಿಜ್ಞಾನನಗರದಲ್ಲಿ. ಅವರಿಗೆ 10 ವರ್ಷದ ಮಗನಿದ್ದಾನೆ.

**ಕೊರಿಯರ್ ಅಧಿಕಾರಿ ಸೋಗಿನಲ್ಲಿ ಕರೆ:** ಕಳೆದ ಜೂನ್ ತಿಂಗಳಲ್ಲಿ ಟೆಕ್ಕಿಗೆ, ಬ್ಲೂಡಾರ್ಟ್ ಕೊರಿಯರ್ ಹೆಸರಿನಲ್ಲಿ ಕರೆ ಬಂದಿತ್ತು. ಅಧಿಕಾರಿಯ ಸೋಗಿನಲ್ಲಿ ಕರೆ ಮಾಡಿದ ವ್ಯಕ್ತಿಯೊಬ್ಬ, ನಿಮ್ಮ ಆಧಾರ್ ಕಾರ್ಡ್‌ಗೆ ಲಿಂಕ್ ಆಗಿರುವ ಬ್ಯಾಗ್ ಒಂದನ್ನು ಸೀಜ್ ಮಾಡಲಾಗಿದ್ದು, ಅದರಲ್ಲಿ ಅನುಮಾನಾಸ್ಪದ ವಸ್ತುಗಳಿವೆ ಎಂದು ಬೆದರಿಕೆ ಹಾಕಿದ್ದ. ಕೊರಿಯರ್ ಹೆಸರಿನಲ್ಲಿ ಬಂದ ಕರೆಯನ್ನು ಮುಂಬೈ ಪೊಲೀಸ್ ಅಧಿಕಾರಿಗಳ ಸೋಗಿನಲ್ಲಿದ್ದ ವ್ಯಕ್ತಿಗಳಿಗೆ ವರ್ಗಾಯಿಸಲಾಯಿತು.




**ದೂರು ದಾಖಲಿಸಿಕೊಂಡ ಪೊಲೀಸರು**

ಈ ವಂಚಕರು ಮಹಿಳೆಯನ್ನು ಬಂಧಿಸುವುದಾಗಿ ಬೆದರಿಸಿದ್ದಲ್ಲದೆ, ಪರಿಶೀಲನೆ ಪೂರ್ಣಗೊಳ್ಳುವರೆಗೂ ಮನೆಯಿಂದ ಹೊರಗೆ ಬರದಂತೆ ನಿರ್ಬಂಧ ಹೇರಿ ಡಿಜಿಟಲ್ ಅರೆಸ್ಟ್ ಮಾಡಿದ್ದರು. ಅಲ್ಲದೆ, ಮೊಬೈಲ್‌ನಲ್ಲಿ ನಿರ್ದಿಷ್ಟ ಅಪ್ಲಿಕೇಶನ್ ಒಂದನ್ನು ಇನ್‌ಸ್ಟಾಲ್ ಮಾಡುವಂತೆ ಸೂಚಿಸಿದ್ದರು.

**ಮಗನ ಮುಂದಿಟ್ಟುಕೊಂಡು ಬೆದರಿಕೆ:** ತನಿಖೆಗೆ ಸಹಕರಿಸದೇ ಹೋದೆ ಅದರ ಪರಿಣಾಮವನ್ನು ನಿಮ್ಮ ಎದುರಿಸುತ್ತಾನೆ. ಅವನ ಭವಿಷ್ಯಕ್ಕೆ ಇದು ಖಂಡಿತ ತೊಂದರೆಯಾಗಬಹುದು ಎಂದು ಬೆದರಿಕೆ ಹಾಕಿದ್ದರು. ಮಗನಿಗೆ ಯಾವುದೇ ಸಮಸ್ಯೆಯಾಗಕೂಡದು ಎಂದು ಬಬಿತಾ ಅವರು ವಂಚಕರು ಹೇಳುವ ಎಲ್ಲಾ ಆದೇಶಗಳನ್ನು ಪಾಲಿಸಲು ಒಪ್ಪಿಕೊಂಡರು.

**ಸೈಟ್, ಫ್ಲ್ಯಾಟ್ ಎಲ್ಲಾ ಹೋಯ್ತು:** ಸೈಬರ್ ವಂಚಕರ ಬೇಡಿಕೆಯಂತೆ ಬಬಿತಾ ಅವರು ಮಾಲೂರಿನಲ್ಲಿದ್ದ ತಮ್ಮ 2 ನಿವೇಶನಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿದರು.

ಅಷ್ಟೇ ಅಲ್ಲದೆ, ತಾವು ವಾಸವಿದ್ದ ವಿಜ್ಞಾನ ನಗರದ ಫ್ಲಾಟ್ ಅನ್ನು ಸಹ ಮಾರಾಟ ಮಾಡಿದರು. ಇದರ ಜೊತೆಗೆ ಬ್ಯಾಂಕ್‌ನಿಂದ ಸಾಲವನ್ನೂ ಪಡೆದರು. ಹೀಗೆ ಆಸ್ತಿ ಮಾರಾಟದಿಂದ ಬಂದ ಹಣ ಮತ್ತು ಸಾಲದ ಹಣ ಸೇರಿದಂತೆ ಒಟ್ಟು ಸುಮಾರು 2 ಕೋಟಿ ರೂ.ಗಳನ್ನು ವಂಚಕರ ಖಾತೆಗಳಿಗೆ ವರ್ಗಾಯಿಸಿದ್ದಾರೆ

**ನಿಮ್ಮ ಹಣವನ್ನು ಹಿಂಪಡೆಯಲು ಹತ್ತಿರದ ಪೊಲೀಸ್ ಠಾಣೆಯನ್ನು ಸಂಪರ್ಕಿಸಿ ಎಂದು ಸೈಬರ್ ವಂಚಕರು ಫೋನ್ ಸ್ವಿಚ್ ಆಫ್ ಮಾಡಿಕೊಂಡಿದ್ದಾರೆ. ಆಗ ಮಹಿಳಾ ಟೆಕ್ಕಿಗೆ ತಾನು ಮೋಸ ಹೋಗಿರುವುದು ಅರಿವಿಗೆ ಬಂದಿದೆ. ಕೂಡಲೇ ಬಬಿತಾ ದಾಸ್ ಅವರು ವೈಟ್‌ಫೀಲ್ಡ್ ಸೈಬರ್ ಕ್ರೈಮ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಸದ್ಯ ಪೊಲೀಸರು ದೂರು ದಾಖಲಿಸಿಕೊಂಡಿದ್ದು ತನಿಖೆ ಮುಂದುವರೆಸಿದ್ದಾರೆ.**

# ರೈಲ್ವೆ ಕಂಟೋನ್ಮೆಂಟ್ ಕಾಲೋನಿಯಲ್ಲಿ ಮರ ಕಡಿಯಲು ಅನುಮತಿ ಇಲ್ಲ

## ಕಂಟೋನ್ಮೆಂಟ್: ಜೆಸಿಬಿಯಿಂದ ಸಣ್ಣ ಮರಗಳ ತೆರವು: ಪೊಲೀಸರ ಸ್ಪಷ್ಟನೆ

• **ಉದಯವಾಹಿನಿ, ಬೆಂಗಳೂರು**

ರೈಲ್ವೆ ಕಂಟೋನ್ಮೆಂಟ್ ಕಾಲೋನಿಯಲ್ಲಿ ಮರಗಳನ್ನು ಕಡಿಯಲು ಅರಣ್ಯ ಇಲಾಖೆ ಅನುಮತಿ ನೀಡಿಲ್ಲ ಎಂದು ಹೈಗ್ರೆಂಡ್ ಪೊಲೀಸರು ತಿಳಿಸಿದ್ದಾರೆ. ರೈಲ್ವೆ ಕಂಟೋನ್ಮೆಂಟ್ ಕಾಲೋನಿಯಲ್ಲಿ 371 ಮರಗಳ ಪ್ರದೇಶವನ್ನು ಜೀವವೈವಿಧ್ಯ ಪಾರಂಪರಿಕ ತಾಣ ಎಂದು ಹೊರಡಿಸಿದ್ದ ಅಧಿಸೂಚನೆಯನ್ನು ಅರಣ್ಯ ಇಲಾಖೆ ವಾಪಸ್ ಪಡೆದ ನಂತರ, ಜೆಸಿಬಿಗಳು ಮರಗಳನ್ನು ತೆರವು ಮಾಡುತ್ತಿವೆ ಎಂದು ಹೇಳಲಾಗಿದೆ.

ಕಾಲೋನಿಯಲ್ಲಿ ಜೆಸಿಬಿ ಬಂದಿರುವುದನ್ನು ಗಮನಿಸಿದ ಪರಿಸರ ಕಾರ್ಯಕರ್ತರು, ನಮ್ಮನ್ನು ಒಳಗೆ ಬಿಡುತ್ತಿಲ್ಲ. ದಯವಿಟ್ಟು ಇಲ್ಲೇನಾಗುತ್ತಿದೆ ಎಂಬುದರ ಮಾಹಿತಿ ನೀಡಿ ಎಂದು ಹೈಗ್ರೆಂಡ್ಸ್ ಪೊಲೀಸರ ಮೊರೆ ಹೋಗಿದ್ದರು.

ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲಿಸಿ, ಮರಗಳನ್ನು ಕಡಿಯಲು ಅನುಮತಿ ನೀಡಿಲ್ಲ. ಸಣ್ಣ ಮರಗಳನ್ನು ತೆರವು ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ ಎಂದು ಪರಿಸರ ಕಾರ್ಯಕರ್ತರು ಮಾಹಿತಿ ನೀಡಿದರು.

ಕಂಟೋನ್ಮಂಟ್ ಕಾಲೋನಿಯಲ್ಲಿ 371 ಮರಗಳಿರುವ 8.61 ಎಕರೆ ಪ್ರದೇಶವನ್ನು ಜೀವವೈವಿಧ್ಯ ಪಾರಂಪರಿಕ

**ಸಣ್ಣ ಮರಗಳನ್ನು ತೆರವು**




ತಾಣ ಎಂದು ಘೋಷಿಸಿ, 2025ರ ಸೆಪ್ಟೆಂಬರ್ 10ರಂದು ಅಧಿಸೂಚಿಸಲಾಗಿತ್ತು. ಈ ಆದೇಶವನ್ನು ಯಾವುದೇ ಕಾರಣ ನೀಡದೆ ಡಿ.6ರಂದು ಅರಣ್ಯ ಇಲಾಖೆಯು ಹಿಂಪಡೆದಿದೆ.

ಆರ್‌ಎಲ್‌ಡಿಎ ಅವರು ಅರಣ್ಯ ಇಲಾಖೆಗೆ ಪತ್ರ ಬರೆದು, ರೈಲ್ವೆ ಕಾಯ್ದೆಯ ಪ್ರಕಾರ, ರೈಲ್ವೆ ಭೂಮಿಯನ್ನು ರಾಜ್ಯ ಸರ್ಕಾರ ಪಡೆಯಲು ಅಥವಾ ಅದನ್ನು ಸಂರಕ್ಷಿಸುವಂತೆ ಅಧಿಸೂಚನೆ ಮಾಡಲು ಬರುವುದಿಲ್ಲ. ರೈಲ್ವೆ ಯೋಜನೆಗಳಿಗೆ ಇಲ್ಲಿ ಕಟ್ಟಡ ನಿರ್ಮಾಣ ಅಗತ್ಯವಾಗಿದ್ದು ಹಾಗೂ ಯೋಜನೆ ಮುಂದುವರಿಯಬೇಕಾಗಿದೆ. ಜೀವವೈವಿಧ್ಯ ಪಾರಂಪರಿಕ ತಾಣ ಎಂದು ನೀವು ಘೋಷಿಸಲು ಬರುವುದಿಲ್ಲ ಎಂದು ರೈಲ್ವೆ ಕಾಯ್ದೆಯನ್ನು ಉಲ್ಲೇಖಿಸಿದ್ದರು.

ಇದರಿಂದ ವಿಚಲಿತರಾದ ಅರಣ್ಯ ಇಲಾಖೆ ಅಧಿಕಾರಿಗಳು, ಯಾವುದೇ ವಿವರಣೆ ನೀಡದೆ, ಅರಣ್ಯ ಸಚಿವರಿಗೆ ಮಾಹಿತಿಯನ್ನೂ ನೀಡದೆ ಜೀವವೈವಿಧ್ಯ ಪಾರಂಪರಿಕ ತಾಣದ ಅಧಿಸೂಚನೆಯನ್ನು ವಾಪಸ್ ಪಡೆದಿದ್ದಾರೆ. ರೈಲ್ವೆ ಸಚಿವಾಲಯದೊಂದಿಗೆ ಮಾತುಕತೆ ನಡೆಸಿ, ಹಾಗೂ ಸೂಕ್ತ ತೀರ್ಮಾನ ಕೈಗೊಳ್ಳಲಾಗುತ್ತದೆ ಎಂದೂ ಹೇಳದೆ ಎಲ್ಲಾ ಹಾದಿಗಳೂ ಮುಚ್ಚಿದ ಹಾಗೆ ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳು ವರ್ತಿಸಿದ್ದಾರೆ ಎಂದು ಪರಿಸರ ಕಾರ್ಯಕರ್ತರು ದೂರಿದ್ದಾರೆ.

371 ಮರಗಳನ್ನು ಕಡಿತ ಮಾಡದೆ ಸ್ಥಳಾಂತರ ಮಾಡಲು ಪ್ರಯತ್ನಿಸಲಾಗುತ್ತದೆ ಎಂದು ಆರ್‌ಎಲ್‌ಡಿಎ ಪತ್ರದಲ್ಲಿ ತಿಳಿಸಿದೆ. ಆದರೆ, ಅದನ್ನು ಸ್ಥಳಾಂತರ ಮಾಡುವುದು ಸಾಧ್ಯವಿಲ್ಲ. ಅರಣ್ಯ ಸಚಿವರು ರೈಲ್ವೆ ಸಚಿವರು ಹಾಗೂ ಸಚಿವಾಲಯದೊಂದಿಗೆ ಮಾತುಕತೆ ನಡೆಸಿ ಹಾಗೂ 371 ಮರಗಳನ್ನು ಉಳಿಸಲು ಕ್ರಮ ಕೈಗೊಳ್ಳಬೇಕು ಎಂದು ಪರಿಸರಕ್ಕಾಗಿ ನಾವು ಸಂಘಟನೆಯ ಅಧ್ಯಕ್ಷ ಎ.ಟಿ. ರಾಮಸ್ವಾಮಿ ಆಗ್ರಹಿಸಿದರು.

ಅರಣ್ಯ ಇಲಾಖೆಯ ಅಧಿಕಾರಿಗಳು ಏನೂ ಗೊತ್ತಿಲ್ಲದೆ ಅಧಿಸೂಚನೆ ಮಾಡಿದ್ದಾರೆ ಎಂಬುದು ಸುಳ್ಳು. ರಾಜಕೀಯ ಹಾಗೂ ರಿಯಲ್ ಎಸ್ಟೇಟ್ ಮಾಫಿಯಾಗೆ ಮಣಿದು ವರ್ತಿಸುತ್ತಿದ್ದಾರೆ. ಸಚಿವರು ಹಾಗೂ ಮುಖ್ಯಮಂತ್ರಿಯವರು ಮಧ್ಯಪ್ರವೇಶಿಸಿ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

**ಕಾನೂನು ತೊಡಕು**

**ರೈಲು ಭೂ ಅಭಿವೃದ್ಧಿ ಪ್ರಾಧಿಕಾರ (ಆರ್‌ಎಲ್‌ಡಿಎ) 8.61 ಎಕರೆ ಭೂಮಿಯನ್ನು 60 ವರ್ಷಕ್ಕೆ ಬಾಗ್ಮನೆ ಟೆಕ್‌ವರ್ಥ್ ಅವರಿಗೆ ಗುತ್ತಿಗೆಗೆ ನೀಡಿದೆ. ಅವರು ವಾಣಿಜ್ಯ ಸಂಕೀರ್ಣ ನಿರ್ಮಿಸಲು 368 ಮರಗಳನ್ನು ಕಡಿಯಲು ಮುಂದಾದಾಗ ಪರಿಸರಕ್ಕಾಗಿ ನಾವು ಸಂಘಟನೆ ಸೇರಿದಂತೆ ಪರಿಸರ ಕಾರ್ಯಕರ್ತರು ಹೋರಾಟ ನಡೆಸಿದರು. ಇದಕ್ಕೆ ಸ್ಪಂದಿಸಿದ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು, ಜೀವವೈವಿಧ್ಯ ಮಂಡಳಿಯಿಂದ ಪ್ರದೇಶವನ್ನು ಜೀವವೈವಿಧ್ಯ ಪಾರಂಪರಿಕ ತಾಣ ಎಂದು ಘೋಷಿಸಿದ್ದರು.**

ಉದಯವಾಹಿನಿ

ಪ್ರಾದೇಶಿಕ

ಬುಧವಾರ 17 ಡಿಸೆಂಬರ್ 2025




# ವ್ಯಾಘ್ರನ ಪತ್ತೆಗೆ ಕೂಂಬಿಂಗ್ ಕಾರ್ಯಾಚರಣೆ ಆರಂಭ

• ಉದಯವಾಹಿನಿ, ಗುಂಡ್ಲುಪೇಟೆ

ತಾಲ್ಲೂಕಿನ ದೇಪಾಪುರ ಗ್ರಾಮದ ಜಮೀನಿನಲ್ಲಿ ಹಾಡಹಗಲೇ ಹಸುವನ್ನ ಬಲಿಪಡೆದಿದ್ದ ವ್ಯಾಘ್ರನ ಪತ್ತೆಗೆ ಇಳಿದಿರುವ ಅರಣ್ಯ ಇಲಾಖೆ ಸಾಕನೆ ಧರ್ಮನ ನೆರವಿನಿಂದ ಕೂಂಬಿಂಗ್ ಕಾರ್ಯಾಚರಣೆ ಶುರುಮಾಡಿದೆ ಆದರೆ ಸಂಜೆಯತನಕ ಯಾವುದೇ ಸುಳಿವು ಪತ್ತೆಯಾಗಿಲ್ಲ ಎಂದು ತಿಳಿದುಬಂದಿದೆ.

ದೇಪಾಪುರ ಗ್ರಾಮದಲ್ಲಿ ಜಾನುವಾರು ಮೇಲೆ ವ್ಯಾಘ್ರ ದಾಳಿ ಬಳಿಕ ಅರಣ್ಯ ಇಲಾಖೆ ವಿರುದ್ಧ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು, ಅಧಿಕಾರಿಗಳ ವಿರುದ್ಧ ಹರಿಹಾಯ್ದಿದ್ದ ರೈತರು ವನ್ಯಜೀವಿಗಳ ಉಪಟಳಕ್ಕೆ ಕಡಿವಾಣ ಹಾಕುವಲ್ಲಿ ಅರಣ್ಯ ಇಲಾಖೆ ವಿಫಲವಾಗಿದೆ


ಉದಯವಾಹಿನಿ ಚಿತ್ರ

**ಶೀಲವಂತಪುರದ ಬಳಿ ಸುಳಿವು**

**ದೇಪಾಪುರ ಗ್ರಾಮದ ಅಣತಿ ದೂರದ ಶೀಲವಂತಪುರದ ಹೊರವಲಯದಲ್ಲಿ ಹುಲಿ ಕಾಣಿಸಿಕೊಂಡಿರುವ ಕುರಿತು ಮಾಹಿತಿ ಲಭ್ಯವಾದ ಹಿನ್ನೆಲೆ ಆನೆ ನೆರವಿನಿಂದ ಶೋಧ ಕಾರ್ಯ ನಡೆಸಲಾಯಿತಾದರು ಯಾವುದೇ ಸುಳಿವು ಸಿಕ್ಕಿಲ್ಲ, ಈಗಾಗಲೇ ಧರ್ಮ ಆನೆಯನ್ನ ಬಳಕೆ ಮಾಡಿಕೊಳ್ಳಲಾಗಿದ್ದು ಅವಶ್ಯವಾದಲ್ಲಿ ಬೇರೆ ಆನೆಗಳನ್ನ ಕರೆತರಲಾಗುವುದು ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.**

ಎಂದು ಆಕ್ರೋಶ ಹೊರಹಾಕಿದ್ದರು.

ಜಾನುವಾರುಗಳ ಸಾವಿಗೆ ಬದಲಾಗಿ ಒಂದಿಷ್ಟು ಪರಿಹಾರ ಹಣ ನೀಡುವ ಬದಲು ವ್ಯಾಘ್ರಗಳು ಗಡಿದಾಟದಂತೆ ಎಚ್ಚರವಹಿಸಿ ಎಂದು ಕಿಡಿಕಾರಿದ್ದರು. ತ್ವರಿತವಾಗಿ ಹುಲಿ ಪತ್ತೆಗೆ ಕೂಂಬಿಂಗ್ ಆರಂಭಿಸಿ ಬೋನ್ ಇರಿಸಬೇಕು ಎಂದು ಒತ್ತಾಯಿಸಿದ್ದ ಹಿನ್ನೆಲೆ ಸಾಕಾನೆ ಧರ್ಮ ನೆರವಿನಿಂದ ಪತ್ತೆ ಕಾರ್ಯಕ್ಕೆ ಮುಂದಾಗಿರುವ ಅರಣ್ಯ ಇಲಾಖೆ ಹುಲಿಯನ್ನ ವಾಪಾಸ್ ಕಾಡಿಗಟ್ಟುವ ಸಂಕಲ್ಪ ಮಾಡಿದೆ.

## ಡಿಸಿ ಕಚೇರಿಗೆ ಬಾಂಬ್ ಬೆದರಿಕೆ

• ಉದಯವಾಹಿನಿ, ತುಮಕೂರು

ಜಿಲ್ಲೆಯ ಆಡಳಿತ ಶಕ್ತಿ ಕೇಂದ್ರವಾದ ಜಿಲ್ಲಾಧಿಕಾರಿ ಕಚೇರಿಗೆ ಬೆಳ್ಳಂಬೆಳಿಗ್ಗೆ ಬಾಂಬ್ ಇಟ್ಟಿರುವ ಬೆದರಿಕೆಯ ಅನಾಮಧೇಯ ಇ-ಮೇಲ್ ಸಂದೇಶ ಬಂದಿದೆ. ಜಿಲ್ಲಾಧಿಕಾರಿ ಕಚೇರಿಗೆ ಬಾಂಬ್ ಇಟ್ಟಿರುವ ಬೆದರಿಕೆಯ ಅನಾಮಧೇಯ ಇ-ಮೇಲ್ ಸಂದೇಶ ಬೆಳಿಗ್ಗೆ 6.59ಕ್ಕೆ ಬಂದಿದ್ದು, ತಕ್ಷಣ ಜಿಲ್ಲಾಧಿಕಾರಿ ಶುಭಕಲ್ಯಾಣ್ ಅವರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಜಿಲ್ಲಾಧಿಕಾರಿಗಳ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಚಂದ್ರಶೇಖರ್ ನೇತೃತ್ವದಲ್ಲಿ ನಗರ ಠಾಣೆ ಇನ್ಸ್‌ಪೆಕ್ಟರ್ ಅವಿನಾಶ್, ಸಬ್‌ಇನ್ಸ್‌ಪೆಕ್ಟರ್ ಚೇತನ್ ಮತ್ತು ಸಿಬ್ಬಂದಿಗಳು ಜಿಲ್ಲಾಧಿಕಾರಿಗಳ ಕಚೇರಿಗೆ ತಕ್ಷಣ ಆಗಮಿಸಿ ತೀವ್ರ ತಪಾಸಣೆ ಮತ್ತು ಶೋಧ ಕಾರ್ಯ ನಡೆಸಿದ್ದಾರೆ.


ಉದಯವಾಹಿನಿ ಚಿತ್ರ

ಜಿಲ್ಲಾಧಿಕಾರಿ ಕಚೇರಿಗೆ ಬಾಂಬ್ ಇಟ್ಟಿರುವ ಬೆದರಿಕೆ ಬಂದ ತಕ್ಷಣ ಎಚ್ಚೆತ್ತಿರುವ ಜಿಲ್ಲಾ ಪೊಲೀಸರು, ಮೆಟಲ್ ಡಿಟೆಕ್ಟರ್‌ಗಳು ಸೇರಿದಂತೆ ಸುರಕ್ಷತಾ ಕ್ರಮಗಳನ್ನು ಅನುಸರಿಸಿದ್ದು, ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನದಳದಿಂದ ತೀವ್ರ ತಪಾಸಣೆ ನಡೆಸಲಾಯಿತು. ಜಿಲ್ಲಾಧಿಕಾರಿ ಕೊಠಡಿ, ಆಪ್ತ ಸಹಾಯಕರ ಕಚೇರಿ, ಮುಖ್ಯದ್ವಾರದ ಗೇಟ್ ಸೇರಿದಂತೆ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದಲ್ಲಿರುವ ತಹಶೀಲ್ದಾರ್ ಕಚೇರಿ, ಉಪತಹಶೀಲ್ದಾರ್ ಕಚೇರಿಗಳಲ್ಲೂ ಪೊಲೀಸರು ತೀವ್ರ ಶೋಧ ಕಾರ್ಯ ನಡೆಸಿದರು. ಎಂದಿನಂತೆ ತಮ್ಮ ಕೆಲಸ ಕಾರ್ಯಗಳಿಗೆ ಆಗಮಿಸಿದ ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಪೊಲೀಸರು ತೀವ್ರ ತಪಾಸಣೆಗೆ ಒಳಪಡಿಸಿದ ನಂತರ ಒಳಗೆ ಪ್ರವೇಶಿಸಲು ಅನುಮತಿ ನೀಡಿದರು.

ಬಾಂಬ್ ಬೆದರಿಕೆ ಕರೆ ಹಿನ್ನೆಲೆಯಲ್ಲಿ ಅಧಿಕಾರಿಗಳು ಮತ್ತು ನೌಕರರು ಆತಂಕ ಮತ್ತು ಭಯದ ವಾತಾವರಣದಲ್ಲೇ ಕೆಲಸ ಕಾರ್ಯವನ್ನು ಮಾಡುವಂತಾಗಿದೆ. ಬಾಂಬ್ ನಿಷ್ಕ್ರೀಯ ದಳ ಸೇರಿದಂತೆ 100ಕ್ಕೂ ಹೆಚ್ಚು ಪೊಲೀಸರು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಮೊಕ್ಕಾಂ ಹೂಡಿದ್ದು, ಶೋಧನಾ ಕಾರ್ಯವನ್ನು ಮುಂದುವರೆಸಿದ್ದಾರೆ. ಅನಾಮಧೇಯ ಇ-ಮೇಲ್ ಕರೆ ಬಂದ ಹಿನ್ನಲೆಯಲ್ಲಿ ತಪಾಸಣೆ ಕಾರ್ಯ ನಡೆಯುತ್ತಿದ್ದು, ಬಾಂಬ್ ಬೆದರಿಕೆಗೆ ಜನರು ಸಹ ಆತಂಕ ವ್ಯಕ್ತಪಡಿಸಿದ್ದಾರೆ. ಅಲ್ಲದೆ ಜಿಲ್ಲಾಧಿಕಾರಿ ಕಚೇರಿ ಸುತ್ತಮುತ್ತಲಿನ ವ್ಯಾಪಾರಿಗಳು ಅತ್ಯಂತ ಭಯದ ವಾತಾವರಣದಲ್ಲೇ ತಮ್ಮ ದೈನಂದಿನ ವ್ಯಾಪಾರ ಚಟುವಟಿಕೆಗಳನ್ನು ಆರಂಭಿಸಿದ್ದಾರೆ.

### ಎಚ್‌ಡಿ ಕುಮಾರಸ್ವಾಮಿ ಹುಟ್ಟುಹಬ್ಬ: 30ಗ್ರಾಂ ಗೋಲ್ಡ್ ಚೈನ್ ಉಡುಗೊರೆ ನೀಡಿದ ಅಭಿಮಾನಿ

## ನಾಡಿನ ಜನತೆಯ ನಿರೀಕ್ಷೆಗೆ ತಕ್ಕಂತೆ ಕೆಲಸ: ಎಚ್ಡಿಕೆ

• ಉದಯವಾಹಿನಿ, ಮಂಡ್ಯ

ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಅವರ ಹುಟ್ಟುಹಬ್ಬನ್ನು ಮಂಡ್ಯ ಜಿಲ್ಲೆಯ ಹಾಲಿ ಮತ್ತು ಮಾಜಿ ಜನಪ್ರತಿನಿಧಿಗಳು, ಮುಖಂಡರು, ಕಾರ್ಯಕರ್ತರು ಜಿಲ್ಲೆಯ ಹಲವೆಡೆ ಅದ್ದೂರಿಯಾಗಿ ಆಚರಿಸಿದರು. ಈ ವೇಳೆ ಅಭಿಮಾನಿಯೊಬ್ಬರು 30 ಗ್ರಾಂನ ಚಿನ್ನದ ಸರವನ್ನು ಸಚಿವರಿಗೆ ಉಡುಗೊರೆಯಾಗಿ ನೀಡಿದರು.

ಮಂಡ್ಯ ನಗರದ ವಿಸಿ ಫಾರ್ಮ್ ಗೇಟ್‌ನಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ನೂರಾರು ಮುಖಂಡರು ಕಾರ್ಯಕರ್ತರು ಎಚ್.ಡಿ.ಕುಮಾರಸ್ವಾಮಿ ಅವರನ್ನು ಅಭಿನಂದಿಸಿ, ಅವರ ಕೈಯಿಂದ ಕೇಕ್ ಕತ್ತರಿಸಿ ಹುಟ್ಟುಹಬ್ಬ ನೆರವೇರಿಸಿದರು. ಎಚ್.ಡಿ.ಕೆ. ವಿ.ಸಿ. ಫಾರ್ಮ್ ಗೇಟ್‌ಗೆ ಆಗಮಿಸುತ್ತಿದ್ದಂತೆಯೇ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಬೃಹತ್ ಹಾರ ಹಾಕಿ, ಮಂಗಳವಾದ್ಯ, ಜಾನಪದ ಕಲಾತಂಡಗಳೊಂದಿಗೆ ಸ್ವಾಗತ ನೀಡಲಾಯಿತು. ಬಳಿಕ ಹುಟ್ಟುಹಬ್ಬದ ಅಂಗವಾಗಿ ಮುಖಂಡರು, ಬೆಂಬಲಿಗರು, ಕಾರ್ಯಕರ್ತರೊಂದಿಗೆ ಎಚ್.ಡಿ.ಕೆ. ಕೇಕ್ ಕತ್ತರಿಸಿದರು. ಈ ವೇಳೆ ನೂರಾರು ಮುಖಂಡರು ಮುಖಂಡರು, ಬೆಂಬಲಿಗರು, ಕಾರ್ಯಕರ್ತರಿಂದ ಅಭಿನಂದಿಸಿದರು.

> **ದ್ವೇಷ ಭಾಷಣ ವಿಧೇಯಕ ಮಂಡನೆ ವಿಚಾರವನ್ನ ರಾಜ್ಯ ಸರ್ಕಾರ ಕೈಬಿಟ್ಟು ವೋಟ್ ಚೋರಿ ಪ್ರತಿಭಟನೆ ವೇಳೆ ಪ್ರಧಾನ ಮಂತ್ರಿಗಳ ಸಾವಿನ ಬಗ್ಗೆ ಕಾಂಗ್ರೆಸ್ ಕಾರ್ಯಕರ್ತರು ಕೂಗಿರುವ ಘೋಷಣೆ ಬಗ್ಗೆ ಮೊದಲು ಅದರ ಮೇಲೆ ಕ್ರಮ ಕೈಗೊಳ್ಳಿ, ಮಂಡ್ಯದಲ್ಲಿ ನಮ್ಮ ಪಕ್ಷದ ಕಾರ್ಯಕರ್ತರು ಹುಟ್ಟಿದ ದಿನ ಶುಭಕೋರಿದ್ದಾರೆ. ರಸ್ತೆಯುದ್ದಕ್ಕೂ ಅದ್ದೂರಿಯಾಗಿ ಸ್ವಾಗತಿಸಿ ಶುಭಕೋರಿದ್ದು, ನಾನು ಅವರಿಗೆ ಚಿರ ಋಣಿಯಾಗಿರುತ್ತೇನೆ. ನಾಡಿಗೆ ಒಳ್ಳೆಯದಾಗಬೇಕು ಅನ್ನೋದು ನನ್ನ ಕರ್ತವ್ಯ.**
>
> **-ಎಚ್.ಡಿ ಕುಮಾರಸ್ವಾಮಿ, ಸಚಿವ**

**ಚಿನ್ನದ ಸರ ಉಡುಗೊರೆ ನೀಡಿದ ಗುತ್ತಿಗೆದಾರ ಪುರದಕೊಪ್ಪಲು ಶಂಕರೇಗೌಡ:** ಗುತ್ತಿಗೆದಾರ ಪುರದಕೊಪ್ಪಲು ಶಂಕರೇಗೌಡ ಎಂಬುವವರು ಸ್ವತಃ ತಂದಿದ್ದ ಚಿನ್ನದ ಸರವನ್ನು ಎಚ್.ಡಿ.ಕೆ. ಕೊರಳಿಗೆ ಹಾಕಿದರು. ಜೆಡಿಎಸ್ ನಾಯಕರು ಆಗಿರುವ ಗುತ್ತಿಗೆದಾರ ಶಂಕರೇಗೌಡ, ಮಂಡ್ಯದ ವಿ.ಸಿ.ಫಾರ್ಮ್ ಗೇಟ್ ಬಳಿ ನಡೆದ


ಉದಯವಾಹಿನಿ ಚಿತ್ರ

ಎಚ್.ಡಿ.ಕೆ. ಕನಿಷ್ಟ 30 ಗ್ರಾಂನ ಚಿನ್ನದ ಸರವನು ತೊಡಿಸಿದರು. ಇದಕ್ಕೂ ಮುನ್ನ ಮದ್ದೂರಿನ ಟಿ.ಬಿ.ವೃತ್ತದಲ್ಲಿ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ನೇತೃತ್ವದಲ್ಲಿ, ಮಂಡ್ಯ ನಗರದ ಜೆಸಿ ವೃತ್ತದಲ್ಲಿ ಮನ್‌ಮುಲ್ ನಿರ್ದೇಶಕ ಬಿ.ಆರ್.ರಾಮಚಂದ್ರ ನೇತೃತ್ವದಲ್ಲಿ, ಶ್ರೀರಂಗಪಟ್ಟಣದ ಬಸ್‌ನಿಲ್ದಾಣದ ಬಳಿ ಮಾಜಿ ಶಾಸಕ ಎ.ಎಸ್.ರವೀಂದ್ರ ಶ್ರೀ ಕಂಠಯ್ಯ ನೇತೃತ್ವದಲ್ಲಿ ಹಾಗೂ ಮಳವಳ್ಳಿಯಲ್ಲಿ ಮಾಜಿ ಶಾಸಕ ಡಾ.ಕೆ.ಅನ್ನದಾನಿ ನೇತೃತ್ವದಲ್ಲಿ ಎಚ್.ಡಿ.ಕೆ. ಹುಟ್ಟುಹಬ್ಬವನ್ನು ಕೇಕ್‌ಕತ್ತರಿಸಿ, ಅಭಿನಂದಿಸುವ ಮೂಲಕ ಆಚರಿಸಲಾಯಿತು.

**ನನ್ನನ್ನ ನಂಬಿದವರೂ ಇದ್ದಾರೆ; ಟೀಕಿಸುವವರು ಇದ್ದಾರೆ:** ಪ್ರಧಾನಿ ನರೇಂದ್ರ ಮೋದಿ ಅವರು ಕೇಂದ್ರದಲ್ಲಿ ಮಂತ್ರಿ ಸ್ಥಾನ ನೀಡಿ ನನಗೆ ಜವಾಬ್ದಾರಿ ಕೊಟ್ಟಿದ್ದಾರೆ. ನನ್ನ ಮೇಲೆ ನಂಬಿಕೆ ಇಟ್ಟ ವರ್ಗವೊಂದಾದರೆ ಟೀಕೆ ಮಾಡುವ ವರ್ಗವೂ ಇದೆ. ಆ ಟೀಕೆಗಳಿಗೆ ಸೊಪ್ಪು ಹಾಕದೇ ನಾಡಿನ ಜನತೆಯ ನೀರಿಕ್ಷೆಗೆ ಕೆಲಸ ಮಾಡುತ್ತೇನೆ. ರಾಜ್ಯಕ್ಕೆ ಆಗಬೇಕಾದ ಕೆಲಸಗಳಿಗೆ ನಾನು ತಕ್ಕ ನ್ಯಾಯ ಒದಗಿಸುತ್ತೇನೆ ಎಂದು ಕೇಂದ್ರದ ಉಕ್ಕು ಹಾಗೂ ಬೃಹತ್ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಮಂಡ್ಯ ನಗರದಲ್ಲಿ ಮಂಗಳವಾರ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರಕಾರ ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡುತ್ತಿದೆಯೋ? ಇಲ್ಲವೋ? ಎಂಬುದು ಜನರಿಗೆ ಗೊತ್ತಿದೆ. ಗೃಹಲಕ್ಷ್ಮಿ ಹಣ ಕೊಡುತ್ತಿದ್ದಾರೋ? ಇಲ್ಲವೋ? ಎಂಬುದು ಗೊತ್ತಿಲ್ಲ ಎಂದು ಮಾರ್ಮಿಕವಾಗಿ ನುಡಿದರು.

> **ಗೃಹಲಕ್ಷ್ಮಿ ಹಣ ಒಟ್ಟಿಗೆ ಕೊಡುತ್ತಾರೆ**
>
> **ಸಹಕಾರಿ ಬ್ಯಾಂಕುಗಳಲ್ಲಿ 32 ಲಕ್ಷ ಕುಟುಂಬಕ್ಕೆ 22 ಕೋಟಿ ಸಾಲ ಕೊಡುತ್ತೇವೆ ಎಂದಿದ್ದ ಸರಕಾರ ಈವರೆಗೂ ಕೊಟ್ಟಿಲ್ಲ. ಹೊಸದಾಗಿ ಸಾಲ ಕೊಟ್ಟಿಲ್ಲ. ಹೀಗಾದರೇ ರೈತರ ಪರಿಸ್ಥಿತಿ ಏನಾಗಬೇಕು ನನ್ನ ಚಿಂತನೆಯಾಗಿದೆ. ಗೃಹಲಕ್ಷ್ಮಿ ಹಣ ಒಟ್ಟಿಗೆ ಚುನಾವಣೆ ಬಂದಾಗ ಕೊಡುತ್ತಾರೆ. ಒಟ್ಟಿಗೆ ಕೊಟ್ಟಾಗ ಮಾತ್ರ ಜನ ಈ ಸರ್ಕಾರವನ್ನು ನೆನಪು ಇಟ್ಟುಕೊಳ್ತಾರೆ ಲೂಟಿ ಮಾಡೋದೆ ಅಭಿವೃದ್ಧಿ ಅಂತ ಸರ್ಕಾರ ತಿಳಿದುಕೊಂಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.**

ಕಾಂಗ್ರೆಸ್ ಸರಕಾರ ಬಂದ ನಂತರ ರಾಜ್ಯದಲ್ಲಿ ರೈತರ ಆತ್ಮಹತ್ಯೆ ನಡೆದಿದೆ. ಅದರ ಬಗ್ಗೆ ಯಾರು ಗಮನ ಹರಿಸುತ್ತಿಲ್ಲ. 2800 ರೈತರ ಆತ್ಮಹತ್ಯೆಯಾಗಿದೆ.

ರಾಜ್ಯ ಸರಕಾರ ಗ್ಯಾರಂಟಿ ಕೊಟ್ಟು ರೈತರ ಪರಿಸ್ಥಿತಿ ಎಲ್ಲಿಗೆ ತಂದಿಟ್ಟಿದೆ ಎಂದು ಕಿಡಿಕಾರಿದರು. ಅಭಿವೃದ್ಧಿ ವಿಚಾರದ ಬಗ್ಗೆ ಗೃಹ ಸಚಿವ ಪರಮೇಶ್ವರ್ ಲಘುವಾಗಿ ಮಾತನಾಡಿರುವ ಬಗ್ಗೆ ಪ್ರತಿಕ್ರಿಯಿಸಿ, ಸರಕಾರಕ್ಕೆ ಅಭಿವೃದ್ಧಿ ಅಂದರೆ ಏನು ಅಂತಾನೇ ಗೊತ್ತಿಲ್ಲ. ಇವರಿಗೆ ನಾಡಿನ ಜನತೆಯ ತೆರಿಗೆ ಹಣ ಮಾತ್ರ ಗೊತ್ತು. ಲೂಟಿ ಮಾಡೋದೆ ಅಭಿವೃದ್ಧಿ ಅಂತ ತಿಳಿದುಕೊಂಡಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

## ಮಿನಿ ನ್ಯೂಸ್

### ಶಾಸಕ ಗಣೇಶ್ ಪ್ರಸಾದ್‌ಗೆ ಸಚಿವ ಸ್ಥಾನ ನೀಡುವಂತೆ ಬಿಜಿಶಿ ಒತ್ತಾಯ

• ಉದಯವಾಹಿನಿ, ಗುಂಡ್ಲುಪೇಟೆ

ರಾಜ್ಯ ಸರ್ಕಾರದ ಸಚಿವ ಸಂಪುಟ ವಿಸ್ತರಣೆಯಾದಲ್ಲಿ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಅವರಿಗೆ ಕ್ಯಾಬಿನೆಟ್ ದರ್ಜೆಯ ಸಚಿವ ಸ್ಥಾನ ನೀಡಬೇಕೆಂದು ಕಾಂಗ್ರೆಸ್ ಮುಖಂಡ ಭೀಮನಭೀಡು ಗ್ರಾಮಪಂಚಾಯತಿ ನಿಕಟಪೂರ್ವ ಅಧ್ಯಕ್ಷ ಬಿ.ಜಿ.ಶಿವಕುಮಾರ್ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ. ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಗುಂಡ್ಲುಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ಅತ್ಯಧಿಕ ಬಹುಮತದಿಂದ ಜಯಗಳಿಸಿ ಇಡೀ ರಾಜ್ಯವೇ ತಿರುಗಿನೋಡುವಂತೆ ಮಾಡಿದ್ದಾರೆ, ಈ ಹಿಂದೆ ಸಚಿವರಾಗಿ ಉತ್ತಮವಾಗಿ ಜನಸೇವೆಗೈದು ಹೆಸರುವಾಸಿಯಾದ ದಿವಂಗತ ಎಚ್.ಎಸ್.ಮಹ ದೇವಪ್ರಸಾದ್ ಅವರ ಸುಪುತ್ರರಾಗಿದ್ದು ಕ್ಷೇತ್ರದಲ್ಲಿ ತಂದೆಯ ಮಾರ್ಗದಲ್ಲಿ ನಡೆದು ಸೈ ಎನಿಸಿಕೊಂಡಿರುವುದು ಸಹ ಸರ್ಕಾರದ ಗರಿಮೆಯನ್ನ ಹೆಚ್ಚಿಸಿದೆ. ಹಳೆ ಮೈಸೂರು ಭಾಗದಲ್ಲಿನ ಏಕೈಕ ಲಿಂಗಾಯತ ಶಾಸಕರಾಗಿರುವ ಗಣೇಶ್ ಪ್ರಸಾದ್ ಅವರಿಗೆ ಸಚಿವ ಸ್ಥಾನ ನೀಡಿದರೆ ಪಕ್ಷ ಬಲವರ್ಧನೆಗೆ ಸಹಕಾರಿಯಾಗಲಿದೆ, ಬಿಜೆಪಿ ಯ ಕೆಲವು ಲಿಂಗಾಯತ ಘಟಾನುಘಟಿ ನಾಯಕರು ಚಾಮರಾಜನಗರ ಜಿಲ್ಲೆಯ ಭಾಗಕ್ಕೆ ದುಂಬಾಲು ಬಿದ್ದಿರುವುದರಿಂದ ಅಂಕುಶ ಹಾಕಲು ಸಚಿವ ಸ್ಥಾನವೇ ಆಸ್ತ್ರವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.



ಜನರ ಸಂಕಷ್ಟವನ್ನರಿತು ಜವಬ್ದಾರಿಯುತವಾಗಿ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿರುವ ಗಣೇಶ್ ಪ್ರಸಾದ್ ಕ್ಯಾಬಿನೆಟ್ ಮಂತ್ರಿಯಾದರೆ ಚಾಮರಾಜನಗರ ಜಿಲ್ಲೆಗೆ ಪ್ರಾತಿನಿಧ್ಯ ನೀಡಿದಂತಾಗುತ್ತದೆ ಆದುದರಿಂದ ಸಮರ್ಥ ನಾಯಕತ್ವದ ವ್ಯಕ್ತಿತ್ವದ ನಮ್ಮ ಶಾಸಕರಿಗೆ ಅವಕಾಶ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

### ಮೂವರು ಅಂತರರಾಜ್ಯ ಕಳ್ಳರ ಬಂಧನ

• ಉದಯವಾಹಿನಿ, ಚಿಕ್ಕಬಳ್ಳಾಪುರ

ನಗರ ಹೊರವಲಯದ ಅಣಕನೂರು ಗ್ರಾಮದಲ್ಲಿ ಇತ್ತೀಚೆಗೆ ನಡೆದ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಅಂತರರಾಜ್ಯ ಕಳ್ಳರನ್ನು ಚಿಕ್ಕಬಳ್ಳಾಪುರ ಗ್ರಾಮಾಂತರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಹೈದರಾಬಾದ್‌ನ ರಾಹುಲ್ ಕುಮಾರ್ ಶರ್ಮಾ, ನಲ್ಲೂರಿನ ಹನುಮ ಸಮುದ್ರಪೇಟದ ಸೈಯದ್ ದಾವೂದ್ ಮತ್ತು ಶಿಡ್ಲಘಟ್ಟ ತಾಲ್ಲೂಕಿನ ಜಾತವಾರ ಗ್ರಾಮದ ಅಲ್ಲಾಭಕ್ಷ ಬಂಧಿತರು. ಆರೋಪಿಗಳಿಂದ 20 ಗ್ರಾಂನ ಚಿನ್ನದ ನೆಕ್ಲೇಸ್, 25,000 ನಗದು ವಶಕ್ಕೆ ಪಡೆಯಲಾಗಿದೆ. ಅಣಕನೂರಿನ ನಾಗರಾಜು ಎಂಬುವವರ ಮನೆಯಲ್ಲಿ ನ.27ರಂದು ಬೆಳಗಿನ ಸಮಯದಲ್ಲಿ ಚಿನ್ನಾಭರಣ ಮತ್ತು 2.50 ಲಕ್ಷ ನಗದು ಕಳ್ಳತನವಾಗಿತ್ತು. ಈ ಬಗ್ಗೆ ಅವರು ಪೊಲೀಸರಿಗೆ ದೂರು ನೀಡಿದ್ದರು. ಆರೋಪಿಗಳ ಪತ್ತೆಗೆ ಸಿಪಿಐ ರಂಜನ್ ಕುಮಾರ್ ನೇತೃತ್ವದಲ್ಲಿ ತಂಡ ರಚಿಸಲಾಗಿತ್ತು.


### ಎತ್ತಿನಹೊಳೆ ನೀರಾವರಿ ಯೋಜನೆ ಕೇಂದ್ರ ವಿಶ್ವೇಶ್ವರಯ್ಯ ಜಲ ನಿಗಮದಿಂದ ವಿಳಂಬ

• ಉದಯವಾಹಿನಿ, ತುಮಕೂರು

ಎತ್ತಿನಹೊಳೆ ನೀರಾವರಿ ಯೋಜನೆ ವಿಳಂಬವಾಗಿದ್ದು, ಯೋಜನೆಯ ವ್ಯಾಪ್ತಿಗೆ ಒಳಪಡುವ ಜಿಲ್ಲೆಗಳ ಜನರು ಹೋರಾಟ ರೂಪಿಸುವಂತೆ ಕೆಪಿಸಿಸಿ ಉಪಾಧ್ಯಕ್ಷ ಮುರಳೀಧರ ಹಾಲಪ್ಪ ಸಲಹೆ ಮಾಡಿದರು. ನಗರದಲ್ಲಿ ನಡೆದ ಎತ್ತಿನಹೊಳೆ ಯೋಜನೆ ವಿಳಂಬಕ್ಕೆ ಕಾರಣಗಳು ಹಾಗೂ ಪರಿಹಾರ ಕುರಿತು ಸಮಾಲೋಚನಾ ಸಭೆಯಲ್ಲಿ ಮಾತನಾಡಿದರು.

ಕೇಂದ್ರ ಸರ್ಕಾರ ಇಲ್ಲದ ಸಬೂಬು ತೆಗೆದು ಅನಗತ್ಯವಾಗಿ ವಿಳಂಬ ಮಾಡುತ್ತಿದೆ. ಯೋಜನೆ ವ್ಯಾಪ್ತಿಗೆ ಒಳಪಡುವ ಹಾಸನ, ತುಮಕೂರು, ಚಿತ್ರದುರ್ಗ, ರಾಮನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆ ಜನರು ಈಗಲೇ ಎಚ್ಚೆತ್ತುಕೊಂಡು ಹೋರಾಟ ರೂಪಿಸಬೇಕಿದೆ. ಕೇಂದ್ರದ ಎಲ್ಲಾ ಪ್ರಶ್ನೆಗಳಿಗೆ ಸಮಂಜಸ ಉತ್ತರ ನೀಡಿ, ಯೋಜನೆ ಪೂರ್ಣಗೊಳ್ಳುವಂತೆ ವಿಶ್ವೇಶ್ವರಯ್ಯ ಜಲ ನಿಗಮದ ಅಧಿಕಾರಿಗಳು ನೋಡಿಕೊಳ್ಳಬೇಕು ಎಂದು ಒತ್ತಾಯಿಸಿದರು. ಡಿ. 18ರಂದು ನಗರದ ಅಮರಜ್ಯೋತಿ ನಗರದಲ್ಲಿರುವ ಎತ್ತಿನಹೊಳೆ ಯೋಜನೆಯ ಕಚೇರಿಗೆ ಸಾರ್ವಜನಿಕರೊಂದಿಗೆ ಭೇಟಿ ನೀಡಿ ಚರ್ಚೆ ನಡೆಸಲಾಗುವುದು. ಈಗಾಗಲೇ ಸಚಿವ ಸಿ.ಆರ್.ಪಾಟೀಲ್ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಲಾಗಿದೆ. ಆದರೆ ವಿಶ್ವೇಶ್ವರಯ್ಯ ಜಲನಿಗಮದ ಅಧಿಕಾರಿಗಳಿಂದ ವಿಳಂಬವಾಗಿದೆ ಎಂದು ಕೇಂದ್ರ ಹೇಳುತ್ತಿದೆ ಎಂದರು. ಕೇಂದ್ರ ಸರ್ಕಾರ ಮೊದಲಿಗೆ 11, ಈಗ 3 ಪ್ರಶ್ನೆಗಳನ್ನು ಕೇಳಿದೆ.

ಕೇಂದ್ರದ ಅರಣ್ಯ, ಪರಿಸರ ಇಲಾಖೆ ಸಮಿತಿಗಳು ರಾಜ್ಯಕ್ಕೆ ಬಂದ ಪರಿಶೀಲನೆ ನಡೆಸಿವೆ. ಇಂತಹ ಮಹತ್ವದ ವಿಚಾರಗಳನ್ನು ರಾಜ್ಯ ಜಲಸಂಪನ್ಮೂಲ ಸಚಿವ, ಯೋಜನಾ ವ್ಯಾಪ್ತಿಗೆ ಒಳಪಡುವ ಸಚಿವರ ಗಮನಕ್ಕೆ ತಂದು ವಿಶ್ವೇಶ್ವರಯ್ಯ ಜಲ ನಿಗಮದ ಅಧಿಕಾರಿಗಳು ವಿವರಣೆ ನೀಡಬೇಕಿತ್ತು. ಆಗ ನಿರ್ಲಕ್ಷ್ಯವಹಿಸಿ, ಹೋರಾಟ ಆರಂಭವಾದ ನಂತರ ದೆಹಲಿಗೆ ತೆರಳಿ ಸಮಜಾಯಿಸಿ ನೀಡಲು ಮುಂದಾಗಿದ್ದಾರೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.


ಉದಯವಾಹಿನಿ ಚಿತ್ರ

## ಜೂನ್ ತಿಂಗಳಲ್ಲಿ ಜಿಲ್ಲೆಗೆ ಎತ್ತಿನಹೊಳೆ ನೀರು: ಪರಮೇಶ್ವರ್

• ಉದಯವಾಹಿನಿ, ಕೊರಟಗೆರೆ

ಕೊರಟಗೆರೆ ವಿಧಾನಸಭಾ ಕ್ಷೇತ್ರದಲ್ಲಿ ಪ್ರಸ್ತುತ 164 ಕೋಟಿ ರೂ. ವೆಚ್ಚದ ಕಾಮಗಾರಿ ನಡೆಯುತ್ತಿದ್ದು, ಈಗ ಮುಖ್ಯಮಂತ್ರಿ ನಿಧಿಯಿಂದ 50 ಕೋಟಿ ರೂ. ಅನುದಾನ ಬಂದಿದ್ದು, ಇನ್ನೂ ಸಾಕಷ್ಟು ಅನುದಾನ ತಂದು ಕೊರಟಗೆರೆಯನ್ನು ಅಭಿವೃದ್ಧಿ ಮಾಡುತ್ತೇನೆ ಹಾಗೂ 2026ರ ಜೂನ್‌ನಲ್ಲಿ ಎತ್ತಿನಹೊಳೆ ನೀರು ತುಮಕೂರು ಜಿಲ್ಲೆಗೆ ಹರಿಯಲಿದೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಹೇಳಿದರು. ತಾಲ್ಲೂಕಿನ ಸಿ.ಎನ್.ದುರ್ಗ ಹೋಬಳಿಯ ಜಟ್ಟಿ ಅಗ್ರಹಾರ ಗ್ರಾಮದಲ್ಲಿ ನಡೆದ ಎತ್ತಿನಹೊಳೆ ಯೋಜನೆಗೆ ಭೂ ಸ್ವಾಧೀನಪಡಿಸಿಕೊಂಡ ಜಮೀನಿನ ರೈತರಿಗೆ ಭೂ ಪರಿಹಾರ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಕೊರಟಗೆರೆ ವಿಧಾನಸಭಾ ಕ್ಷೇತ್ರದ ಮತದಾರರ ಆಶೀರ್ವಾದದಿಂದ ಮೂರು ಬಾರಿ ಗೃಹ ಸಚಿವನಾಗಿದ್ದೇನೆ. ಈ ರಾಜ್ಯದ ಲಕ್ಷಾಂತರ ಹೆಣ್ಣುಮಕ್ಕಳ ರಕ್ಷಣೆ, ಮಕ್ಕಳ ರಕ್ಷಣೆ ಮಾಡುವುದು ನಮ್ಮ ಜವಾಬ್ದಾರಿ. ಸರ್ಕಾರಿ ಆಸ್ತಿ ರಕ್ಷಣೆ, ಮಾಡುವುದು ನಮ್ಮ ರಕ್ಷಣೆ ಆಗಿದ್ದು, ರಾಜ್ಯ


ಉದಯವಾಹಿನಿ ಚಿತ್ರ

ಪ್ರವಾಸದಿಂದ ಕ್ಷೇತ್ರದ ಬೇಟಿ ತಡವಾಗುತ್ತಿದ್ದು ಅದರೂ ಕೆಲಸದ ಒತ್ತಡವಿದ್ದರೂ ಅದರ ಜತೆಗೆ ಕೊರಟಗೆರೆ ಜನತೆಯನ್ನು ಯಾವುದೇ ಕಾರಣಕ್ಕೂ ಮರೆಯುವುದಿಲ್ಲ. ಕೇಂದ್ರ ಸರ್ಕಾರಿಂದ ಈಗಾಗಲೇ ಸಣ್ಣ ನೀರಾವರಿ ಇಲಾಖೆಗೆ 30 ಕೋಟಿ ರೂ. ಅನುದಾನ ಬಂದಿದ್ದು ಆ ಕೆಲಸಗಳನ್ನು ಪ್ರಾರಂಭ ಮಾಡಲು ತಿಳಿಸಿದ್ದೇನೆ ಎಂದರು.

ನಮ್ಮ ಕೊರಟಗೆರೆ ಕ್ಷೇತ್ರದಲ್ಲಿ ಬಹು ಕೋಟಿ ಅನುದಾನದಲ್ಲಿ ಎತ್ತಿನಹೊಳೆ ಯೋಜನೆಯ ಕಾಮಗಾರಿ ಬರದಿಂದ ಸಾಗುತ್ತಿದ್ದು, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಹಾಸನ ಕುಡಿಯುವ ನೀರಿಗೆ ತೊಂದರೆ ಆಗುತ್ತಿತ್ತು.. ತುಮಕೂರು ಜಿಲ್ಲೆಯಲ್ಲಿ 2 ಸಾವಿರ ಅಡಿ ಬೋರ್‌ವೆಲ್ ಕೊರೆಸಿದರು ನೀರು ಸಿಗುತ್ತಿಲ್ಲ. ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಜನ ಊರು ಬಿಡುತ್ತಿದ್ದಾರೆ. ವೀರಪ್ಪ ಮೊಯ್ಲಿ, ಮುನಿಯಪ್ಪ ಸೇರಿದಂತೆ ಹೋರಾಟ ಮಾಡಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎತ್ತಿನಹೊಳೆ ಯೋಜನೆ ಜಾರಿಗೆ ತಂದರು ಎಂದರು.

ಮಳೆಗಾಲದಲ್ಲಿ ಸಕಲೇಶಪುರದಲ್ಲಿ ಇರುವ ಎತ್ತಿನಹೊಳೆ ಜಾಗದಲ್ಲಿ 24 ಟಿಎಂಸಿ ನೀರು ಸಂಗ್ರಹ ಆಗುತಿತ್ತು. ಆ ನೀರನ್ನು ಅರಸೀಕೆರೆ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗೆ ಕುಡಿಯುವ ನೀರಿಗಾಗಿ ಯೋಜನೆ ಜಾರಿಗೆ ತಂದು ಬಜೆಟ್‌ನಲ್ಲಿ 13.500 ಕೋಟಿ ಹಣ ಬಿಡುಗಡೆ ಮಾಡಿದ್ದರು.

## ಗಂಗೋತ್ಸವ; 12 ತಂಡಗಳು ತಾಲ್ಲೂಕು ಮಟ್ಟಕ್ಕೆ ಆಯ್ಕೆ

• ಉದಯವಾಹಿನಿ, ಚನ್ನಪಟ್ಟಣ

ತಾಲ್ಲೂಕಿನ ಬೊಂಬೆನಾಡು ಗಂಗೋತ್ಸವ ಅಂಗವಾಗಿ ತಾಲ್ಲೂಕಿನ ಐದು ಜಿಲ್ಲಾ ಪಂಚಾಯಿತಿ, ನಗರ ಮಟ್ಟದಲ್ಲಿ ನಡೆದ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಒಟ್ಟು 12 ತಂಡಗಳು ತಾಲ್ಲೂಕು ಮಟ್ಟಕ್ಕೆ ಆಯ್ಕೆಯಾಗಿವೆ.


ತಾಲ್ಲೂಕಿನ ಅಕ್ಕೂರು ಜಿ.ಪಂ.ವ್ಯಾಪ್ತಿಯಲ್ಲಿ ನಡೆದ ಪಂದ್ಯಾವಳಿಯಲ್ಲಿ ಹಾರೋಕೋಪ್ಪ ಗ್ರಾಮದ ಎಂಬಿಸಿ ತಂಡ ಪ್ರಥಮ ಸ್ಥಾನ, ಅಕ್ಕೂರು ಯುನಿಟೆಡ್ ಫ್ರೆಂಡ್ಸ್ ದ್ವಿತೀಯ ಸ್ಥಾನ, ಕೋಡಂಬಹಳ್ಳಿ ಜಿ.ಪಂ.ವ್ಯಾಪ್ತಿಯಲ್ಲಿ ನಡೆದ ಪಂದ್ಯಾವಳಿಯಲ್ಲಿ ಕೋಡಂಬಹಳ್ಳಿ ಗೌಂಡ್ ಬಾಯ್ಸ್ ಪ್ರಥಮ ಸ್ಥಾನ, ಚೌಡೇಶ್ವರಿ ನಗರದ ತಂಡ ದ್ವಿತೀಯ ಸ್ಥಾನ, ಬೇವೂರು ಜಿ.ಪಂ.ವ್ಯಾಪ್ತಿಯಲ್ಲಿ ನಡೆದ ಪಂದ್ಯಾವಳಿಯಲ್ಲಿ ತಿಟ್ಟಮಾರನಹಳ್ಳಿ ಗ್ರಾಮದ ಸನ್ ರೈಸ್ ತಂಡ ಪ್ರಥಮ ಸ್ಥಾನ, ಎಚ್.ಮೊಗೇನಹಳ್ಳಿ ಗ್ರಾಮದ ಬಸವೇಶ್ವರ ಕ್ರಿಕೆಟರ್ಸ್ ತಂಡ ದ್ವಿತೀಯ ಸ್ಥಾನ ಪಡೆಯಿತು.

ಹೊಂಗನೂರು ಜಿ.ಪಂ.ವ್ಯಾಪ್ತಿಯಲ್ಲಿ ನಡೆದ ಪಂದ್ಯಾವಳಿಯಲ್ಲಿ ಬೊಂಬೆನಾಡು ಕ್ರಿಕೆಟರ್ಸ್ ತಂಡ ಪ್ರಥಮ ಸ್ಥಾನ, ಗುರು ಜ್ಯೋತಿ ಕ್ರಿಕೆಟರ್ಸ್ ದ್ವಿತೀಯ ಸ್ಥಾನ, ಮಳೂರು ಜಿ.ಪಂ. ವ್ಯಾಪ್ತಿಯಲ್ಲಿ ನಡೆದ ಪಂದ್ಯಾವಳಿಯಲ್ಲಿ ನೇತಾಜಿ ಕ್ರೀಡಾ


ಉದಯವಾಹಿನಿ ಚಿತ್ರ

ಸಂಘ ಪ್ರಥಮ ಸ್ಥಾನ, ಮಳೂರು ಬುಲ್ಸ್ ತಂಡ ದ್ವಿತೀಯ ಸ್ಥಾನ, ನಗರ ವ್ಯಾಪ್ತಿಯಲ್ಲಿ ನಡೆದ ಪಂದ್ಯಾವಳಿಯಲ್ಲಿ ಟೈಗರ್ಸ್ ತಂಡ ಪ್ರಥಮ ಸ್ಥಾನ, ಟಾಯ್ಸ್ ಸಿಟಿ ಬ್ರದರ್ಸ್ ದ್ವಿತೀಯ ಸ್ಥಾನವನ್ನು ಪಡೆದುಕೊಂಡವು. ಈ ಎಲ್ಲಾ ತಂಡಗಳು ತಾಲ್ಲೂಕು ಮಟ್ಟಕ್ಕೆ ಆಯ್ಕೆಯಾಗಿವೆ.

ಬೊಂಬೆನಾಡು ಗಂಗೋತ್ಸವ ಅಂಗವಾಗಿ ಡಿ.6ರಿಂದ ಟೆನ್ನಿಲ್ ಬಾಲ್ ಕ್ರಿಕೆಟ್ ಪಂದ್ಯಾವಳಿ ಆರಂಭಿಸಲಾಗಿತ್ತು. ಜಿ.ಪಂ, ನಗರ ವ್ಯಾಪ್ತಿಯಲ್ಲಿ ನಡೆದ ಪಂದ್ಯಾವಳಿಗಳಲ್ಲಿ 300ಕ್ಕೂ ಹೆಚ್ಚು ತಂಡಗಳು ಹೆಸರು ನೋಂದಾಯಿಸಿಕೊಂಡಿದ್ದವು. ಕ್ರೀಡಾಕೂಟದಲ್ಲಿ ಭಾಗಿಯಾದ ಪ್ರತಿ ತಂಡಗಳಿಗೂ ಅಯಾ ಜಿ.ಪಂ.ವ್ಯಾಪ್ತಿಯಲ್ಲಿ ಆಯೋಜಕರು ಕ್ರಿಕೆಟ್ ಕಿಟ್‌ಗಳನ್ನು ಉಚಿತವಾಗಿ ವಿತರಿಸಿದರು.


ಉದಯವಾಹಿನಿ ಚಿತ್ರ

• ಉದಯವಾಹಿನಿ, ಮಂಡ್ಯ

**ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಂಗಳವಾರ ಆಗಮಿಸಿದರು. ಈ ವೇಳೆ ರಾಜ್ಯಪಾಲರು, ಕೇಂದ್ರ ಉಕ್ಕು, ಕೈಗಾರಿಕೆ ಸಚಿವರು, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಿಂದ ಆತ್ಮೀಯ ಸ್ವಾಗತ ಕೋರಿದರು. ದ್ರೌಪದಿ ಮುರ್ಮು ಮಳವಳ್ಳಿಯಲ್ಲಿ ನಡೆಯಲಿರುವ ಸುತ್ತೂರಿನ ಆದಿ ಜಗದ್ಗುರು ಶಿವರಾತ್ರಿ ಶಿವಯೋಗಿ ಅವರ 1066ನೇ ಜಯಂತಿ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲು ಮಳವಳ್ಳಿಯಲ್ಲಿ ನಿರ್ಮಿಸಿರುವ ಹೆಲಿಪ್ಯಾಡ್ ಗೆ ಆಗಮಿಸಿದರು.**

## ಸರ್ಕಾರಿ ಸೇವೆ ಮನೆ ಬಾಗಿಲಿಗೆ ಕಾರ್ಯಕ್ರಮದ ಸಮಾರೋಪ

• ಉದಯವಾಹಿನಿ, ಪಾಂಡವಪುರ

ರೈತರು ಮತ್ತು ಜನರು ತಮ್ಮ ಸಮಸ್ಯೆಗಳಿಗಾಗಿ ತಾಲ್ಲೂಕು ಕೇಂದ್ರದ ಸರ್ಕಾರಿ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಲು ಪಂಚಾಯಿತಿ ಮಟ್ಟದಲ್ಲಿ 'ಸರ್ಕಾರಿ ಸೇವೆ ಮನೆ ಬಾಗಿಲಿಗೆ' ಕಾರ್ಯಕ್ರಮ ಆಯೋಜಿಸಲಾಗುತ್ತಿದ್ದು, ಜನರ ಸಮಸ್ಯೆಗಳನ್ನು ಆಲಿಸಿ ಪರಿಹಾರ ಒದಗಿಸಿಕೊಡಲಾಗುತ್ತಿದೆ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಹೇಳಿದರು.

ತಾಲ್ಲೂಕಿನ ದೊಡ್ಡಬ್ಯಾಡರಹಳ್ಳಿಯಲ್ಲಿ ಆಯೋಜಿಸಿದ್ದ ಸರ್ಕಾರಿ ಸೇವೆ ಮನೆ ಬಾಗಿಲಿಗೆ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಅವರು ಈಚೆಗೆ ಮಾತನಾಡಿದರು.ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲೂ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಪಂಚಾಯಿತಿ ಮಟ್ಟದ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಜನರ ಸಮಸ್ಯೆಗಳನ್ನು


ಉದಯವಾಹಿನಿ ಚಿತ್ರ

ಎಲ್ಲಾ ಇಲಾಖೆಯ ಅಧಿಕಾರಿಗಳ ಸಮ್ಮುಖದಲ್ಲಿ ಬಗೆಹರಿಸಿ ಜನರು ಕಚೇರಿ ಅಲೆಯುವುದನ್ನು ತಪ್ಪಿಸಬೇಕಿದೆ.

ನ್ಯಾಯಾಲಯದ ಪ್ರಕರಣಗಳನ್ನು ಹೊರತುಪಡಿಸಿ, ಕಂದಾಯ, ತಾಲ್ಲೂಕು ಪಂಚಾಯಿತಿ, ಸರ್ವೇ, ಕೃಷಿ, ಆರೋಗ್ಯ, ಶಿಕ್ಷಣ, ತೋಟಗಾರಿಕೆ, ರೇಷ್ಮೆ ಸೇರಿದಂತೆ ಎಲ್ಲಾ ಇಲಾಖೆಯಲ್ಲಿರುವ ಜನರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ದೊರಕಿಸಕೊಡಲಾಗುತ್ತಿದೆ' ಎಂದರು.

ಸರ್ಕಾರಿ ಸೇವೆ ಮನೆಬಾಗಿಲಿಗೆ ಕಾರ್ಯಕ್ರಮದಲ್ಲಿ 1,732 ಅರ್ಜಿಗಳು ಸ್ವೀಕೃತಗೊಂಡಿದ್ದು, ಈ ಪೈಕಿ 954 ಅರ್ಜಿಗಳಿಗೆ ಸ್ಥಳದಲ್ಲೇ ಪರಿಹಾರ ನೀಡಲಾಗಿದೆ. ಉಳಿದ 778 ಅರ್ಜಿಗಳನ್ನು ಶೀಘ್ರದಲ್ಲಿಯೇ ವಿಲೇವಾರಿ ಮಾಡಿ ಸಮಸ್ಯೆ ಬಗೆಹರಿಸಲಾಗುವುದು ಎಂದು ಹೇಳಿದರು.

ತಹಶೀಲ್ದಾರ್ ಬಸವರಡ್ಡೆಪ್ಪ ರೋಣದ, ತಾಲ್ಲೂಕು ಪಂಚಾಯಿತಿ ಇಒ ಎಂ.ಎಸ್.ವೀಣಾ ಕಾರ್ಯಕ್ರಮಕ್ಕೆ ಗೈರಾಗಿದ್ದು, ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದರು.

**ತಪ್ಪಿದ ಬಾಲ್ಯವಿವಾಹ:** ದೊಡ್ಡಬ್ಯಾಡರಹಳ್ಳಿ ಪಂಚಾಯಿತಿಯಲ್ಲಿ ನಡೆಯಬೇಕಿದ್ದ ಎರಡು ಬಾಲ್ಯ ವಿವಾಹ ಪ್ರಕರಣಗಳನ್ನು ತಡೆಗಟ್ಟುವ ಕ್ರಮವಹಿಸಲಾಗಿದೆ. ಜನರು ಬಾಲ್ಯ ವಿವಾಹವನ್ನು ಬೆಂಬಲಿಸಬಾರದು ಎಂದು ಸಿಡಿಪಿಒ ಪೂರ್ಣಿಮಾ ಹೇಳಿದರು.

# ಮೈಸೂರು ವಿಮಾನ ನಿಲ್ದಾಣದ ವಿಸ್ತರಣೆ, ಮೇಲ್ದರ್ಜೆಗೇರಿಸಲು ಕ್ರಮ

● 206 ಎಕರೆ ಜಮೀನನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ (ಎಎಐ) ಹಸ್ತಾಂತರಿಸುವ ಪ್ರಕ್ರಿಯೆ

• ಉದಯವಾಹಿನಿ, ಮೈಸೂರು

ಮೈಸೂರು ವಿಮಾನ ನಿಲ್ದಾಣದ ವಿಸ್ತರಣೆ ಮತ್ತು ಮೇಲ್ದರ್ಜೆಗೇರಿಸಲು ಮಹತ್ವದ ಹೆಜ್ಜೆಯಾಗಿ ಕರ್ನಾಟಕ ರಾಜ್ಯ ಕೈಗಾರಿಕಾ, ಮೂಲಸೌಕರ್ಯ ಅಭಿವೃದ್ಧಿ ನಿಗಮದಿಂದ 206 ಎಕರೆ ಜಮೀನನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಹಸ್ತಾಂತರಿಸುವ ಪ್ರಕ್ರಿಯೆ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರಕಾರದ ಅಧಿಕಾರಿಗಳೊಂದಿಗೆ ಜಂಟಿ ಸಮೀಕ್ಷೆ ಮತ್ತು ತಪಾಸಣೆ ನಡೆಸಲಾಗುತ್ತಿದೆ ಎಂದು ವಿಮಾನ ನಿಲ್ದಾಣ ನಿರ್ದೇಶಕಿ ಪಿ.ವಿ.ಉಷಾ ಕುಮಾರಿ ತಿಳಿಸಿದ್ದಾರೆ. ಈ ಅಭಿವೃದ್ಧಿ ಕಾಮಗಾರಿಯ ಅನುಷ್ಠಾನದಿಂದ ಮೈಸೂರು ವಿಮಾನ ನಿಲ್ದಾಣವು ಬೋಯಿಂಗ್ 737 ಮತ್ತು ಏರ್‌ಬಸ್ ಎ320 ನಂತಹ ದೊಡ್ಡ ವಿಮಾನಗಳ ಕಾರ್ಯಾಚರಣೆಗೆ ಸಿದ್ಧಗೊಳ್ಳಲಿದೆ. ಪ್ರಾದೇಶಿಕ ಹಾಗೂ ಅಂತಾರಾಷ್ಟ್ರೀಯ ಸಂಪರ್ಕವನ್ನು ಗಣನೀಯವಾಗಿ ಹೆಚ್ಚಿಸಲಿದೆ ಎಂದು ಹೇಳಿದ್ದಾರೆ. ಆರಂಭವಾದ ಬಹು ಸಂಸ್ಥೆಗಳ ತಪಾಸಣೆ ಮತ್ತು ಸಮೀಕ್ಷೆ ಡಿ. 17ರವರೆಗೆ ಮುಂದುವರಿಯಲಿದೆ. ಕೆಎಸ್‌ಐಐಡಿಸಿ, ಕೆಐಎಡಿಬಿ, ಸಿಎನ್‌ಎನ್‌ಎಲ್, ಕೆಪಿಟಿಸಿಎಲ್, ಎನ್‌ಎಚ್‌ಎಐ, ಎಎಐ ಅಧಿಕಾರಿಗಳು ಭಾಗವಹಿಸಿ ಗಡಿಗಳನ್ನು ಪರಿಶೀಲಿಸುತ್ತಿದ್ದಾರೆ. ಸೈಟ್ ಸ್ಥಿತಿಗತಿಯನ್ನು ಮೌಲ್ಯಮಾಪನ ಮಾಡುತ್ತಿದ್ದಾರೆ. ಯಾವುದೇ ಅಡೆತಡೆಗಳನ್ನು ಗುರುತಿಸಿ ದಾಖಲಾತಿಗಳನ್ನು ಅಂತಿಮಗೊಳಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



**ಸರಕಾರಿ ಫ್ಲೈಯಿಂಗ್ ಟ್ರೈನಿಂಗ್ ಸ್ಕೂಲ್ ಸ್ಥಳಾಂತರ ಚರ್ಚೆ:** ಬೆಂಗಳೂರಿನ ಜಕ್ಕೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸರಕಾರಿ ಫ್ಲೈಯಿಂಗ್ ಟ್ರೈನಿಂಗ್ ಸ್ಕೂಲ್‌ಅನ್ನು ಮೈಸೂರು ವಿಮಾನ ನಿಲ್ದಾಣಕ್ಕೆ ಸ್ಥಳಾಂತರಿಸುವ ಕುರಿತು ಚರ್ಚೆ ಆರಂಭವಾಗಿದೆ. ಸ್ಥಳಾಂತರ ಬೇಕೆ ಬೇಡವೇ ಎಂಬುದನ್ನು ನಿರ್ಧರಿಸಲು ಇತ್ತೀಚೆಗೆ ಬೆಂಗಳೂರಿನಲ್ಲಿ ತಜ್ಞರ ಸಮಿತಿ ಸಭೆ ನಡೆಸಲಾಗಿದೆ. ಈ ಸಭೆಗೆ ಹಾಜರಾಗುವಂತೆ ಮೈಸೂರು ವಿಮಾನ ನಿಲ್ದಾಣದ ಅಧಿಕಾರಿಗಳಿಗೂ ಸೂಚನೆ ಬಂದಿತ್ತು. ಆದರೆ, ಬೆಂಗಳೂರಿನ ಅಧಿಕಾರಿಗಳೇ ಭಾಗವಹಿಸಿದ್ದ ಕಾರಣ ಮೈಸೂರಿನ ಅಧಿಕಾರಿಗಳು ಸಭೆಗೆ ಹಾಜರಾಗಿಲ್ಲ. ಹಾಗಾಗಿ ಪ್ರಸ್ತುತ ಬೆಂಗಳೂರಿನಿಂದ ಜಿಎಫ್‌ಟಿಎಸ್ ಅನ್ನು ಮೈಸೂರಿಗೆ ಸ್ಥಳಾಂತರಿಸುವ ಯಾವುದೇ ನಿರ್ಧಾರದ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲಎಂದು ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕಿ ಪಿ.ವಿ.ಉಷಾಕುಮಾರಿ ವಿಜಯ ಕರ್ನಾಟಕಕ್ಕೆ ತಿಳಿಸಿದ್ದಾರೆ. 1950ರಲ್ಲಿ ಸ್ಥಾಪನೆಯಾದ ಜಕ್ಕೂರಿನ ಭಾರತದ ಅತ್ಯಂತ ಹಳೆಯ ಫ್ಲೈಯಿಂಗ್ ಟ್ರೈನಿಂಗ್ ಸಂಸ್ಥೆಗಳಲ್ಲಿಒಂದಾಗಿದೆ. ಮೈಸೂರು ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಅವರು ಏವಿಯೇಷನ್ ತರಬೇತಿಗೆ ಉಡುಗೊರೆಯಾಗಿ ಜಮೀನು ನೀಡಿದ್ದರು.

> **ಮೈಸೂರಿಗೆ ಹಾನಿಕಾರಕ?**
>
> **ಮೈಸೂರು ವಿಮಾನ ನಿಲ್ದಾಣ ಸಿವಿಲಿಯನ್ ವಿಮಾನ ನಿಲ್ದಾಣವಾಗಿಯೇ ಉಳಿಯಬೇಕು. ಅದನ್ನು ಜಿಎಫ್‌ಟಿಎಸ್ ಒಪ್ಪಿಸಬಾರದು. ಇದು ಆಯಾ ಪ್ರದೇಶದ ಅಭಿವೃದ್ಧಿಗೆ ಅಡ್ಡಿಯಾಗಲಿದೆ. ಅಲ್ಲದೇ ಈ ಪ್ರಸ್ತಾಪದಿಂದ ಮೈಸೂರು ವಿಮಾನ ನಿಲ್ದಾಣದ ವಾಣಿಜ್ಯ ಚಟುವಟಿಕೆಗಳು ಮತ್ತು ಭವಿಷ್ಯದ ವಿಸ್ತರಣೆಗೆ ತೊಡಕು ಉಂಟಾಗಬಹುದು ಎಂಬ ಅಭಿಪ್ರಾಯಗಳು ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗಿವೆ.**

> **ಯೋಜನೆಯ ಪ್ರಯೋಜನಗಳು**
>
> - **ಯೋಜನೆಯಿಂದ ಬೋಯಿಂಗ್ ಹಾಗೂ ಸರಕು ಸಾಗಾಣೆ ವಿಮಾನಗಳ ಸೇವೆ ಆರಂಭವಾಗಲಿದೆ.**
> - **ಕೃಷಿ ಮತ್ತು ಕೈಗಾರಿಕಾ ರಫ್ತುಗಳಿಗೆ ಮೀಸಲಾದ ಕಾರ್ಗೋ ಟರ್ಮಿನಲ್ ನಿರ್ಮಾಣದಿಂದ ಮೈಸೂರಿನ ಪ್ರಸಿದ್ಧ ಭೌಗೋಳಿಕ ಸೂಚಕ ಉತ್ಪನ್ನಗಳ ರಫ್ತಿಗೆ ವರದಾನವಾಗಲಿದೆ.**
> - **ಸುಧಾರಿತ ಸಂಪರ್ಕದಿಂದ ಮೈಸೂರು ದೇಶೀಯ-ಅಂತಾರಾಷ್ಟ್ರೀಯ ಪ್ರವಾಸಿಗರು ಆಗಮಿಸುವುದರಿಂದ ಪ್ರವಾಸೋದ್ಯಮಕ್ಕೆ ಉತ್ತೇಜನ ದೊರೆಯಲಿದೆ.**
> - **ಆರ್ಥಿಕ ಬೆಳವಣಿಗೆ ಸಹಾಯವಾಗುವುದಲ್ಲದೇ ಮೈಸೂರನ್ನು ಪ್ರಾದೇಶಿಕ ಹಬ್ ಆಗಿ ರೂಪಿಸಿ ಜಾಗತಿಕ ಸಂಪರ್ಕವನ್ನು ಬಲಪಡಿಸಲಿದೆ.**

ಅಂತರಾಳದಿಂದ... EDITORIAL

# ಕರ್ನಾಟಕದ ಸಂಸದರು ಏನು ಮಾಡುತ್ತಿದ್ದಾರೆ?

ಕರ್ನಾಟಕದ ಬಗ್ಗೆ ಕೇಂದ್ರ ಸರಕಾರ ಮಲತಾಯಿ ಧೋರಣೆಯನ್ನು ಅನುಸರಿಸುತ್ತಲೇ ಇದೆ. ಮೊದಲಿನಿಂದಲೂ ಇದು ನಡೆಯುತ್ತಿದ್ದರೂ ಕಳೆದ ಹನ್ನೊಂದು ವರ್ಷಗಳಿಂದ ಈ ತಾರತಮ್ಯ ನೀತಿ ತೀವ್ರಗೊಂಡಿದೆ. ಕೃಷ್ಣಾ ಮೇಲ್ದಂಡೆ ಯೋಜನೆ ಹಾಗೂ ಮಹಾದಾಯಿ ಯೋಜನೆಗಳಿರಲಿ, ರಾಜ್ಯಕ್ಕೆ ಬರಬೇಕಾದ ತೆರಿಗೆ ಬಾಕಿ ಇರಲಿ ಎಲ್ಲದರಲ್ಲೂ ಪಕ್ಷಪಾತದ ನೀತಿ ಮುಂದುವರಿದಿದೆ. ಲೋಕಸಭೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವ 28 ಮಂದಿ ಸಂಸದರಿದ್ದರೂ ಇವರಲ್ಲಿ ಯಾರೊಬ್ಬರೂ ಕರ್ನಾಟಕಕ್ಕೆ ಆಗಿರುವ, ಆಗುತ್ತಿರುವ ಅನ್ಯಾಯದ ಬಗ್ಗೆ ಲೋಕಸಭಾ ಅಧಿವೇಶನದಲ್ಲಿ ಗಟ್ಟಿಯಾಗಿ ಮಾತಾಡಿದ ಉದಾಹರಣೆಗಳಿಲ್ಲ. ಹೀಗಾಗಿ ರಾಜ್ಯಕ್ಕೆ ನಿರಂತರವಾಗಿ ಅನ್ಯಾಯವಾಗುತ್ತಲೇ ಇದೆ.

ಕರ್ನಾಟಕದ ಬಿಜೆಪಿ ಮತ್ತು ಜೆಡಿಎಸ್ ಸಂಸದರು ರಾಜ್ಯದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರವನ್ನು ಟೀಕಿಸುವಾಗ ನಾಲಿಗೆ ಸಡಿಲು ಬಿಟ್ಟು ಮಾತಾಡುತ್ತಾರೆ. ಆದರೆ ರಾಜ್ಯಕ್ಕೆ ಆಗಿರುವ ಅನ್ಯಾಯಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿಯವರ ಬಳಿ ಮಾತನಾಡಲು ಹೆದರುತ್ತಾರೆ. ಇದಕ್ಕೆ ಇತ್ತೀಚಿನ ಉದಾಹರಣೆ ಅಂದರೆ ಕಷ್ಣಾ ಮೇಲ್ದಂಡೆ ಯೋಜನೆ.

ಕರ್ನಾಟಕದ ರೈತಾಪಿ ಜನರ ಬದುಕನ್ನು ಬದಲಿಸಬಲ್ಲ ಕೃಷ್ಣಾ ಮೇಲ್ದಂಡೆ ಯೋಜನೆ ಎರಡು ಮತ್ತು ಮೂರನೇ ಹಂತದ ಕಾರ್ಯ ವಿಳಂಬವಾಗುತ್ತಲೇ ಇದೆ. ಕೃಷ್ಣಾ ಜಲ ವಿವಾದ ಕುರಿತು ನ್ಯಾಯ ಮಂಡಳಿ ತೀರ್ಪು ನೀಡಿ 15 ವರ್ಷಗಳು ಗತಿಸಿದವು. ಆದರೆ ಕೇಂದ್ರ ಸರಕಾರದ ಜಾಣ ನಿರ್ಲಕ್ಷ್ಯದ ಕಾರಣದಿಂದಾಗಿ ಕರ್ನಾಟಕ ತನ್ನ ಪಾಲಿನ ನೀರನ್ನು ಬಳಸಿಕೊಳ್ಳಲಾಗದೆ ವ್ಯರ್ಥವಾಗಿ ಹರಿದು ಹೋಗುತ್ತಿದೆ. ಇದರ ಬಗ್ಗೆ ರಾಜ್ಯದ ಸಂಸದರು ಮಾತಾಡಿದ ಉದಾಹರಣೆಗಳು ತೀರಾ ಕಡಿಮೆ. ಅದರ ಬದಲಾಗಿ ಇದಕ್ಕೆ ರಾಜ್ಯ ಸರಕಾರ ಕಾರಣವೆಂದು ಬಿಜೆಪಿ ಮತ್ತು ಇತರ ಪ್ರತಿಪಕ್ಷಗಳು ಆರೋಪಿಸುತ್ತಿವೆ. ಆದರೆ ಕೇಂದ್ರ ಸರಕಾರವೇ ಈ ವಿಳಂಬಕ್ಕೆ ಕಾರಣವೆಂದು ರಾಜ್ಯ ಸರಕಾರ ಪ್ರತ್ಯಾರೋಪ ಮಾಡುತ್ತಿದೆ. ಆದರೆ ವಾಸ್ತವವಾಗಿ ಕಳೆದ ಹದಿನೈದು ವರ್ಷಗಳ ಕಾಲಾವಧಿಯಲ್ಲಿ ಕರ್ನಾಟಕದಲ್ಲಿ ಆಡಳಿತ ನಡೆಸಿದ ಎಲ್ಲಾ ಪಕ್ಷಗಳೂ ಈ ಲೋಪದ ಹೊಣೆಯನ್ನು ಹೊತ್ತು ಕೊಳ್ಳಬೇಕಾಗಿದೆ.

> **ತಮಿಳುನಾಡಿನಲ್ಲಿ ತಮ್ಮ ರಾಜ್ಯದ ಹಿತಾಸಕ್ತಿಯ ಪ್ರಶ್ನೆ ಬಂದರೆ, ಪಕ್ಷಭೇದ ಮರೆತು ಎಲ್ಲಾ ಸಂಸದರೂ ಒಟ್ಟಾಗಿ ಧ್ವನಿಯೆತ್ತುತ್ತಾರೆ. ದಿಲ್ಲಿಯಲ್ಲೂ ತಮಿಳುನಾಡಿನ ಲಾಬಿ ಪ್ರಭಾವಿಯಾಗಿದೆ. ಆದರೆ ಕರ್ನಾಟಕದ ಸಂಸದರಲ್ಲಿ ಅದರಲ್ಲೂ ಲೋಕಸಭಾ ಸದಸ್ಯರಲ್ಲಿ ಅಂಥ ಒಮ್ಮತದ ಹಿತಾಸಕ್ತಿ ಕಂಡು ಬರುತ್ತಿಲ್ಲ. ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ರಾಜ್ಯಕ್ಕೆ ಅನ್ಯಾಯವಾಗುತ್ತಲೇ ಬಂದರೂ ನಮ್ಮ ರಾಜ್ಯದ ಸಂಸದರ ಸ್ಪಂದನ ತುಂಬಾ ವಿರಳ. ರಾಜ್ಯದ 28 ಲೋಕಸಭಾ ಸದಸ್ಯರಲ್ಲಿ ಕೇಂದ್ರದ ಆಡಳಿತಾರೂಢ ಬಿಜೆಪಿ ಸಂಸದರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ರಾಜ್ಯ ಸರಕಾರ ಸರ್ವಪಕ್ಷ ನಿಯೋಗವನ್ನು ಪ್ರಧಾನಿ ನರೇಂದ್ರ ಮೋದಿಯವರ ಬಳಿ ಕರೆದುಕೊಂಡು ಹೋಗಲು ಅನೇಕ ಬಾರಿ ಮುಂದಾಗಿದ್ದರೂ ಸಂಸದರಿಂದ ಸಕಾರಾತ್ಮಕ ಪ್ರತಿಕ್ರಿಯೆ ಬಂದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅನೇಕ ಬಾರಿ ಹೇಳಿದ್ದಾರೆ.**

ಆದರೆ ಕೃಷ್ಣಾ ನದಿ ನೀರನ್ನು ಮಹಾರಾಷ್ಟ್ರ, ಕರ್ನಾಟಕ ಮತ್ತು ಆಂಧ್ರಪ್ರದೇಶಗಳು ಹಂಚಿಕೊಳ್ಳಬೇಕಾಗಿರುವುದರಿಂದ ನದಿಯ ಪಾತ್ರದಲ್ಲಿ ಕೈಗೊಳ್ಳುವ ಯಾವುದೇ ಕಾಮಗಾರಿಗೆ ಕೇಂದ್ರ ಸರಕಾರ ಅಧಿಸೂಚನೆಯನ್ನು ಹೊರಡಿಸುವುದು ಕಡ್ಡಾಯವಾಗಿರುವುದರಿಂದ ಇದನ್ನು ರಾಷ್ಟ್ರೀಯ ಯೋಜನೆಯೆಂದು ಘೋಷಿಸಬೇಕಾಗುತ್ತದೆ.

ಅಧಿಸೂಚನೆಯನ್ನು ಹೊರಡಿಸಲು ಕರ್ನಾಟಕ ಒತ್ತಡ ಹೇರಬೇಕಾಗುತ್ತದೆ. ನಮ್ಮ ಸಂಸದರು ಇದರ ಬಗ್ಗೆ ಮಾತಾಡಬೇಕು. ಆದರೆ ಮಾತಾಡುತ್ತಿಲ್ಲ.

ಹೀಗಾಗಿ ಸದರಿ ಯೋಜನೆ ನನೆಗುದಿಗೆ ಬಿದ್ದಂತಾಗಿದೆ. ಕೃಷ್ಣಾ ಜಲ ವಿವಾದಕ್ಕೆ ಸಂಬಂಧಿಸಿದಂತೆ ನೀರು ಹಂಚಿಕೆ ಕುರಿತು 1956 ರಲ್ಲೇ ಆಂಧ್ರಪ್ರದೇಶ ಸರಕಾರ ಸುಪ್ರೀಂ ಕೋರ್ಟಿಗೆ ದೂರು ಸಲ್ಲಿಸಿತ್ತು. ಸುಪ್ರೀಂ ಕೋರ್ಟ್, ನಂತರ ರಚನೆಯಾದ ಕೃಷ್ಣಾ ಜಲವಿವಾದ ನ್ಯಾಯ ಮಂಡಳಿ ಆಗಾಗ ಮಹಾರಾಷ್ಟ್ರ, ಕರ್ನಾಟಕ ಹಾಗೂ ಆಂಧ್ರಪ್ರದೇಶಗಳಿಗೆ ನೀರುಹಂಚಿಕೆ ಮಾಡಿ ತೀರ್ಪು ನೀಡಿದೆ. ಆ ತೀರ್ಪಿನ ಅನ್ವಯ ಕರ್ನಾಟಕ ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲನೆಯ ಹಂತದ ಕಾಮಗಾರಿಯನ್ನು ಮುಗಿಸಿದೆ.

2ನೇ ಹಂತದ ಕಾಮಗಾರಿ ಇನ್ನೂ ಪೂರ್ಣವಾಗಿಲ್ಲ. ಏತನ್ಮಧ್ಯೆ ನ್ಯಾಯ ಮಂಡಳಿ ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು 519.6 ಮೀಟರ್‌ನಿಂದ 524.25 ಮೀಟರ್‌ಗಳಿಗೆ ಹೆಚ್ಚಿಸಲು ಹಾಗೂ ಕೃಷ್ಣಾ ಕೊಳ್ಳದ 173 ಟಿಎಂಸಿ ನೀರನ್ನು ಹಂಚಿಕೆ ಮಾಡಿ 2010ರಲ್ಲಿ ಅಂತಿಮ ತೀರ್ಪನ್ನು ನೀಡಿದೆ. ನ್ಯಾಯ ಮಂಡಳಿಯ ತೀರ್ಪು ಹೊರ ಬೀಳುತ್ತಿದ್ದಂತೆ ಬಿಜಾಪುರ, ಬಾಗಲಕೋಟೆ, ಯಾದಗಿರಿ, ಕಲಬುರಗಿ, ಕೊಪ್ಪಳ, ಗದಗ ಭಾಗದ ಬಹುತೇಕ ರೈತರು ಸಂಭ್ರಮಿಸಿದ್ದರು. ಆದರೆ ರಾಜ್ಯ ಸರಕಾರವು ಭೂಸ್ವಾಧೀನಕ್ಕೆ ತಯಾರಿ ಮಾಡಿಕೊಳ್ಳುತ್ತಿದ್ದಂತೆ ತಕರಾರುಗಳು ಶುರುವಾದವು. ಇದರಿಂದಾಗಿ ಭೂಸ್ವಾಧೀನ ಪ್ರಕ್ರಿಯೆ ವಿಳಂಬವಾಯಿತು. ಇದು ಒಂದೆಡೆಯಾದರೆ ಇನ್ನೊಂದೆಡೆ ಕೇಂದ್ರದ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರದ ಜಾಣ ನಿರ್ಲಕ್ಷ್ಯವೂ ಇದಕ್ಕೆ ಕಾರಣವಾಗಿದೆ. ಕೇಂದ್ರದ ಅಧಿಸೂಚನೆ ಒತ್ತಟ್ಟಿಗಿರಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಎರಡನೇ ಹಂತದ ಕಾರ್ಯವೇ ಇನ್ನೂ ಪೂರ್ಣವಾಗಿಲ್ಲ. ಇದು ಮುಗಿದರೆ ಮಾತ್ರ ಮೂರನೆಯ ಹಂತದ ಕಾರ್ಯ ಆರಂಭ. ಈಗಲೇ ಅದರ ಬಗ್ಗೆ ಮಾತಾಡುವುದರಲ್ಲಿ ಅರ್ಥವಿಲ್ಲ. ಎರಡನೇ ಹಂತಕ್ಕೆ ಸಂಬಂಧಿಸಿದಂತೆ ಪರಿಹಾರ ಕಾರ್ಯ, ಅದರಲ್ಲೂ ವಿಶೇಷವಾಗಿ ಪುನರ್ವಸತಿ ಕಾರ್ಯ ಮುಗಿದಿಲ್ಲ.

# 800 ಸಂಘಟನೆಗಳಿಂದ ಸನಾತನ ಸಂಸ್ಕೃತಿ ರಕ್ಷಣೆಯ ದೃಢ ನಿರ್ಧಾರ!

## ಸನಾತನ ರಾಷ್ಟ್ರ ಶಂಖನಾದ ಮಹೋತ್ಸವದ ಸಮಾರೋಪದಿಂದ ಶೌರ್ಯದ ಸ್ಫೂರ್ತಿ !




**ಹಿಂದೂಗಳ ಸಾಂಸ್ಕೃತಿಕ ಘೋಷಣಾ ಪತ್ರ**

• **ಉದಯವಾಹಿನಿ, ನವದೆಹಲಿ**

ದೇಶದ ರಾಜಧಾನಿಯ ಭಾರತ್ ಮಂಡಪಮ್‌ನಲ್ಲಿ ನಡೆದ ಎರಡು ದಿನಗಳ ಸನಾತನ ರಾಷ್ಟ್ರ ಶಂಖನಾದ ಮಹೋತ್ಸವಕ್ಕೆ ದೇಶದಾದ್ಯಂತ 3 ಸಾವಿರಕ್ಕೂ ಹೆಚ್ಚು ಹಿಂದೂಗಳು ಹಾಗೂ 800ಕ್ಕೂ ಹೆಚ್ಚು ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸಮಸ್ತ ಸಂತರು-ಮಹಂತರು, ಗಣ್ಯರು, ಮಂತ್ರಿಗಳು, ಉದ್ಯಮಿಗಳು, ನ್ಯಾಯವಾದಿಗಳು, ಚಿಂತಕರು, ರಕ್ಷಣಾ ತಜ್ಞರು ಮುಂತಾದವರು ಸನಾತನ ರಾಷ್ಟ್ರ ಸ್ಥಾಪನೆಗಾಗಿ ಸಂಸ್ಕೃತಿ ರಕ್ಷಣೆಯ ದೃಢ ನಿರ್ಧಾರ ವ್ಯಕ್ತಪಡಿಸಿದರು, ಜೊತೆಗೆ ಸುರಕ್ಷೆ, ಸಂಸ್ಕೃತಿ ಮತ್ತು ಶೌರ್ಯ ಈ ವಿಷಯಗಳ ಕುರಿತಾದ ಉಪದೇಶ ಮತ್ತು ಶಸ್ತ್ರಾಸ್ತ್ರ ಪ್ರದರ್ಶನವು ಎಲ್ಲರಲ್ಲಿ ಶೌರ್ಯದ ಸ್ಫೂರ್ತಿಯನ್ನು ಮೂಡಿಸಿತು.

**ನಮ್ಮ ಭಾರತವು ಹಿಂದೂ ರಾಷ್ಟ್ರವಲ್ಲ, ಪ್ರಜಾಸತ್ತಾತ್ಮಕ ಹಿಂದೂ ರಾಷ್ಟ್ರ ಆಗಲಿದೆ! - ಸ್ವಾಮಿ ವಿಜ್ಞಾನಾನಂದಜಿ:** ಈ ಮಹೋತ್ಸವದ ಸಮಾರೋಪದ ಸಮಯದಲ್ಲಿ ನಡೆದ ಸನಾತನ ರಾಷ್ಟ್ರ ಸಂಕಲ್ಪ ಸಂತಸಭೆಯಲ್ಲಿ ಹಿಂದೂಗಳ ಸಾಂಸ್ಕೃತಿಕ ಘೋಷಣಾ ಪತ್ರ ಎಂಬ ವಿಷಯದ ಬಗ್ಗೆ ಮಾತನಾಡಿದ ವಿಶ್ವ ಹಿಂದೂ ಪರಿಷತ್ತಿನ ಸಹ ಕಾರ್ಯದರ್ಶಿ ಸ್ವಾಮಿ ವಿಜ್ಞಾನಾನಂದಜಿ ಅವರು, ಯಾವ ರಾಷ್ಟ್ರವು ಹಿಂದೂ ಜೀವನ ಪದ್ಧತಿಯನ್ನು ಸ್ವೀಕರಿಸುತ್ತದೆಯೋ, ಅದು ಹಿಂದೂ ರಾಷ್ಟ್ರವಾಗುತ್ತದೆ. ಸ್ವಾತಂತ್ರ್ಯ ಪೂರ್ವ ಭಾರತವು ಸಮೃದ್ಧವಾಗಿತ್ತು. ಸೂರ್ಯೋದಯದಿಂದ ಹಿಡಿದು ಸೂರ್ಯಾಸ್ತದ ವರೆಗಿನ ಸಂಪೂರ್ಣ ಭೂಪ್ರದೇಶವು ಹಿಂದುಗಳ ಅಧೀನದಲ್ಲಿತ್ತು. ಹಿಂದಿನ ಕಾಲದಲ್ಲಿ ಈ ಎಲ್ಲಾ ಪ್ರದೇಶವನ್ನು ನಾವು ಕಳೆದುಕೊಂಡಿದ್ದೇವೆ.

ಇಂದು ಹಿಂದೂಗಳ ಆಡಳಿತ ಕೇವಲ ಭಾರತದ ಕೆಲವು ರಾಜ್ಯಗಳಲ್ಲಿ ಮಾತ್ರ ಇದೆ. ಆದ್ದರಿಂದ ಅವರು ಕೇವಲ ದಾಂಡಿಯಾ, ಹೋಳಿ ಅಥವಾ ದೀಪಾವಳಿಯಂತಹ ಹಬ್ಬಗಳಲ್ಲಿ ತೃಪ್ತರಾಗದೇ ಉಳಿದ ಪ್ರದೇಶಗಳನ್ನು ಗೆಲ್ಲಲು ಪ್ರಯತ್ನಿಸಬೇಕು. ಇದರಿಂದ ನಮ್ಮ ದೇಶವು ಕೇವಲ ಹಿಂದೂ ರಾಷ್ಟ್ರ ಮಾತ್ರವಲ್ಲ, ಪ್ರಜಾಸತ್ತಾತ್ಮಕ ಹಿಂದೂ ರಾಷ್ಟ್ರವಾಗಲಿದೆ ಎಂದು ಹೇಳಿದರು.

**ಸಂವಿಧಾನದಲ್ಲಿ ಈ ತಾರತಮ್ಯವೇಕೆ - ಹಿಂದು ಜನಜಾಗೃತಿ ಸಮಿತಿಯ ರಾಷ್ಟ್ರೀಯ ವಕ್ತಾರರಾದ ಶ್ರೀ ರಮೇಶ ಶಿಂದೆ:** ಇಂದು ಭಾರತೀಯ ಸಂವಿಧಾನದ ಪ್ರಸ್ತಾವನೆಯಲ್ಲಿ ಈ ದೇಶವು ಸೆಕ್ಯುಲರ್ ಆಗಿದೆ ಎಂದು ಉಲ್ಲೇಖಿಸಲಾಗಿದೆ; ಆದರೆ ಸಂವಿಧಾನದ 25ನೇ ಕಲಮಿನಿಂದ ಪಂಥದ ಆಧಾರದ ಮೇಲೆ ತಾರತಮ್ಯ ಮಾಡಲಾಗಿದೆ.

ಅಂದರೆ ಅಲ್ಪಸಂಖ್ಯಾತರಿಗಾಗಿ ಪ್ರತ್ಯೇಕ ನಿಯಮಗಳು, ಪ್ರತ್ಯೇಕ ಅನುಬಂಧಗಳು ಇತ್ಯಾದಿಗಳನ್ನು ಮಾಡಲಾಗಿದೆ. ಸೆಕ್ಯುಲರ್ ದೇಶದಲ್ಲಿ ಇಂತಹ ತಾರತಮ್ಯದ ಅಗತ್ಯವೇನು?

ಶಂಖನಾದ ಮಹೋತ್ಸವಕ್ಕೆ ಬಂದವರು ಇಂದಿನಿಂದ ತಮ್ಮ ತಮ್ಮ ಕ್ಷೇತ್ರದಲ್ಲಿ ಸನಾತನ ರಾಷ್ಟ್ರದ ಸ್ಥಾಪನೆಯ ಕಾರ್ಯವನ್ನು ಮಾಡುವ ಸುಸಂಕಲ್ಪ ಮಾಡಬೇಕು ಎಂದು ಛತ್ತೀಸ್‌ಗಢದ ಶದಾಣಿ ದರಬಾರದ ಪೀಠಾಧೀಶ್ವರರಾದ ಪ.ಪೂ. ಯುಧಿಷ್ಠಿರಲಾಲ್ ಮಹಾರಾಜರು ಕರೆ ನೀಡಿದರು.

ಹಾಗೆಯೇ, ಹಿಂದೂ ಜನಜಾಗೃತಿ ಸಮಿತಿಯ ಧರ್ಮಪ್ರಚಾರಕ ಸದ್ಗುರು ನೀಲೇಶ ಸಿಂಗಬಾಳ ಅವರು, ನ ಮೇ ಭಕ್ತಃ ಪ್ರಣಶ್ಯತಿ ಅಂದರೆ ನನ್ನ ಭಕ್ತನ ನಾಶ ಆಗುವುದಿಲ್ಲ ಎಂದು ಭಗವಂತನ ವಚನವಿದೆ. ಆದ್ದರಿಂದ ಆಪತ್ಕಾಲದಿಂದ ರಕ್ಷಣೆಗಾಗಿ ವಿವಿಧ ಸುರಕ್ಷಾತ್ಮಕ ಉಪಾಯಗಳೊಂದಿಗೆ ಈಶ್ವರನ ಭಕ್ತರಾಗುವುದು ಅವಶ್ಯಕ ಎಂದು ಹೇಳಿದರು.

ಈ ಮಹೋತ್ಸವವು ವಂದೇ ಮಾತರಂ' ಗೀತೆಯೊಂದಿಗೆ ಸಂಪನ್ನವಾಯಿತು. ಈ ಮಹೋತ್ಸವಕ್ಕೆ ಭಾರತ ಸರ್ಕಾರದ ಕಲೆ, ಸಂಸ್ಕೃತಿ, ಭಾಷಾ ವಿಭಾಗ, ಸಾಂಸ್ಕೃತಿಕ ಸಚಿವಾಲಯ ಹಾಗೂ ದೆಹಲಿ ರಾಜ್ಯ ಪ್ರವಾಸೋದ್ಯಮ ಇಲಾಖೆ ಸಹಕರಿಸಿದೆ.

> **ಕೇಂದ್ರ ಸರ್ಕಾರವು ಚಾರಿತ್ರ್ಯ ರೂಪಿಸುವ ಶೈಕ್ಷಣಿಕ ನೀತಿಯನ್ನು ಜಾರಿಗೊಳಿಸಬೇಕು : ಪವನ್ ಸಿನ್ಹಾ ಗುರೂಜಿ**
>
> **ಚಾರಿತ್ರ್ಯವಂತ ಜನರು ಮಾತ್ರ ಧರ್ಮಯುದ್ಧ ಮಾಡಬಹುದು. ಯಾರಲ್ಲಿ ಚಾರಿತ್ರ್ಯವಿಲ್ಲವೋ ಅವರು ಯುದ್ಧವನ್ನು ಗೆಲ್ಲಲು ಸಾಧ್ಯವಿಲ್ಲ. ಭಾರತವು ಚಾರಿತ್ರ್ಯವನ್ನು ಹೊಂದಿರುವುದರಿಂದ ಪಾಕಿಸ್ತಾನದ ವಿರುದ್ಧದ ಅನೇಕ ಸಣ್ಣ-ದೊಡ್ಡ ಯುದ್ಧಗಳಲ್ಲಿ ಭಾರತಕ್ಕೆ ಯಶಸ್ಸು ಸಿಕ್ಕಿತು. ಚಾರಿತ್ರ್ಯ ರೂಪಿಸುವುದು ಸುಲಭವಲ್ಲ ಮತ್ತು ಚಾರಿತ್ರ್ಯಕ್ಕೂ ಶಿಕ್ಷಣಕ್ಕೂ ಯಾವುದೇ ಸಂಬಂಧವಿಲ್ಲ. ಅನೇಕ ಉನ್ನತ ವಿದ್ಯಾಭ್ಯಾಸ ಮಾಡಿದವರು ಭ್ರಷ್ಟಾಚಾರಿಗಳಾಗಿದ್ದಾರೆ. ಪ್ರಸ್ತುತ ಶಿಕ್ಷಣವು ಯುವಕರಲ್ಲಿ ಚಾರಿತ್ರ್ಯವನ್ನು ಮೂಡಿಸಲು ಸಾಧ್ಯವಿಲ್ಲ, ಆದ್ದರಿಂದ ಕೇಂದ್ರ ಸರ್ಕಾರವು ಚಾರಿತ್ರ್ಯ ರೂಪಿಸುವ ಶೈಕ್ಷಣಿಕ ನೀತಿಯನ್ನು ಜಾರಿಗೆ ತರಬೇಕು ಎಂದು ಪಾವನ ಚಿಂತನಧಾರ ಆಶ್ರಮದ ಸಂಸ್ಥಾಪಕರಾದ ಪೂ. ಪವನ್ ಸಿನ್ಹಾ ಗುರೂಜಿ ಅವರು ಕರೆ ನೀಡಿದರು.**

# ಶ್ರೀರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಧನುರ್ಮಾಸ ಪೂಜೆ




• **ಉದಯವಾಹಿನಿ, ಬೆಂಗಳೂರು**

ಬೆಂಗಳೂರಿನ ಜಯನಗರದ ಐದನೇ ಬಡಾವಣೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮ ಪೂಜ್ಯ 1008 ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರ ಆದೇಶ ಅನುಗ್ರಹದೊಂದಿಗೆ ಶ್ರೀ ಮಠದ ಹಿರಿಯ ವ್ಯವಸ್ಥಾಪಕರಾದ ಆರ್ ಕೆ ವಾದೀಂದ್ರ ಆಚಾರ್ಯರ ನೇತೃತ್ವದಲ್ಲಿ ಡಿ.17 ರಿಂದ ಪ್ರಾರಂಭವಾಗುವ ಧನುರ್ಮಾಸದ ಪೂಜೆಗಳು ಪ್ರಾತಃ ಕಾಲದಲ್ಲಿ ನೆರವೇರಲಿದೆ ವಿಶೇಷವಾಗಿ ಹುಗ್ಗಿ ಮತ್ತು ಪೊಂಗಲ್ ನೈವೇದ್ಯ ಪೂಜೆಯು ವಿಶೇಷವಾಗಿ ನೆರವೇರುತ್ತದೆ ಎಂದು ಪುರೋಹಿತರಾದ ನಂದಕಿಶೋರ ಆಚಾರ್ಯರು ತಿಳಿಸಿದರು ಈ ಸೇವೆಯಲ್ಲಿ ಭಾಗವಹಿಸುವಂತಹ ಭಕ್ತರು ಶ್ರೀ ಮಠದ ಈ ನಂಬರ್ 9449133929 ವಾಟ್ಸಾಪ್ ಆನ್ಲೈನ್ ಮುಖಾಂತರ ಸೇವೆ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ 08022443962 ,9449133929,

# ಊಟ ಆದ ಕೂಡಲೇ ಸಿಹಿ ತಿನ್ನೋದು ಆರೋಗ್ಯಕ್ಕೆ ಒಳ್ಳೆಯದಾ?



☛ ವಿಶ್ವಾಸ್.ಡಿ.ಗೌಡ

ದಿನದ ಕೆಲಸ ಮುಗಿಸಿ ಸುಸ್ತಾಗಿ ಮನೆಗೆ ಬಂದಾಗ ಮನೆಯವರೊಂದಿಗೆ ಹರಟೆ ಹೊಡೆಯುತ್ತ ಉಣ್ಣುವದಕ್ಕಿಂತ ಹೆಚ್ಚಿನ ಮಜಾ ಮತ್ತೊಂದಿಲ್ಲ. ಆದರೆ, ನಿಜವಾದ ಆನಂದವು ಎಲ್ಲರೂ ಒಟ್ಟುಗೂಡಿದಾಗ ಮತ್ತು ಊಟದ ನಂತರ ಒಂದಿಷ್ಟು ಸಿಹಿತಿಂಡಿಗಳನ್ನು ಬಡಿಸಿದಾಗ ಬರುತ್ತದೆ. ನಮ್ಮಲ್ಲಿ ಹೆಚ್ಚಿನವರು ಊಟದ ನಂತರ ಸಿಹಿ ಅಥವಾ ಸಿಹಿ ತಿಂಡಿ ತಿನ್ನುವ ಅಭ್ಯಾಸವನ್ನು ಹೊಂದಿರುತ್ತಾರೆ. ಕೆಲವರಿಗೆ ಇದು ಎಷ್ಟು ಅಭ್ಯಾಸವಾಗಿರುತ್ತದೆ ಎಂದರೆ ಅದಕ್ಕೆ ವ್ಯಸನಿಯಾಗುತ್ತಾರೆ.

ತಿಂದ ನಂತರ, ಅವರು ಸಿಹಿತಿಂಡಿಗಳನ್ನು ತಿನ್ನದೆ ಇರಲಾರರು ಸಿಹಿ ತಿಂಡಿ ತಿನ್ನುವವರೆಗೆ ಮನಸ್ಸಿಗೆ ನೆಮ್ಮದಿ ಇರುವುದಿಲ್ಲ. ಸಭೆ ಸಮಾರಂಭಗಳು ಮತ್ತು ಒಕ್ಕೂಟಗಳಲ್ಲಿ ಊಟದ ನಂತರ ಸಿಹಿ ತಿಂಡಿ ಕಡ್ಡಾಯವಾಗಿ ಇರುತ್ತದೆ. ಆದರೆ, ಯಾವಾಗಲೂ ಊಟದ ನಂತರ ವಿಶೇಷವಾಗಿ ರಾತ್ರಿ ಊಟದ ನಂತರ ಸಿಹಿ ತಿನ್ನುವ ಈ ಅಭ್ಯಾಸವು ನಮ್ಮ ಆರೋಗ್ಯಕ್ಕೆ ಹಲವು ವಿಧಗಳಲ್ಲಿ ತುಂಬಾ ಹಾನಿಕಾರಕವಾಗಿದೆ. ಆರೋಗ್ಯ ತಜ್ಞರ ಪ್ರಕಾರ, ರಾತ್ರಿ ಊಟದ ನಂತರ ಸಿಹಿತಿಂಡಿಗಳನ್ನು ಸೇವಿಸುವುದರಿಂದ ದೇಹಕ್ಕೆ ಹಲವು ರೀತಿಯಲ್ಲಿ ಹಾನಿಯಾಗಬಹುದು, ಇದು ಅನೇಕರಿಗೆ ತಿಳಿದಿಲ್ಲ. ವೈದ್ಯರ ಪ್ರಕಾರ, ರಾತ್ರಿ ಊಟದ ನಂತರ ಸಿಹಿತಿಂಡಿಗಳನ್ನು ಸೇವಿಸುವುದರಿಂದ ಅನೇಕ ಆರೋಗ್ಯ ಹಾನಿಗಳಾಗುವ ಸಂಭವವಿರುತ್ತದೆ. ಭೋಜನದ ನಂತರ ಸಿಹಿ ಆಹಾರವನ್ನು ಸೇವಿಸುವುದರಿಂದ ದೇಹಕ್ಕೆ ಹೇಗೆ, ಏನು ಹಾನಿಯಾಗುತ್ತದೆ ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸೋಣ...

> **ಸಕ್ಕರೆ ಮಟ್ಟದ ಮೇಲೆ ಪರಿಣಾಮ ಬೀರುತ್ತದೆ...**
> **ರಾತ್ರಿ ಊಟದ ನಂತರ ಸಿಹಿತಿಂಡಿಗಳನ್ನು ತಿನ್ನುವುದು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಅಡ್ಡಿಪಡಿಸುತ್ತದೆ. ಕೆಲವೊಮ್ಮೆ ಸಕ್ಕರೆಯ ಮಟ್ಟವು ಹೆಚ್ಚಾಗುತ್ತದೆ ಮತ್ತು ಕೆಲವೊಮ್ಮೆ ಅದು ವೇಗವಾಗಿ ಇಳಿಯುತ್ತದೆ. ಇದು ಆತಂಕ, ಮೂಡ್ ಸ್ವಿಂಗ್, ತಲೆನೋವು ಮುಂತಾದ ಸಮಸ್ಯೆಗಳನ್ನು ಉಂಟುಮಾಡಬಹುದು. ನಿಮ್ಮ ಆರೋಗ್ಯಕ್ಕೆ ಇದು ತುಂಬಾ ಅಪಾಯಕಾರಿ.**

**ತೂಕಗಳಿಕೆ:** ರಾತ್ರಿ ಊಟದ ನಂತರ ಸಿಹಿತಿನ್ನುವುದರಿಂದ ತೂಕ ಹೆಚ್ಚಾಗಬಹುದು ಎಂದು ಹೇಳಲಾಗುತ್ತದೆ. ಸಿಹಿತಿಂಡಿಗಳು ದೇಹದಲ್ಲಿ ಇನ್ಸುಲಿನ್ ಮಟ್ಟವನ್ನು ಹೆಚ್ಚಿಸುತ್ತವೆ. ಈ ಕಾರಣದಿಂದಾಗಿ, ನಮ್ಮ ದೇಹದಲ್ಲಿ ಕೊಬ್ಬು ಸಂಗ್ರಹವಾಗಲು ಪ್ರಾರಂಭಿಸುತ್ತದೆ. ಹಾಗಾಗಿ ರಾತ್ರಿ ಊಟದ ನಂತರ ಸಿಹಿ ತಿನ್ನುವುದನ್ನು ತಪ್ಪಿಸಿ. ಆಹಾರ ಮತ್ತು ನಿದ್ರೆಯ ನಡುವೆ ಕನಿಷ್ಠ 2 ಗಂಟೆಗಳ ಅಂತರವನ್ನು ಇಟ್ಟುಕೊಳ್ಳಿ.

ಊಟವಾದ ಮೇಲೆ ತಕ್ಷಣ ನಿದ್ರಿಸಬೇಡಿ, ಸ್ವಲ್ಪ ಹೊತ್ತು ಶತಪದ ತಿರುಗಾಡಿ, ಇಲ್ಲದಿದ್ದರೆ ವಾಯುವಿನ ಸಮಸ್ಯೆಯಾಗಿ ತೊಂದರೆಯಾಗುತ್ತದೆ .


**ಜೀರ್ಣಾಂಗ ವ್ಯವಸ್ಥೆಯ ಮೇಲೆ ಪರಿಣಾಮ.. :**ರಾತ್ರಿಯ ಊಟದ ನಂತರ ಸಿಹಿತಿಂಡಿಗಳನ್ನು ಸೇವಿಸುವುದರಿಂದ ತೂಕ ಹೆಚ್ಚಾಗುವುದಲ್ಲದೆ ಹಾಗೂ ನಮ್ಮ ಜೀರ್ಣಾಂಗ ವ್ಯವಸ್ಥೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಇದರಿಂದ ನಿಮ್ಮ ಜೀರ್ಣಕ್ರಿಯೆಗೆ ತೊಂದರೆಯಾಗಬಹುದು. ಜೀರ್ಣಾಂಗ ವ್ಯವಸ್ಥೆಯು ನಮ್ಮ ದೇಹದಲ್ಲಿನ ರಕ್ತದ ಹರಿವನ್ನು ನಿಯಂತ್ರಿಸುತ್ತದೆ. ಅದರ ಕಾರ್ಯವು ಹದಗೆಟ್ಟರೆ, ಸಮಸ್ಯೆ ಹೆಚ್ಚಾಗಬಹುದು.

**ಹೃದಯದ ಮೇಲೆ ಪರಿಣಾಮ...:** ರಾತ್ರಿಯಲ್ಲಿ ನಿರಂತರವಾಗಿ ಸಿಹಿತಿಂಡಿಗಳನ್ನು ತಿನ್ನುವುದು ನಿಮ್ಮ ಹೃದಯದ ಮೇಲೆ ಪರಿಣಾಮ ಬೀರುತ್ತದೆ. ಅಧಿಕ ಸಕ್ಕರೆಯ ಪಾನೀಯಗಳನ್ನು ಕುಡಿಯುವುದು, ಸಿಹಿ ಆಹಾರವನ್ನು ಸೇವಿಸುವುದರಿಂದ ತೂಕ ಹೆಚ್ಚಾಗಬಹುದು, ಇದು ಅಧಿಕ ರಕ್ತದೊತ್ತಡ, ಹೃದ್ರೋಗದ ಅಪಾಯವನ್ನು ಹೆಚ್ಚಿಸುತ್ತದೆ. ಇದು ಹೃದಯದ ಮೇಲೆ ಪರಿಣಾಮ ಬೀರಿದರೆ, ಅದು ಆರೋಗ್ಯಕ್ಕೆ ತುಂಬಾ ಅಪಾಯಕಾರಿ.

**ನಿದ್ರೆಯ ಮೇಲೂ ಪರಿಣಾಮ ಬೀರುತ್ತದೆ...**ತಜ್ಞರ ಪ್ರಕಾರ, ರಾತ್ರಿಯಲ್ಲಿ ಸಿಹಿತಿಂಡಿಗಳನ್ನು ತಿನ್ನುವುದು ದೇಹದಲ್ಲಿ ಶಕ್ತಿಯ ಮಟ್ಟವನ್ನು ಹೆಚ್ಚಿಸುತ್ತದೆ. ಇದು ಮೆದುಳನ್ನು ಸಕ್ರಿಯಗೊಳಿಸುತ್ತದೆ, ಇದು ನಿಮ್ಮ ರಾತ್ರಿಯ ನಿದ್ರೆಯ ಚಕ್ರವನ್ನು ಅಡ್ಡಿಪಡಿಸುತ್ತದೆ. ನಿದ್ರೆಯ ಕೊರತೆಯೂ ಅನೇಕ ರೋಗಗಳಿಗೆ ಕಾರಣವಾಗಿದೆ.

# ರಾಮಾಯಣ

## ಶಬರಿಯ ದರ್ಶನ



• ಹಿಂದಿನ ಸಂಚಿಕೆಯಿಂದ **120 ನೆಯ ಅಧ್ಯಾಯ**

ಬಹುಕಾಲ ತಮ್ಮ ಸೇವೆಯನ್ನು ಮಾಡಿಕೊಂಡಿದ್ದ ನನ್ನನ್ನು ಕುರಿತು ಶಬರಿ, ಪುರುಷೋತ್ತಮನಾದ ಶ್ರೀರಾಮನು ಇಲ್ಲಿಗೆ ಬರುವನು. ನೀನು ಈ ಆಶ್ರಮದಲ್ಲಿಯೇ ಇದ್ದು ಲಕ್ಷ್ಮಣಸಮೇತನಾದ ಶ್ರೀರಾಮನ ದರ್ಶನವನ್ನು ಮಾಡು. ಆತನಿಗೆ ಅರ್ಘ್ಯಪಾದ್ಯಾದಿ ಸತ್ಕಾರಗಳನ್ನು ಮಾಡು. ಆತನ ಕೃಪಾವಲೋಕನದಿಂದ ಶಾಶ್ವತವಾದ ಸ್ವರ್ಗಲೋಕವನ್ನು ಪಡೆಯುವೆ ಎಂದು ಹೇಳಿ ಸ್ವರ್ಗಲೋಕವನ್ನೈದಿದರು. ಶ್ರೀರಾಮ ಹಾಗೂ ಆದಕಾರಣ ನಾನು ಈ ಪಂಪಾತೀರದಲ್ಲಿ ದೊರಕುವ ನಾನಾ ಬಗೆಯ ಹಣ್ಣುಗಳನ್ನು ನಿನಗೋಸ್ಕರ ಸಂಗ್ರಹಿಸಿದ್ದೆನು. ಈಗ ಅವುಗಳನ್ನು ನಿನಗೆ ಸಮರ್ಪಿಸಿ ಕೃತಾರ್ಥಳಾದೆನು ಎಂದು ನುಡಿದಳು. ಆ ಮಾತನ್ನು ಕೇಳಿ ಧರ್ಮಾತ್ಮನಾದ ಶ್ರೀರಾಮನು ಸುಜ್ಞಾನಿಯಾದ ಶಬರಿಯನ್ನು ಕುರಿತು ತಪಸ್ವಿನಿ, ನಾವು ಕಬಂಧನ ಮುಖದಿಂದ ನಿನ್ನ ಪ್ರಭಾವವನ್ನು ಕೇಳಿದೆವು. ಈಗ ನಿನ್ನ ಪ್ರಭಾವವನ್ನು ಪ್ರತ್ಯಕ್ಷವಾಗಿ ಕಂಡೆವು. ನಾವು ನಿನ್ನ ತಪೋವನವನ್ನು ಚೆನ್ನಾಗಿ ನೋಡಬೇಕು ಎಂದು ನುಡಿದನು. ಶಬರಿಯು ಮಹಾಪ್ರಸಾದವೆಂದು ಶ್ರೀರಾಮನ ವಾಕ್ಯವನ್ನಂಗೀಕರಿಸಿ ಆತನನ್ನು ಕುರಿತು ಶ್ರೀರಾಮ, ಇದೇ ನನ್ನ ತಪೋವನ. ಈ ತಪೋವನದಲ್ಲಿ ಮನೋಹರವಾದ ಮೃಗಪಕ್ಷಿಗಳು ವಿನೋಧದಿಂದ ವಿಹರಿಸಿಕೊಂಡಿವೆ. ಇದೇ ಮತಂಗವನ. ಇಲ್ಲಿ ಮಹಾತ್ಮರಾದ ನನ್ನ ಗುರುಗಳು ವಾಸವಾಗಿದ್ದರು. ಈ ಗುಹೆಯಲ್ಲಿರುವ ತೀರ್ಥವನ್ನು ಆ ಋಷಿಗಳು ಮಂತ್ರಗಳಿಂದ ಪವಿತ್ರ ಮಾಡಿದರು. ಪಂಪಾತೀರಕ್ಕೆ ಪಡುವಲಾಗಿರುವ ಈ ಆಶ್ರಮದಲ್ಲಿ ನಾನು ಆ ಋಷಿಗಳಿಗೆ ಬಹುಕಾಲ ಸೇವಾ ಸತ್ಕಾರಗಳನ್ನು ಮಾಡಿಕೊಂಡಿದ್ದೆನು. ಇಲ್ಲಿದ್ದ ಋಷಿಗಳು ಪ್ರಮೋಪವಾಸ ನಿಯಮಗಳಿಂದ ಶರೀರದಂಡನೆಯನ್ನು ಮಾಡಿಕೊಂಡಿದ್ದರು. ಅವರು ಫಲವುಗಳನ್ನು ತರಲಾರದಿದ್ದರೆ ಆ ಋಷಿಗಳ ತಪಃಪ್ರಭಾವದಿಂದ ಈ ವನದಲ್ಲಿರುವ ವೃಕ್ಷಗಳು ತಾವೇ ತಮ್ಮ ಫಲಪುಷ್ಪಗಳನ್ನು ಅವರಿಗೆ ತಂದುಕೊಡುತ್ತಿದ್ದವು. ಆ ಮುನಿಗಳು ಸ್ನಾನಮಾಡಿ ಹಾಕಿದ ಬಟ್ಟೆಗಳು ಇನ್ನೂ ಒದ್ದೆಯಾಗಿವೆ. ನೋಡು. ಅವರು ಪೂಜಿಸಿದ ದೇವತೆಗಳ ಮೇಲಿನ ಹೂಗಳು ಇನ್ನೂ ಬಾಡದೆ ಇವೆ, ನೋಡು. ಇದೇ ಈ ವನದ ಪ್ರಭಾವ. ನಾನು ಈ ವನದಲ್ಲಿ ಆ ಋಷಿಗಳು ಹೋದ ಪುಣ್ಯಲೋಕಕ್ಕೆ ಹೋಗಬೇಕೆಂಬ ಇಚ್ಛೆಯಿಂದ ಆ ಋಷಿಗಳ ಸೇವೆಯನ್ನು ಮಾಡಿಕೊಂಡಿದ್ದೆನು ಎಂದು ಹೇಳಿದಳು. ಆಗ ಲಕ್ಷ್ಮಣಸಮೇತನಾದ ಶ್ರೀರಾಮನು ಅತ್ಯಾಶ್ಚರ್ಯಕರವಾದ ಆ ಮತಂಗಾಶ್ರಮದ ಪ್ರಭಾವವನ್ನು ನೋಡಿ ಸಂತೋಷಯುಕ್ತನಾಗಿ ವ್ರತಸ್ಥೆಯಾದ ಶಬರಿಯನ್ನು ಕುರಿತು ಹೇ ತಪಸ್ವಿನಿ, ನೀನು ಮಾಡಿದ ಸತ್ಕಾರದಿಂದ ನಾನು ಸಂತೋಷಪಟ್ಟೆನು. ನೀನು ನಿನ್ನ ಮನಸ್ಸಿನಲ್ಲಿ ಯಾವ ಪುಣ್ಯಲೋಕಕ್ಕೆ ಹೋಗಬೇಕೆಂದೆಣಿಸಿದ್ದೀಯೋ ಆ ಲೋಕಕ್ಕೆ ಹೋಗು ಎಂದು ಹೇಳಿದನು.ಆಗ ಜಟಾಧಾರಿಯೂ ಕೃಷ್ಣಾಜಿನವನ್ನು ಧರಿಸಿದವಳೂ ವೃದ್ಧೆಯೂ ಆದ ಶಬರಿಯು ಅಗ್ನಿಯಲ್ಲಿ ತನ್ನ ಶರೀರವನ್ನು ಹೋಮಮಾಡಿದಳು.

ಮುಂದುವರಿಯುವುದು...

# ತಿಗಣೆ ಜಿರಳೆಗಳ ಕಾಟ ಜಾಸ್ತಿ ಆಗಿದ್ಯಾ?



**ಕರ್ಪೂರ, ಅಗರಬತ್ತಿಯ ಮನೆಮದ್ದನ್ನು ಟ್ರೈ ಮಾಡಿ**

ಜಿರಳೆ ಅಥವಾ ಇತರ ಕೀಟಗಳಿಗೆ ಹೋಲಿಸಿದರೆ ತಿಗಣೆಗಳು ಬಹಳಷ್ಟು ತೊಂದರೆ ಕೊಡುತ್ತವೆ. ನೋಡಲು ತುಂಬಾನೇ ಸಣ್ಣ ಗಾತ್ರದಲ್ಲಿ ಕಂಡು ಬರುವ ಈ ತಿಗಣೆಗಳು ಅಷ್ಟು ಸುಲಭವಾಗಿ ನಮ್ಮ ಕಣ್ಣಿಗೆ ಕಾಣಿಸುವುದಿಲ್ಲ.ಮನೆಯಲ್ಲಿ ತಿಗಣೆಗಳು ಕಾಣಿಸಿಕೊಂಡರೆ ಕರ್ಪೂರ ಅಥವಾ ಊದುಬತ್ತಿಯ ಪುಡಿ ಬಳಸಿ ಮನೆಮದ್ದನ್ನು ಮಾಡುವ ವಿಧಾನವನ್ನು ನೋಡೋಣ ಬನ್ನಿ

ಜಿರಳೆಗಳು ಮನೆಯೊಳಗೆ ಸೇರಿಸಿಕೊಂಡರೆ, ಕೆಲವೇ ದಿನಗಳಲ್ಲಿ ಇವುಗಳ ಸಂತತಿ ಒಂದೂ ಇರದಂತೆ ನೋಡಿಕೊಳ್ಳಬಹುದು.ಆದರೆ ತಿಗಣೆಗಳು ಹಾಗಲ್ಲ ಒಮ್ಮೆ ಮನೆಯೊಳಗೆ ಕಾಲಿಟ್ಟರೆ, ಆಮೇಲೆ ಮುಗಿಯಿತು, ಇವುಗಳನ್ನು ಹೊರಹಾಕುವುದು ಅಷ್ಟು ಸುಲಭದ ಮಾತಲ್ಲ.ಇನ್ನು ತಿಗಣೆಗಳು ಕೋಣೆಯ ಮೂಲೆ, ಬಾಗಿಲಿನ ಸಂಧಿಗಳಲ್ಲಿ, ಮಲಗುವ ಹಾಸಿಗೆ, ದಿಂಬು ಅಥವಾ ಕಪಾಟು, ಮರದ ಪೀಠೋಪಕರಣಗಳ ಸಂಧಿಗಳಲ್ಲಿ ಸೇರಿಕೊಂಡರೆ ಅಂತೂ ತಿಂಗಳುಗಟ್ಟಲೆಯೂ ಕೂಡ ಅಲ್ಲೇ ಪರ್ಮನೆಂಟ್ ಆಗಿ ತಮ್ಮ ಜಾಗವನ್ನು ಭದ್ರಪಡಿಸಿ ಕೊಳ್ಳುತ್ತವೆ, ಕೊನೆಗೆ ಇವುಗಳ ಕಾಟವು ಕೂಡ ಹೆಚ್ಚಾಗ ತೊಡಗುತ್ತದೆ. ಸಾಮಾನ್ಯವಾಗಿ ಇವುಗಳ ಕಾಟ ತಡೆಯಲು ಸಾಧ್ಯವಾಗದೆ ಕೆಮಿಕಲ್ಸ್ ಅಂಶ ಹೆಚ್ಚಿರುವ ಔಷಧಿಗಳನ್ನು ಸಿಂಪಡನೆ ಮಾಡಬಹುದು ಆದರೆ ಇದರಿಂದ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಕೂಡ ಹೆಚ್ಚಿರುತ್ತದೆ. ಪ್ರಸ್ತುತ ಇಂದಿನ ಲೇಖನದಲ್ಲಿ ಕರ್ಪೂರ ಹಾಗೂ ಪೂಜೆಗೆ ಬಳಸುವ ಊದುಬತ್ತಿಯನ್ನು ಬಳಸಿ ತಿಗಣೆ ಕಾಟಕ್ಕೆ ಹೇಗೆ ಮನೆಮದ್ದುಗಳನ್ನು ಮಾಡಬಹುದು ಎನ್ನುವುದರ ಬಗ್ಗೆ ನೋಡೋಣ

**ಕರ್ಪೂರ, ಅಗರಬತ್ತಿಗಳ ಕಪ್ಪುಪುಡಿ:** ಮೊದಲಿಗೆ ದಿನಸಿ ಅಂಗಡಿಯಿಂದ ಸಣ್ಣಪ್ಯಾಕೆಟ್ ಕರ್ಪೂರವನ್ನು ಖರೀದಿಸಿ, ಆಮೇಲೆ ಈ ಕರ್ಪೂರದ ತುಂಡುಗಳನ್ನು ಚೆನ್ನಾಗಿ ಪುಡಿಮಾಡಿ ಅಥವಾ ಪೌಡರ್ ರೀತಿ ಮಾಡಿಕೊಳ್ಳಿ. ಅಲ್ಲದೆ, ಪೂಜಾ ಕೊಠಡಿಯಿಂದ ಸುಮಾರು 5 ಅಗರಬತ್ತಿಗಳ ಮೇಲಿನ ಕಪ್ಪು ಪುಡಿಯನ್ನು ತೆಗೆಯಿರಿ ಹಾಗೂ ಇವೆಲ್ಲಾವನ್ನು ಒಂದು ಬೌಲ್‌ನಲ್ಲಿ ಹಾಕಿ, ಚೆನ್ನಾಗಿ ಮಿಶ್ರ ಮಾಡಿಕೊಳ್ಳಿ. ಕರ್ಪೂರದ ಬಲವಾದ ವಾಸನೆ ಮತ್ತು ಧೂಪ ದ್ರವ್ಯದ ಅಥವಾ ಅಗರಬತ್ತಿಗಳ ಮೇಲ್ಮೈಯಲ್ಲಿರುವ ಕಪ್ಪುಪುಡಿಯ ಕೀಟಗಳನ್ನು ಹಿಮ್ಮೆಟ್ಟಿಸುವಲ್ಲಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತದೆ.


**ಕೀಟ ನಿವಾರಕ ಸ್ಪ್ರೇ ತಯಾರಿಸಿ:** ಎರಡೂವರೆ ಗಂಟೆಗಳ ನಂತರ, ನೆನೆಸಿದ ಮಿಶ್ರಣವನ್ನು ಪಾತ್ರೆಯಿಂದ ಸೋಸಿ ದ್ರವವನ್ನು ಸ್ಪ್ರೇ ಬಾಟಲಿಗೆ ಸುರಿಯಿರಿ. ಈ ದ್ರವವು ಬಲವಾದ ಕರ್ಪೂರದ ವಾಸನೆಯನ್ನು ಹೊಂದಿದ್ದು, ಕೀಟಗಳು ಹತ್ತಿರ ಬರಲು ಹೆದರುತ್ತವೆ. ಹೀಗೂ ಮಾಡಬಹುದು ಸ್ವಲ್ಪ ಕರ್ಪೂರದ ಮಾತ್ರೆಗಳನ್ನು ತೆಗೆದುಕೊಂಡು ಅದನ್ನು ಒಂದು ಕಾಟನ್ ಬಟ್ಟೆಯಲ್ಲಿ ಸುತ್ತಿ, ಮಲಗುವ ಹಾಸಿಗೆ ಕೆಳಗಡೆ ಇಟ್ಟು ಮಲಗುವುದರಿಂದ ತಿಗಣೆಗ ಬಹಳ ಬೇಗನೇ ದೂರವಾಗುತ್ತದೆ ಎನ್ನಲಾಗುತ್ತದೆ

> **ಮಿಶ್ರಣವನ್ನು 2 ಭಾಗಗಳಾಗಿ ವಿಂಗಡಿಸಿ**
> - ಈಗ ಈ ಪುಡಿಯನ್ನು ಎರಡು ಭಾಗಗಳಾಗಿ ವಿಂಗಡಿಸಿ
> - ದೊಡ್ಡ ಭಾಗ
> - ಎರಡನೆಯದು ಸಣ್ಣ ಭಾಗ
> - ದೊಡ್ಡ ಭಾಗವನ್ನು ಪ್ಲಾಸ್ಟಿಕ್ ಪಾತ್ರೆಯಲ್ಲಿ ಸುರಿಯಿರಿ, ಸ್ವಲ್ಪ ನೀರು ಸೇರಿಸಿ ಸುಮಾರು ಎರಡೂವರೆ ಗಂಟೆಗಳ ಕಾಲ ನೆನೆಯಲು ಬಿಡಿ.
> - ಈ ಸಮಯದಲ್ಲಿ, ಕರ್ಪೂರ, ಧೂಪದ್ರವ್ಯ ಪದಾರ್ಥಗಳು ಸಂಪೂರ್ಣವಾಗಿ ಕರಗಿ, ಬಲವಾದ ವಾಸನೆಯ ದ್ರವವನ್ನು ಸೃಷ್ಟಿಸುತ್ತವೆ. ಸಣ್ಣ ಭಾಗವನ್ನು ನಂತರ ಪೊಟ್ಲಿ (ಪೇಸ್ಟ್) ತಯಾರಿಸಲು ಬಳಸಲಾ ಗುತ್ತದೆ, ಅದು ದೀರ್ಘ ಕಾಲದವರೆಗೆ ಬೆಡ್‌ಬಗ್‌ಗಳನ್ನು ದೂರವಿಡುತ್ತದೆ.

**ಎರಡೂವರೆ ಗಂಟೆಗಳ ನಂತರ ಸ್ಪ್ರೇ ಮಾಡಲು ಶುರುಮಾಡಿ :** ಎರಡೂವರೆ ಗಂಟೆಗಳ ನಂತರ, ನೆನೆಸಿದ ಮಿಶ್ರಣದ ಬಹುಭಾಗವನ್ನು ಪಾತ್ರೆಯಿಂದ ಸೋಸಿ ಸ್ಪ್ರೇ ಬಾಟಲಿಗೆ ತುಂಬಿಸಿ. ಈ ದ್ರವವು ಬಲವಾದ ಕರ್ಪೂರದ ಪರಿಮಳವನ್ನು ಹೊಂದಿರುತ್ತದೆ. ಹಾಸಿಗೆಯ ಕೆಳಭಾಗದಲ್ಲಿ, ಮಂಚದ ಅಂಚುಗಳಲ್ಲಿ, ಗೋಡೆಗಳ ಮೂಲೆಗಳಲ್ಲಿ ಪೀಠೋಪಕರಣ ಗಳ ಬಿರುಕುಗಳು ಸೇರಿದಂತೆ ಕೀಟಗಳ ಸಮಸ್ಯೆ ಇರುವ ಪ್ರದೇಶಗಳಲ್ಲಿ ಈ ಸ್ಪ್ರೇ ಅನ್ನು ಪ್ರತಿದಿನ ಸಿಂಪಡಿಸಿ. ಸಾಮಾನ್ಯವಾಗಿ ರಾತ್ರಿಯಲ್ಲಿ ಕೀಟಗಳು ಹೊರ ಬರುತ್ತವೆ, ಆದ್ದರಿಂದ ಸುವಾಸ ನೆಯು ಸಮವಾಗಿ ಹರಡಲು ಹಗಲಿನಲ್ಲಿ ಸಿಂಪಡಿಸುವುದು ಉತ್ತಮ.


# ಪೇರಳೆ ಎಲೆಯ ಕಷಾಯ

ಪೇರಳೆ ಎಲೆಯ ಕಷಾಯವನ್ನು ದಿನಕ್ಕೆ ಮೂರ್ನಾಲ್ಕು ಬಾರಿ ಕುಡಿಯೋದ್ರಿಂದ ಆರೋಗ್ಯಕ್ಕೆ ಸಾಕಷ್ಟು ಪ್ರಯೋಜನಗಳಿವೆ ಎನ್ನಲಾಗುತ್ತದೆ. ಈ ಕಷಾಯವನ್ನು ಹೇಗೆ ತಯಾರಿಸುವುದು ತಿಳಿಯೋಣ. ಪೇರಳೆ ಹಣ್ಣು ವಿಟಮಿನ್ ಸಿ ಯ ಸಮೃದ್ಧ ಮೂಲವಾಗಿದ್ದು, ರೋಗ ನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ. ಇದರಲ್ಲಿ ಉತ್ಕರ್ಷಣ ನಿರೋಧಕಗಳು ಸಮೃದ್ಧವಾಗಿದ್ದು, ಆಕ್ಸಿಡೇಟಿವ್ ಒತ್ತಡ ಮತ್ತು ಉರಿಯೂತವನ್ನು ಎದುರಿಸಲು ಸಹಾಯ ಮಾಡುತ್ತದೆ. ಪೇರಳೆಯಲ್ಲಿ ಫೈಬರ್ ಕೂಡ ಸಮೃದ್ಧವಾಗಿದೆ, ಕ್ಯಾಲೊರಿಗಳು ಕಡಿಮೆ ಇರುವುದರಿಂದ ತೂಕ ಇಳಿಸುವವರಿಗೆ ಇದು ಸೂಕ್ತವಾಗಿರುತ್ತದೆ. ಪೇರಳೆ ಕೆಟ್ಟ ಕೊಲೆಸ್ಟ್ರಾಲ್ ಎಲ್‌ಡಿಎಲ್ ಟ್ರೈಗ್ಲಿಸರೈಡ್‌ಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಮತ್ತು ಪೇರಳೆಯಲ್ಲಿರುವ ಪೊಟ್ಯಾಸಿಯಮ್ ರಕ್ತದೊತ್ತಡವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ, ಹೃದಯದ ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ ಎಂದು ಹೇಳಲಾಗುತ್ತದೆ. ಆದರೆ ಪೇರಳೆ ಎಲೆಗಳು ಅಷ್ಟೇ ಪೌಷ್ಟಿಕವಾಗಿದೆ ಎಂದು ನಿಮಗೆ ತಿಳಿದಿದೆಯೇ. ಯೂಟ್ಯೂಬ್‌ನ ವಿಡಿಯೋದಲ್ಲಿ, ಸದ್ಗುರುಗಳು ದಿನಕ್ಕೆ 3-4 ಬಾರಿ ಪೇರಳೆ ಎಲೆಯ ಮಿಶ್ರಣವನ್ನು ಕುಡಿಯುವುದನ್ನು ಉಲ್ಲೇಖಿಸಿದ್ದಾರೆ. ಏಕೆ ಎಂದು ಕಂಡುಹಿಡಿಯಲು ಕೆಳಗೆ ಸ್ಕ್ರಾಲ್ ಮಾಡಿ.



**ಸದ್ಗುರು ಏನು ಹೇಳುತ್ತಾರೆ:** ವಿಡಿಯೋದಲ್ಲಿ, ನೀವು ಮಲಬದ್ಧತೆಯಿಂದ ಬಳಲುತ್ತಿದ್ದರೆ, ಪೇರಳೆ ತಿನ್ನಿರಿ ಎಂದು ಅವರು ಉಲ್ಲೇಖಿಸಿದ್ದಾರೆ. ನಿಮಗೆ ಅತಿಸಾರ ಇದ್ದರೆ, ಪೇರಳೆ ಎಲೆಯ ನೀರನ್ನು ದಿನಕ್ಕೆ 3-4 ಬಾರಿ ಕುಡಿಯಲು ಪ್ರಾರಂಭಿಸಿ. ಅನಾರೋಗ್ಯಕರ ಆಹಾರ ಪದ್ಧತಿಗಳನ್ನು ಅನುಸರಿಸುವ ಪರಿಣಾಮವಾಗಿ ಅವರು ಅತಿಸಾರವನ್ನು ವಿವರಿಸುತ್ತಾರೆ. ಆದ್ದರಿಂದ, ಅವರ ಪ್ರಕಾರ, ಕರುಳು ಮತ್ತು ಜೀರ್ಣಾಂಗ ವ್ಯವಸ್ಥೆಯನ್ನು ಆರೋಗ್ಯಕರವಾಗಿಡಲು ನಿಮ್ಮ ಆಹಾರ ಪದ್ಧತಿಯನ್ನು ಸುಧಾರಿಸುವುದು ಮುಖ್ಯ.

**ಅಧ್ಯಯನವು ಏನು ಹೇಳುತ್ತದೆ:** ತೀವ್ರವಾದ ಸಾಂಕ್ರಾಮಿಕ ಅತಿಸಾರದಿಂದ ಬಳಲುತ್ತಿರುವ ರೋಗಿಗಳಲ್ಲಿ ಮೌಖಿಕ ಪೇರಳೆ ಎಲೆ ಕಷಾಯದ ಯಾದೃಚ್ಛಿಕ ಮುಕ್ತ ಲೇಬಲ್ ಪರಿಣಾಮಕಾರಿತ್ವದ ಕ್ಲಿನಿಕಲ್ ಪ್ರಯೋಗ ಎಂಬ ಶೀರ್ಷಿಕೆಯ ಅಧ್ಯಯನವು, 14 ಎಲೆಗಳ ಕಷಾಯವು ಅಪರಿಚಿತ ಕಾರಣದ ವಯಸ್ಕ ತೀವ್ರ ಜಟಿಲವಲ್ಲದ ಅತಿಸಾರಕ್ಕೆ ಸುರಕ್ಷಿತ ಚಿಕಿತ್ಸೆಯಾಗಿದೆ ಎಂದು ಹೇಳುತ್ತದೆ. ತೀವ್ರವಾದ ಅತಿಸಾರದಿಂದ ಬಳಲುತ್ತಿರುವ 137 ವಯಸ್ಕರಲ್ಲಿ (18-60 ವರ್ಷಗಳು), 109 ಜನರನ್ನು (57% ಮಹಿಳೆಯರು, 43% ಪುರುಷರು) ಸೇರಿಸಲಾಯಿತು.



## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ:** ಪ್ರಣಯ ಮತ್ತು ಸಾಮಾಜಿಕವಾಗಿ ಬೆರೆಯುವುದು ಬಾಕಿಯಿರುವ ಕೆಲಸಗಳ ಹೊರತಾಗಿಯೂ ನಿಮ್ಮ ಮನಸ್ಸಿನ ಮೇಲೆ ಪ್ರಭಾವ ಬೀರುತ್ತವೆ. ನಿಮ್ಮ ಸುತ್ತ ನಡೆಯುವುದನ್ನು ನೋಡಿಕೊಳ್ಳಿ.

**ವೃಷಭ:** ಸಂಘರ್ಷವು ಅನಾರೋಗ್ಯವನ್ನು ಇನ್ನಷ್ಟು ಹಾಳುಮಾಡಬಹುದಾದ್ದರಿಂದ ಅದನ್ನು ತಪ್ಪಿಸಿ. ಹಣ ನಿಮಗೆ ಅಗತ್ಯವಾಗಿದೆ ಆದರೆ ನಿಮ್ಮ ಸಂಬಂಧಗಳನ್ನು ಹಾಳುಮಾಡುವಷ್ಟು ಹಣದ ಬಗ್ಗೆ ಗಂಭೀರವಾಗಬೇಡಿ.

**ಮಿಥುನ:** ನೀವು ನಿಮ್ಮ ಭಾವನೆಗಳನ್ನು ನಿಯಂತ್ರಿಸಬೇಕು ಮತ್ತು ನಿಮ್ಮ ಭಯವನ್ನು ಸಾಧ್ಯವಾದಷ್ಟು ಬೇಗ ತೊಡೆದುಹಾಕಬೇಕು ಏಕೆಂದರೆ ಇವು ತಕ್ಷಣವೇ ನಿಮ್ಮ ಆರೋಗ್ಯವನ್ನು ಬಾಧಿಸಬಹುದು.

**ಕರ್ಕಾಟಕ:** ನೀವು ಬಹುಕಾಲದಿಂದ ಎದುರು ನೋಡುತ್ತಿದ್ದ ಜೀವನದ ಒತ್ತಡಗಳಿಂದ ಶಮನ ಪಡೆಯುತ್ತೀರಿ. ಅವುಗಳನ್ನು ಶಾಶ್ವತವಾಗಿ ದೂರವಿರಿಸಿರಲು ನಿಮ್ಮ ಜೀವನಶೈಲಿಯನ್ನು ಬದಲಿಸಲು ಇದು ಸರಿಯಾದ ಸಮಯ.

**ಸಿಂಹ:** ನಿಮ್ಮ ಸಕಾರಾತ್ಮಕ ದೃಷ್ಟಿಕೋನ ನಿಮ್ಮ ಸುತ್ತಲಿನವರನ್ನು ಆಕರ್ಷಿಸಬಹುದು. ನಿಮ್ಮ ವೆಚ್ಚಗಳನ್ನು ನಿಯಂತ್ರಿಸಲು ಪ್ರಯತ್ನಿಸಿ ಮತ್ತು ಇಂದು ತುಂಬಾ ಖರ್ಚು ಮಾಡಬೇಡಿ.

**ಕನ್ಯಾ:** ಜನರು ನಿಮ್ಮ ಮನೆಯ ಬಗ್ಗೆ ಏನು ಯೋಚಿಸುತ್ತಾರೆ ಎಂದು ನಿಮಗೆ ಈ ವಿಷಯದಿಂದ ಯಾವುದೇ ವ್ಯತ್ಯಾಸ ಬೀಳುವುದಿಲ್ಲ, ಇಂದು ನೀವು ಉಚಿತ ಸಮಯದಲ್ಲಿ ಯಾರೊಂದಿಗೂ ಭೇಟಿ ಮಾಡಲು ಇಷ್ಟ ಪಡುವುದಿಲ್ಲ

**ತುಲಾ:** ನೀವು ವಿಶ್ರಾಂತಿ ಪಡೆಯಬೇಕು ಮತ್ತು ನಿಕಟ ಸ್ನೇಹಿತರು ಮತ್ತು ಕುಟುಂಬದ ಸದಸ್ಯರ ನಡುವೆ ಸಂತೋಷವಾಗಿರಲು ಪ್ರಯತ್ನಿಸಬೇಕು ಪ್ರಣಯದ ನೆನಪುಗಳು ನಿಮ್ಮ ದಿನವನ್ನು ಆಕ್ರಮಿಸುತ್ತವೆ.

**ವೃಶ್ಚಿಕ:** ಇಂದು ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ನಿಮ್ಮ ಹಣವನ್ನು ಸಂಗ್ರಹಿಸಿದಾಗ ಮಾತ್ರ ಹಣ ನಿಮ್ಮ ಕೆಲಸಕ್ಕೆ ಬರುತ್ತದೆ.

**ಧನಸ್ಸು:** ಹಿರಿಯರು ಉತ್ತಮ ಲಾಭ ಪಡೆಯಲು ತಮ್ಮ ಹೆಚ್ಚುವರಿ ಶಕ್ತಿಯನ್ನು ಸಕಾರಾತ್ಮಕ ಬಳಕೆಗೆ ವಿನಿಯೋಗಿಸಬೇಕು. ಬುದ್ಧಿವಂತ ಹೂಡಿಕೆಗಳು ಮಾತ್ರ ಆದಾಯಗಳನ್ನು ನೀಡುತ್ತವೆ.

**ಮಕರ:** ಪ್ರೀತಿ ದೇವರ ಪೂಜೆಗೆ ಪರ್ಯಾಯವಾಗಿದೆ. ಇದು ಅತ್ಯಂತ ಆಧ್ಯಾತ್ಮಿಕವೂ ಹಾಗೂ ಧಾರ್ಮಿಕವೂ ಆಗಿದೆ. ನೀವು ಇದನ್ನು ತಿಳಿಯುತ್ತೀರಿ. ವ್ಯಾಪಾರ ಸುಧಾರಣೆಯ ಬಗ್ಗೆ ಮಾತನಾಡುವಾಗ ಭಾವನೆಗಳನ್ನು ನಿಯಂತ್ರಣದಲ್ಲಿಡಿ.


**ಕುಂಭ:** ನೀವು ಅತ್ಯಂತ ಅನಿರೀಕ್ಷಿತ ಮೂಲಗಳಿಂದ ಗಳಿಕೆಯ ಸಾಧ್ಯತೆಯನ್ನು ಹೊಂದಿದ್ದೀರಿ. ಕುಟುಂಬದ ಸದಸ್ಯರ ಖುಷಿಯ ಸ್ವಭಾವ ಮನೆಯಲ್ಲಿನ ವಾತಾವರಣವನ್ನು ಹಗುರಗೊಳಿಸುತ್ತದೆ.

**ಮೀನ:** ನಿಕಟ ಸಂಬಂಧಿಗಳ ಮನೆಗೆ ಹೋಗುವುದರಿಂದ ಇಂದು ನಿಮ್ಮ ಆರ್ಥಿಕ ಪರಿಸ್ಥಿತಿ ಹಾಳಾಗಬಹುದು. ಮನೆಯಲ್ಲಿನ ಕೆಲವು ಬದಲಾವಣೆಗಳು ನಿಮ್ಮನ್ನು ಭಾವುಕರನ್ನಾಗಿಸಬಹುದು.

---

### • ಲಕ್ಷ ಲಕ್ಷ ಖರ್ಚು ಮಾಡಿ ನಿರ್ಮಿಸಿರುವ ಶೌಚಾಲಯ ಪಾಳು • ಸಾರ್ವಜನಿಕರ ಪರದಾಟ

# ನಗರಸಭೆಯ ಅವಾಂತರ: ಬಾಗಿಲು ತೆರೆಯದ ಶೌಚಾಲಯ; ಬಯಲೇ ಗತಿ



ಉದಯವಾಹಿನಿ ಚಿತ್ರ

**ಶೌಚಾಲಯಕ್ಕಾಗಿ ಸಾರ್ವಜನಿಕರು ಪರದಾಟ**

• ಉದಯವಾಹಿನಿ, ಹಾವೇರಿ

ಜಿಲ್ಲಾ ಕೇಂದ್ರವಾಗಿರುವ ಹಾವೇರಿ ನಗರದಲ್ಲಿ ಹೊಸದಾಗಿ ನಿರ್ಮಿಸಿರುವ ಶೌಚಾಲಯಗಳು ಉದ್ಘಾಟನೆಯಾಗದೇ ಬಾಗಿಲು ಬಂದ್ ಆಗಿದ್ದು, ನಿತ್ಯವೂ ನಗರದಲ್ಲಿ ಸಂಚರಿಸುವ ಸಾರ್ವಜನಿಕರು ಶೌಚಾಲಯಕ್ಕಾಗಿ ಪರದಾಡುತ್ತಿದ್ದಾರೆ.

ಅಖಂಡ ಧಾರವಾಡ ಜಿಲ್ಲೆಯಿಂದ ವಿಭಜನೆಗೊಂಡು ಹೊಸ ಜಿಲ್ಲೆಯಾಗಿ 28 ವರ್ಷವಾದರೂ ಹಾವೇರಿ ನಗರದಲ್ಲಿ ಸಾಕಷ್ಟು ಮೂಲ ಸೌಕರ್ಯಗಳ ಸಮಸ್ಯೆಯಿದೆ. ನಗರದ ಮಾರುಕಟ್ಟೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಇಂದಿಗೂ ಸುಸಜ್ಜಿತ ಶೌಚಾಲಯಗಳ ಕೊರತೆ ಕಾಡುತ್ತಿದೆ. ಸ್ವಚ್ಛತೆ ಹಾಗೂ ಶೌಚಾಲಯ ನಿರ್ಮಾಣ-ನಿರ್ವಹಣೆಗಾಗಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಸಾಕಷ್ಟು ಯೋಜನೆಗಳನ್ನು ಜಾರಿಗೊಳಿಸಿದೆ. ಈ ಯೋಜನೆಯಡಿ ನಗರದಲ್ಲೂ ಕಾಲಕಾಲಕ್ಕೆ ಶೌಚಾಲಯ ನಿರ್ಮಿಸಲಾಗಿದೆ. ಆದರೆ, ಹಲವು ಶೌಚಾಲಯಗಳು ನಿರ್ವಹಣೆ ಕೊರತೆಯಿಂದ ಹಾಳಾಗಿದ್ದರೆ, ಅವೈಜ್ಞಾನಿಕ ಕಾಮಗಾರಿಗಳಿಂದಾಗಿ ಕೆಲವು ಕಡೆಗಳಲ್ಲಿ ಶೌಚಾಲಯಗಳು ಪಾಳು ಬಿದ್ದು, ನೀರಿಲ್ಲದೇ ದುರ್ನಾತ ಬೀರುತ್ತಿವೆ. ಇದರ ನಡುವೆಯೇ, ಹೊಸದಾಗಿ ನಿರ್ಮಿಸಿರುವ ಶೌಚಾಲಯಗಳ ಬಾಗಿಲು ತೆರೆಯಲು ನಗರಸಭೆ ಅಧಿಕಾರಿಗಳು ವಿಳಂಬ ಮಾಡುತ್ತಿದ್ದಾರೆ.

ಜಿಲ್ಲಾ ಕೇಂದ್ರವಾಗಿರುವುದರಿಂದ ದೂರದ ಊರುಗಳಿಂದ ನಿತ್ಯವೂ ಜನರು ನಗರಕ್ಕೆ ಬಂದು ಹೋಗುತ್ತಾರೆ. ಮಾರುಕಟ್ಟೆಗೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಾರೆ. ಆದರೆ, ಸೂಕ್ತ ಶೌಚಾಲಯ ಇಲ್ಲದಿದ್ದರಿಂದ ಸಮಸ್ಯೆ ಅನುಭವಿಸುತ್ತಿದ್ದಾರೆ.

**ನಿರ್ಮಾಣಗೊಂಡರೂ ಬಾಗಿಲು ಬಂದ್:** ಕೇಂದ್ರ ಸರ್ಕಾರದ ಸ್ವಚ್ಛ ಭಾರತ ಮಿಷನ್ ಅಡಿಯಲ್ಲಿ ನಗರದ ಎಂ.ಜಿ.ರಸ್ತೆ, ಮುನ್ಸಿಪಲ್ ಹೈಸ್ಕೂಲ್ ರಸ್ತೆ, ಲಾಲ್ ಬಹದ್ದೂರ್ ಶಾಸ್ತ್ರಿ ಮಾರುಕಟ್ಟೆ ಹಾಗೂ ಸುತ್ತಮುತ್ತಲಿನ ಸ್ಥಳಗಳಲ್ಲಿ ಶೌಚಾಲಯ ನಿರ್ಮಿಸಲಾಗಿದೆ. ಸಾರ್ವಜನಿಕರ ಬಳಕೆಗೂ ಶೌಚಾಲಯಗಳು ಸಿದ್ಧವಾಗಿವೆ. ಆದರೆ, ನಗರಸಭೆಯ ಆಡಳಿತ ಮಂಡಳಿ ನಡುವಿನ ಗೊಂದಲದಿಂದಾಗಿ ಶೌಚಾಲಯದ ಬಾಗಿಲು ತೆರೆದಿಲ್ಲ. ಮಹಿಳೆಯರು ಹಾಗೂ ಪುರುಷರಿಗೆ ಪ್ರತ್ಯೇಕವಾಗಿ ಶೌಚಾಲಯಗಳಿದ್ದರೂ ಬಳಕೆಗೆ ಮುಕ್ತಗೊಳಿಸದ ನಗರಸಭೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ವಿರುದ್ಧ ಜನರು ಹಿಡಿಶಾಪ ಹಾಕುತ್ತಿದ್ದಾರೆ. ಬೇರೆ ಊರುಗಳಿಂದ ನಗರಕ್ಕೆ ಬಂದು ಹೋಗುವ ಜನರಿಗೆ ಸುಲಭ ಶೌಚಾಲಯವಿಲ್ಲ. ಜನರು ಯಾತನೆ ಅನುಭವಿಸುತ್ತಿದ್ದಾರೆ. ಬಯಲು ಜಾಗದಲ್ಲಿಯೇ ಮಲ ಹಾಗೂ ಮೂತ್ರ ವಿಸರ್ಜನೆ ಮಾಡುತ್ತಿದ್ದಾರೆ.

ಮಾರುಕಟ್ಟೆಯಲ್ಲಿಯೇ ಬಯಲು ಶೌಚಾಲಯದ ದೃಶ್ಯಗಳು ಕಂಡುಬರುತ್ತಿವೆ ಎಂದು ಲಾಲ್ ಬಹದ್ದೂರ್ ಶಾಸ್ತ್ರಿ ಮಾರುಕಟ್ಟೆಯ ವ್ಯಾಪಾರಿ ರಫೀಕ್ ಹೇಳಿದರು. ವ್ಯಾಪಾರಕ್ಕೆ ಬರುವ ಜನರು ಹಾಗೂ ಸ್ಥಳೀಯ ವ್ಯಾಪಾರಿಗಳಿಗೆ, ಸುಸಜ್ಜಿತ ಶೌಚಾಲಯ ಬೇಕೆಂಬುದು ಬಹುದಿನಗಳ ಬೇಡಿಕೆಯಾಗಿದೆ. ಅದಕ್ಕೆ ಸ್ಪಂದಿಸಿ ಶೌಚಾಲಯ ನಿರ್ಮಿಸಲಾಗಿದೆ. ಆದರೆ, ಶೌಚಾಲಯದ ಬಾಗಿಲು ತೆರೆದಿಲ್ಲ. ಮೂತ್ರ ಬಂದಾಗ, ಎಲ್ಲಿ ಹೋಗಬೇಕೆಂಬ ಪ್ರಶ್ನೆ ಎದುರಾಗುತ್ತದೆ. ಮೂತ್ರ ತಡೆಹಿಡಿದರೆ, ಆರೋಗ್ಯ ಸಮಸ್ಯೆ ಎದುರಾಗುತ್ತದೆ. ಹೀಗಾಗಿ, ಬಯಲಿನಲ್ಲಿಯೇ ಮೂತ್ರ ಮಾಡಿದ್ದೇನೆ ಎಂದರು.

**ಶೌಚಾಲಯವೇ ಮಾಯ:** ನಗರದ ಸುಭಾಷ್ ಸರ್ಕಲ್ ನಲ್ಲಿರುವ ಶೌಚಾಲಯ ಸಂಪೂರ್ಣ ಕುಸಿದು ಬಿದ್ದಿತ್ತು. ಈ ಜಾಗದಲ್ಲಿ ಈಗ ಶೌಚಾಲಯದ ಕುರುಹು ಸಹ ಇಲ್ಲ. ಇದೇ ಜಾಗದಲ್ಲಿ ಸುಲಭ ಶೌಚಾಲಯ ಹಾಗೂ ಸ್ನಾನದ ಕೊಠಡಿ ನಿರ್ಮಿಸುವ ಬಗ್ಗೆ ನಗರಸಭೆಯ ಸಾಮಾನ್ಯ ಸಭೆಯಲ್ಲಿ ಚರ್ಚೆ ನಡೆದಿದ್ದರೂ ಅದು ಅನುಷ್ಠಾನವಾಗಿಲ್ಲ. ಪರ ಊರಿನ ಕಾರ್ಮಿಕರು, ಕೆಲಸ ಹುಡುಕಿಕೊಂಡು ನಗರಕ್ಕೆ ಬರುತ್ತಾರೆ. ಇವರೆಲ್ಲರೂ ಸುಭಾಷ್ ವೃತ್ತದಲ್ಲಿ ನಿಂತು ಕೆಲಸಕ್ಕಾಗಿ ಕಾಯುತ್ತಾರೆ. ಇಂಥ ಕಾರ್ಮಿಕರ ಅನುಕೂಲಕ್ಕೆ ಶೌಚಾಲಯದ ಅಗತ್ಯವಿದೆ. ಆದರೆ, ಹಳೇ ಶೌಚಾಲಯ ನೆಲಸಮಗೊಂಡಿದೆ. ಅದೇ ಜಾಗದಲ್ಲಿ ಹೊಸ ಶೌಚಾಲಯ ಕಟ್ಟಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

#### ರೂ.12 ಲಕ್ಷ ವೆಚ್ಚದ ಶೌಚಾಲಯಕ್ಕೆ ಬೀಗ

**ಹಾವೇರಿ ನಗರದ ಲಾಲ್ ಬಹದ್ದೂರ್ ಶಾಸ್ತ್ರಿ ಮಾರುಕಟ್ಟೆ ಬಳಿ ಸ್ವಚ್ಛ ಭಾರತ ಯೋಜನೆಯಡಿ ರೂ. 12 ಲಕ್ಷ ವೆಚ್ಚದಲ್ಲಿ ಹೈಟೆಕ್ ಶೌಚಾಲಯ ನಿರ್ಮಿಸಲಾಗಿದೆ. ಆದರೆ ಈ ಶೌಚಾಲಯವೂ ಬಾಗಿಲು ತೆರೆದಿಲ್ಲ. ಶೌಚಾಲಯ ಎದುರೇ ಕಸ ಹಾಕಲಾಗುತ್ತಿದ್ದು ಇದೊಂದು ಕಸ ಸಂಗ್ರಹ ಸ್ಥಳವಾಗಿ ಮಾರ್ಪಟ್ಟಿದೆ.**

#### ನೀರಿನ ಸಮಸ್ಯೆ: ಗಲೀಜು ಮಾಡುವ ಜನ

**ಶೌಚಾಲಯಕ್ಕೆ ನೀರು ಅತಿ ಮುಖ್ಯ. ಸದ್ಯ ನಿರ್ಮಿಸಿರುವ ಶೌಚಾಲಯದ ಬಳಿ ನೀರಿನ ಟ್ಯಾಂಕ್ ಇರಿಸಲಾಗಿದೆ. ಶೌಚಾಲಯ ಆರಂಭವಾದರೆ ನೀರಿನ ಸಮಸ್ಯೆ ಕಾಡಬಹುದು. ಕೆಲ ಜನರು ಸಹ ಶೌಚಾಲಯವನ್ನು ಸರಿಯಾಗಿ ಬಳಸದೇ ಗಲೀಜು ಮಾಡುತ್ತಾರೆ. ನಿರ್ವಹಣೆ ನೋಡಿಕೊಂಡು ಶೌಚಾಲಯ ತೆರೆದರೆ ಉತ್ತಮ ಎಂದು ಎಂ.ಜಿ.ರಸ್ತೆಯ ವ್ಯಾಪಾರಿ ಗಣೇಶ ತಿಳಿಸಿದರು. ನೀರು ಇಲ್ಲದ ಕಾರಣಕ್ಕೆ ಹಲವು ಕಡೆಗಳಲ್ಲಿ ಶೌಚಾಲಯಗಳು ಪಾಳು ಬಿದ್ದಿವೆ. ಹೊಸದಾಗಿ ನಿರ್ಮಿಸಿರುವ ಶೌಚಾಲಯದಲ್ಲಾದರೂ ನೀರು ಇರುವಂತೆ ನೋಡಿಕೊಳ್ಳಬೇಕು ಎಂದು ಅವರು ಆಗ್ರಹಿಸಿದರು.**

#### ಪ್ರತಿಷ್ಠೆಗಾಗಿ ಉದ್ಘಾಟನೆ ವಿಳಂಬ

**ಸರ್ಕಾರದ ಅನುದಾನದಲ್ಲಿ ಶೌಚಾಲಯ ನಿರ್ಮಿಸಲಾಗಿದೆ. ಆದರೆ ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರ ನಡುವಿನ ಪ್ರತಿಷ್ಠೆಗಾಗಿ ಶೌಚಾಲಯಗಳ ಉದ್ಘಾಟನೆ ವಿಳಂಬವಾಗುತ್ತಿದೆ ಎಂಬ ಆರೋಪ ವ್ಯಕ್ತವಾಗುತ್ತಿದೆ. ಸ್ಥಳೀಯ ಶಾಸಕ ರುದ್ರಪ್ಪ ಲಮಾಣಿ ಅವರು ಕಾಂಗ್ರೆಸ್ ಪಕ್ಷದವರು. ನಗರಸಭೆ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಬಿಜೆಪಿ ಬೆಂಬಲಿತರು. ಉದ್ಘಾಟನೆಗೆ ಸಮಯ ನೀಡುವಂತೆ ಶಾಸಕರಿಗೆ ಹಲವು ಬಾರಿ ಸದಸ್ಯರು ಮನವಿ ಮಾಡಿದ್ದರು. ಆದರೆ ಸಮಯ ನೀಡಿಲ್ಲವೆಂಬ ದೂರುಗಳಿವೆ. ಶಾಸಕರನ್ನು ಬಿಟ್ಟು ಉದ್ಘಾಟನೆ ಮಾಡುವುದು ಸರಿಯಲ್ಲವೆಂದು ಸದಸ್ಯರು ಸಮಯಕ್ಕಾಗಿ ಕಾಯುತ್ತಿದ್ದರು ಎಂದು ಮಾಜಿ ಸದಸ್ಯರೊಬ್ಬರು ಹೇಳಿದರು. ನಗರಸಭೆ ಸದಸ್ಯರ ಅಧಿಕಾರ ಅವಧಿ ಈಗಾಗಲೇ ಮುಗಿದಿದೆ. ಸದ್ಯದಲ್ಲೇ ಶೌಚಾಲಯಗಳ ಉದ್ಘಾಟನೆಗೆ ದಿನ ನಿಗದಿಪಡಿಸಲಾಗುವುದು ಎಂದು ಮೂಲಗಳು ತಿಳಿಸಿವೆ.**

---

## ಬಾರದ ಕಮೀಷನ್ ಸಂಕಷ್ಟದಲ್ಲಿ ಸ್ಟೋರ್ ಮಾಲೀಕರು

• ಉದಯವಾಹಿನಿ, ಬಳ್ಳಾರಿ



ಅನ್ನಭಾಗ್ಯ ಯೋಜನೆ ಮೂಲಕ ರಾಜ್ಯ ಸರ್ಕಾರ ಜನರನ್ನು ಸಂತೋಷಪಡಿಸುತ್ತಿದೆ. ಆದರೆ ಜನತೆ ಅಕ್ಕಿಯನ್ನು ವಿತರಿಸುವ ಪಡಿತರ ವಿತರಕರು ಮಾತ್ರ ಸಂಕಟ ಎದುರಿಸುವಂತಾಗಿದೆ. ಪ್ರತಿ ತಿಂಗಳು ನಿಗಧಿತ ಸಮಯಕ್ಕೆ ಅಕ್ಕಿಯನ್ನು ತಂದು ಸ್ಟೋರ್ ಮಾಲೀಕರು ಜನರಿಗೆ ಅಕ್ಕಿ ವಿತರಿಸಬೇಕು ಎಂದು ಸರ್ಕಾರ ಈ ವಿತರಕರಿಗೆ ಕ್ವಿಂಟಲ್‌ಗೆ ಇಷ್ಟು ಎಂದು ಕಮೀಷನ್ ನೀಡುತ್ತಿದೆ. ಅಂದರೆ ಆಹಾರ ಇಲಾಖೆಯ ಗೋಡೌನ್ ನಿಂದ ಅಕ್ಕಿ ತರುವ ಲಾರಿ ಬಾಡಿಗೆ, ಹಮಾಲರ ಕೂಲಿ, ಅಂಗಡಿ ಬಾಡಿಗೆ, ಸಿಬ್ಬಂದಿ ವೇತನ ಇವನ್ನೆಲ್ಲ ಕಮೀಷನ್ ನಲ್ಲಿಯೇ ನೀಡಬೇಕಿದೆ.

ಆದರೆ ಕೇಂದ್ರ ಸರ್ಕಾರ ಕಳೆದ ಎರೆಡು ತಿಂಗಳಿಂದ, ರಾಜ್ಯ ಸರ್ಕಾರ ಕಳೆದ ನಾಲ್ಕು ತಿಂಗಳಿಂದ ಕಮೀಷನ್ ಹಣ ಬಿಡುಗಡೆಮಾಡಿಲ್ಲ. ಬಳ್ಳಾರಿ ವಿಜಯನಗರ ಈ ಅವಳಿ ಜಿಲ್ಲೆಯದ್ದೇ ಏಳು ಕೋಟಿ ರೂ ಕಮೀಷನ್ ಹಣ ಬರಬೇಕಿದೆ. ಇದರಂತೆ ರಾಜ್ಯದ 31 ಜಿಲ್ಲೆಯ 22 ಸಾವಿರ ಪಡಿತರ ವಿತರಕರಿಗೆ ಕೋಟ್ಯಾಂತರ ಹಣ ಬಾಕಿ ಹಣವನ್ನು ಸರ್ಕಾರ ನೀಡಿಲ್ಲ. ಇದಷ್ಟೇ ಅಲ್ಲದೇ ಇತ್ತೀಚೆಗೆ ನಡೆದ ಜಾತಿ ಗಣತಿಯಲ್ಲಿಯೂ ವಿತರಕರನ್ನು ಬಳಸಿಕೊಂಡ ಸರ್ಕಾರ ಯಾವುದೇ ರೀತಿಯ ಹಣ ನೀಡಿಲ್ಲ ಕೂಡಲೇ ಹಣ ಬಿಡುಗಡೆ ಮಾಡದೇ ಇದ್ರೇ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಹೋರಾಟ ಮಾಡುವ ಎಚ್ಚರಿಕೆ ನೀಡಿದ್ದಾರೆ ಪಡಿತರ ವಿತರಕರ ಸಂಘದ ಜಿಲ್ಲಾ ಅಧ್ಯಕ್ಷ ಮೀನಳ್ಳಿ ತಾಯಣ್ಣ.

---

## ಕೆಲವರು ಸಿದ್ದಸಿರಿ ಕಾರ್ಖಾನೆಗೆ ಕಳಂಕ ತರುವ ಪ್ರಯತ್ನ,ರೈತರು ಕಿವಿಗೂಡದೆ ಕಬ್ಬು ಸಾಗಿಸಿ: ನಿರ್ದೇಶಕ ಜಗದೀಶ ಕ್ಷತ್ರಿ ಸ್ಪಷ್ಟನೆ

• ಉದಯವಾಹಿನಿ,ಚಿಂಚೋಳಿ

ಪಟ್ಟಣದ ಸಿದ್ದಸಿರಿ ಕಾರ್ಖಾನೆಯಲ್ಲಿ ರೈತರು ಸಾಗಿಸುತ್ತಿರುವ ಕಬ್ಬಿನ ತೂಕದಲ್ಲಿ ಯಾವುದೇ ವ್ಯತ್ಯಾಸವಿಲ್ಲ ರೈತರು ಎದೆಗುಂದದೆ ಸುಳ್ಳು ಆರೋಪಕ್ಕೆ ಕಿವಿಗೂಡಬಾರದು ರೈತರು ತಮ್ಮ ತಮ್ಮ ಕಬ್ಬು ಸಾಗಿಸಿ ಎಂದು ಸಿದ್ದಸಿರಿ ಕಾರ್ಖಾನೆ ನಿರ್ದೇಶಕ ಜಗದೀಶ ಕ್ಷತ್ರಿ ಮತ್ತು ಪ್ರಭು ದೇಸಾಯಿ ಸ್ಪಷ್ಟನೆ ನೀಡಿದ್ದಾರೆ.

ಪತ್ರಿಕಾ ಪ್ರಕಟಣೆ ಹೊರಡಿಸಿದ ಅವರು,ಸಿದ್ದಸಿರಿ ಕಾರ್ಖಾನೆ ರೈತರೊಂದಿಗೆ ಕೈಜೋಡಿಸಿ ಕೆಲಸ ಮಾಡುತ್ತಿದೆ ಮತ್ತು ಸಾವಿರಾರು ರೈತ ಕುಟುಂಬಗಳಿಗೆ ಭವಿಷ್ಯವನ್ನು ಅವಲಂಬಿಸಿರುವ ಸಿದ್ದಸಿರಿ ಘಟಕ ವಿರುದ್ಧ ಈ ರೀತಿಯ ಸುಳ್ಳು ಪ್ರಚಾರ ನಾವು ಸಹಿಸುವುದಿಲ್ಲ ನಮ್ಮ ಸಂಸ್ಥೆ ಮತ್ತು ಅಧ್ಯಕ್ಷರ ಪ್ರತಿಷ್ಠೆಯನ್ನು ಹಾಳು ಮಾಡುವ ಉದ್ದೇಶದಿಂದ ಈ ಕೃತ್ಯದಲ್ಲಿ ತೊಡಗಿರುವ ಎಲ್ಲಾ ವ್ಯಕ್ತಿಗಳ ವಿರುದ್ಧ ಮಾನನಷ್ಟ ಮೊಕದ್ದಮೆ ಸೇರಿದಂತೆ ಕಾನೂನು ಕ್ರಮ ಕೈಗೊಳ್ಳಲಾಗುವುದು. ಕರ್ನಾಟಕ ರಾಜ್ಯ ರೈತ ಸಂಘ ಹಸಿರು ದಳ ಪದಾಧಿಕಾರಿಗಳು ಮತ್ತು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಸೇರಿದಂತೆ ಸಿದ್ದಸಿರಿ ಕಂಪನಿಗೆ ಕಳಂಕ ತರುವ ನಿಟ್ಟಿನಲ್ಲಿ ಶಾಹಾಬಾದನಲ್ಲಿರುವ ಪ್ರೇಂಡ್ಸ್ ವೇ ಬ್ರಿಡ್ಜ್ ರಸೀದಿಯನ್ನು ನಮ್ಮ ಕಾರ್ಖಾನೆಯ ತೂಕದ ಮಷೀನ್ ನೀಡಿರುವ ರಸೀದಿ ಹೊಲಿಸಿ ನಮ್ಮ ಕಾರ್ಖಾನೆ ತೂಕದಲ್ಲಿ ಅಂತರವಿದೆವೆಂದು ಅಪಾಧಿಸಿದ್ದಾರೆ,ಆದರೆ ರೈತರು ಅಲ್ಲಿ ಹೋಗಿ ನೋಡಿದರೆ ಪ್ರೇಂಡ್ಸ್ ವೇ ಬ್ರಿಡ್ಜ್ ರಸೀದಿ ಮೇಲಿರುವ ವಿಳಾಸದಲ್ಲಿ ನೋಡಿದರೆ ಅಲ್ಲೋಂದು ಹಳೆಯ ಕಟ್ಟಡವಿದೆ ಯಾವುದೇ ವೇ ಬ್ರಿಡ್ಜ್ ಇರುವುದಿಲ್ಲವೆಂದು ಸ್ಪಷ್ಟನೆ ನೀಡಿದರು.

**ಪರಿಶೀಲನೆ:-** ತೂಕದ ವ್ಯತ್ಯಾಸ ಸುದ್ದಿ ಹರಡುತ್ತಿದಂತೆ ಮೊನ್ನೆ ಜಿಲ್ಲೆಯಿಂದ ಅಧಿಕಾರಿಗಳು ಆಗಮಿಸಿ ತೂಕವನ್ನು ಪರಿಶೀಲನೆ ನಡೆಸಿ ಹೋಗಿದ್ದು ತೂಕದಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಿರುವುದಿಲ್ಲವೆಂದು ಅಧಿಕಾರಿಗಳು ಲಿಖಿತವಾಗಿ ಉತ್ತರ ನೀಡಿದ್ದಾರೆ ಎಂದು ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

> **ರೈತ ಬಾಂಧವರು ಯಾರೇ ಏನೇ ಹೇಳಿದರೂ ಕಾರ್ಖಾನೆಯವರ ಜೊತೆ ಸಹಕರಿಸಿ ಯಾವುದೇ ವ್ಯತ್ಯಸವಿಲ್ಲ ನಾವು ರೈತರಿಗೆ ಅನ್ಯಾಯ ಮಾಡುವುದಿಲ್ಲ ನಮ್ಮ ಮೇಲೆ ವಿಶ್ವಾಸವಿಟ್ಟು ಕಬ್ಬು ಸಾಗಿಸಿ ರೈತರು ಆರ್ಥಿಕವಾಗಿ ಸಬಲರಾಗಬೇಕು.**
> **- ಜಗದೀಶ ಕ್ಷತ್ರಿ, ನಿರ್ದೇಶಕ**

---

## ಕೆಲ ನಕಲಿ ರೈತರ ಹೆಸರಿನಲ್ಲಿ ಸಿದ್ದಸಿರಿ ಕಾರ್ಖಾನೆ ವಿರುದ್ಧ ಅಪಪ್ರಚಾರ


ಉದಯವಾಹಿನಿ ಚಿತ್ರ

• ಉದಯವಾಹಿನಿ,ಚಿಂಚೋಳಿ

ತಾಲ್ಲೂಕಿನ ಸಿದ್ದಸಿರಿ ಎಥೆನಾಲ್ ಪವ್ವರ ಘಟಕ ಕಾರ್ಖಾನೆ ವಿರುದ್ಧ ಕೆಲವರು ರೈತರ ಹೆಸರಿನಲ್ಲಿ ಕಾರ್ಖಾನೆಗೆ ಕಪ್ಪುಚುಕ್ಕೆ ತರುವ ನಿಟ್ಟಿನಲ್ಲಿ ಅಪಪ್ರಚಾರ ಕೆಲಸ ಮಾಡುತ್ತಿದ್ದು ರೈತ ಬಾಂಧವರು ಅಂಥಹ ಮಾತುಗಳಿಗೆ ಕಿವಿಗೂಡಬಾರದು ಎಂದು ತಾಲ್ಲೂಕ ರೈತ ಸಂಘದ ಅಧ್ಯಕ್ಷ ವೀರಣ್ಣ ಗಂಗಾಣಿ ತಿಳಿಸಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು,ದೇಶ ಸ್ವಾತಂತ್ರ್ಯ ಆದನಂತರ ಚಿಂಚೋಳಿಯಲ್ಲಿ ಯಾವುದೇ ಸಕ್ಕರೆ ಕಾರ್ಖಾನೆ ಪ್ರಾರಂಭವಾಗಿಲ್ಲ ಆದರೆ ರೈತ ಹಿತ ಕಾಪಾಡಲು ಬಿಜಾಪುರ ಶಾಸಕ ಬಸವನಗೌಡ ಪಾಟೀಲ ಯತ್ನಾಳ ಅವರು ಕಾರ್ಖಾನೆ ಸ್ಥಾಪಿಸಿ ರೈತರ ಬೆನ್ನಿಗೆ ನಿಂತು ರೈತರಿಗೆ ಆರ್ಥಿಕವಾಗಿ ಬಲಿಷ್ಠರಾಗಲು ರೈತರಿಗೆ ಶಕ್ತಿ ತುಂಬುವ ಕೆಲಸ ಮಾಡುತ್ತಿದ್ದಾರೆ. ಆದರೆ ಕೆಲವರು ರೈತರ ಹೆಸರು ಹೇಳಿಕೊಂಡು ಸಿದ್ದಸಿರಿ ಕಾರ್ಖಾನೆಯಲ್ಲಿ ತೂಕದಲ್ಲಿ ಮೋಸ ಆಡುತ್ತಿದ್ದಾರೆಂದು ಹೇಳುತ್ತಿದ್ದು ಶುದ್ಧ ಸುಳ್ಳಾಗಿದೆ, ಎಲ್ಲಾ ರೈತರ ಕಬ್ಬು ಖರೀದಿ ಮತ್ತು ತೂಕ ಮಾಡುವ ಸಮಯದಲ್ಲಿ ರೈತರ ಎದುರುಗಡೆ ತೂಕ ಮಾಡುತ್ತಿದ್ದು ಯಾವುದೇ ವ್ಯತ್ಯಾಸ ಕಂಡುಬಂದಿಲ್ಲ ಆದರೆ ಕೆಲವರು ಸುಳ್ಳು ಅಪಪ್ರಚಾರ ಮಾಡಿ ರಾಜಕೀಯ ಬ್ಯಾಳಿ ಬೆಳೆಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ,ನಾವುಗಳು ಖಾಸಗಿ ತೂಕ ಮಾಡಿಸಿ ಮತ್ತೆ ಕಾರ್ಖಾನೆಯಲ್ಲಿ ತೂಕ ಮಾಡಿಸಿದ್ದೇವೆ ಒಂದೇ ರೀತಿ ತೂಕ ಬಂದಿದೆ ಯಾವುದೇ ವ್ಯತ್ಯಾಸ ಕಂಡುಬಂದಿಲ್ಲ ಈಗಾಗಲೇ ಯುಡಿಆರ್ ನವರು ಆಗಮಿಸಿ ತೂಕ ಪರಿಶೀಲನೆ ಮಾಡಿ ಹೋಗಿದ್ದಾರೆ ಎಂದರು. ಮಲ್ಲಿಕಾರ್ಜುನ ಕೊಡದೂರ, ವೀರೇಶ ಎಂಪಳ್ಳಿ, ಸೂರ್ಯಕಾಂತ ಹುಲಿ, ಚಂದ್ರಕಾಂತ, ರಮೇಶ ಸಿದ್ದನೂರ, ಅನೇಕರಿದ್ದರು.

---

## ಶಾಮನೂರು ಲಿಂಗೈಕ್ಯ: ವೀರಶೈವ ಲಿಂಗಾಯತ ಸಮಾಜಕ್ಕೆ ದೊಡ್ಡ ನಷ್ಟ


ಉದಯವಾಹಿನಿ ಚಿತ್ರ

• ಉದಯವಾಹಿನಿ,ಚಿಂಚೋಳಿ

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷರು ಮಾಜಿ ಸಚಿವರು ಹಾಲಿ ಶಾಸಕ ಶಾಮನೂರು ಶಿವಶಂಕರಪ್ಪ ಲಿಂಗೈಕ್ಯ ಆಗಿರುವುದರಿಂದ ವೀರಶೈವ ಲಿಂಗಾಯತ ಸಮಾಜಕ್ಕೆ ಬಹುದೊಡ್ಡ ನಷ್ಟವಾಗಿದೆ ಎಂದು ತಾಲ್ಲೂಕಾ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಶರಣುಪಾಟೀಲ ಮೋತಕಪಳ್ಳಿ ಹೇಳಿದರು. ಪಟ್ಟಣದ ವಿಶ್ವಗುರು ಬಸವೇಶ್ವರ ವೃತ್ತದಲ್ಲಿ ತಾಲ್ಲೂಕಾ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ದಿ.ಶಾಮನೂರು ಶಿವಶಂಕರಪ್ಪ ಭಾವಚಿತ್ರಕ್ಕೆ ಪೂಜಿಸಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿ ಮಾತನಾಡಿದ ಅವರು, ಶಾಮನೂರು ಶಿವಶಂಕರಪ್ಪನವರ ಕೊಡುಗೆ ಅಪಾರವಾಗಿವೆ,ರಾಷ್ಟ್ರೀಯ ಮತ್ತು ರಾಜ್ಯ ವೀರಶೈವ ಲಿಂಗಾಯತ ಸಮಾಜಕ್ಕೆ ಅನೇಕ ಕೊಡುಗೆಗಳು ನೀಡಿ ಸಮಾಜಿಕ ಆರ್ಥಿಕ ರಾಜಕೀಯ ಮತ್ತು ಶೈಕ್ಷಣಿಕವಾಗಿ ಶಕ್ತಿ ನೀಡುವ ಕೆಲಸ ಮಾಡಿದ್ದು ಯಾರು ಮರೆಯುವಂತಿಲ್ಲ ಎಂದರು.

ಮಾದಿಗ ಮಹಾಸಭಾ ಜಿಲ್ಲಾಧ್ಯಕ್ಷ ಗೋಪಾಲರಾವ ಕಟ್ಟಿಮನಿ , ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಪಾಲಾಮೂರ್, ನೀಲಕಂಠ ಸೀಳಿನ, ಕಸಾಪ ಅಧ್ಯಕ್ಷ ಸುರೇಶ ದೇಶಪಾಂಡೆ,ಯುಥ್ ಅಧ್ಯಕ್ಷ ವೀರೇಶ ಎಂಪಳ್ಳಿ, ನಗರ ಅಧ್ಯಕ್ಷ ಶಂಕರ ಶಿವಪೂರಿ, ರಾಜಶೇಖರ ಹಿತ್ತಲ, ಗುಂಡಯ್ಯಸ್ವಾಮಿ, ನಂದಿಕುಮಾರ ಪಾಟೀಲ, ಶಿವರಾಜ ಪಾಟೀಲ, ಸೋಮಶೇಖರ್, ಚೇತನ ಸುಲೇಪೇಟ, ಮಲ್ಲಿಕಾರ್ಜುನ ಅಣವಾರ, ಮಲ್ಲಿಕಾರ್ಜುನ ಬುಶೇಟ್ಟಿ, ಸಂತೋಷ ಕಡಗದ, ಅನೀಲ ಬಿರಾದಾರ ಇದ್ದರು.

---

## ಉ. ಕರ್ನಾಟಕ ರೈಲ್ವೆ ಸಂಪರ್ಕ, ಅಭಿವೃದ್ಧಿ ಕುರಿತು ರೇಲ್ವೆ ಸಚಿವರ ಜೊತೆ ಚರ್ಚೆ


ಉದಯವಾಹಿನಿ ಚಿತ್ರ

• ಉದಯವಾಹಿನಿ ವಿಜಯಪುರ,

ಉತ್ತರ ಕರ್ನಾಟಕ ಭಾಗದ ರೈಲ್ವೆ ಸಂಪರ್ಕ ಹಾಗೂ ಅಭಿವೃದ್ಧಿ ಕುರಿತು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರ ಜೊತೆಗೆ ರಾಜ್ಯದ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಸಂಸದರಾದ ರಮೇಶ ಜಿಗಜಿಣಗಿ ಹಾಗೂ ಪಿ.ಸಿ. ಗದ್ದಿಗೌಡರ ಅವರು ಸೋಮವಾರ ಸಂಸತ್ ಭವನದಲ್ಲಿ ಭೇಟಿಯಾಗಿ ಚರ್ಚಿಸಿದರು.

ಉತ್ತರ ಕರ್ನಾಟಕ ಭಾಗದಲ್ಲಿ ರೈಲ್ವೆ ಸಂಪರ್ಕ ಹಾಗೂ ಅಭಿವೃದ್ಧಿಯ ಬಗ್ಗೆ ವಿಸ್ತ್ರತ ಚರ್ಚೆ ನಡೆಯಿತು. ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಸಕಾರಾತ್ಮಕವಾಗಿ ಸ್ಪಂದಿಸಿ, ಈ ಕುರಿತು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

---


## ಅತಿಕ್ರಮಣ: ಪುರಸಭೆಗೆ ಮಹಿಳೆಯರ ಮುತ್ತಿಗೆ

• ಉದಯವಾಹಿನಿ ತೇರದಾಳ

ಇಲ್ಲಿನ ದೇವರಾಜ ನಗರದ ವಾರ್ಡ್ ಸಂಖ್ಯೆ 7ರ ವ್ಯಾಪ್ತಿಯಲ್ಲಿರುವ ಸಾರ್ವಜನಿಕ ಮಹಿಳಾ ಶೌಚಾಲಯದ ಬಳಿಯ ಪುರಸಭೆ ಜಾಗವನ್ನು ಖಾಸಗಿ ವ್ಯಕ್ತಿ ಅತಿಕ್ರಮಣ ಮಾಡಿಕೊಳ್ಳುತ್ತಿದ್ದರೂ ಜಾಣ ಕುರುಡುತನ ಪ್ರದರ್ಶಿಸುತ್ತಿರುವ ಪುರಸಭೆ ನಡೆಯನ್ನು ಖಂಡಿಸಿ ಅಲ್ಲಿನ ಮಹಿಳೆಯರು ಸೋಮವಾರ ಪುರಸಭೆ ಕಾರ್ಯಾಲಯಕ್ಕೆ ಮುತ್ತಿಗೆ ಹಾಕಿದ ಘಟನೆ ಜರುಗಿತು.

ಈ ವಾರ್ಡ್‌ನಲ್ಲಿ ಕೂಲಿಕಾರರು ಹಾಗೂ ಕಡುಬಡತನದ ಬಹಳಷ್ಟು ಕುಟುಂಬಗಳಿದ್ದು, ಸ್ವಂತ ಶೌಚಾಲಯ ನಿರ್ಮಿಸಿಕೊಳ್ಳದ ಸ್ಥಿತಿಯಲ್ಲಿದ್ದು ಇವರಿಗಾಗಿಯೇ ಪುರಸಭೆ ಹಲವು ವರ್ಷಗಳ ಹಿಂದೆ ಇಲ್ಲಿ ಶೌಚಾಲಯ ನಿರ್ಮಿಸಿದೆ. ಅದರ ಬಳಿ ಇನ್ನಷ್ಟು ಖಾಲಿ ಜಾಗವಿದೆ. ಹೆಚ್ಚುತ್ತಿರುವ ಜನಸಂಖ್ಯೆಗನುಗುಣವಾಗಿ ಇನ್ನಷ್ಟು ಶೌಚಾಲಯಗಳನ್ನು ನಿರ್ಮಿಸಬಹುದೆಂದು ಮಹಿಳೆಯರು ಕಾದಿದ್ದರು. ಆದರೆ ಅಲ್ಲಿನ ನಿವಾಸಿಯೊಬ್ಬರು ದಿನದಿಂದ ದಿನ ಅಲ್ಲಿ ಕಟ್ಟಿಗೆ ಇಡುವ, ತಿಪ್ಪೆ ಕಸ ಹಾಕುವ ಮೂಲಕ ಅತಿಕ್ರಮಣ ಮಾಡಿಕೊಳ್ಳುತ್ತಿದ್ದು, ಹಲವು ದಿನಗಳ ಹಿಂದೆ ಶೌಚಕ್ಕೆಂದು ತೆರಳುವ ಮಹಿಳೆಯರಿಗೆ ಇಲ್ಲಿ ಅಡ್ಡಾಡಬೇಡಿ. ಇದು ನಮ್ಮ ಜಾಗ ಶೌಚಾಲಯ ಕಟ್ಟಿಸಿರುವ ಜಾಗ ಮಾತ್ರ ಬಳಸಿಕೊಳ್ಳಿ ಎನ್ನುವ ಮೂಲಕ ಬೆದರಿಕೆ ಹಾಕಿದ್ದಾರೆ ಎಂದು ತಿಳಿಸಿದರು.

ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ ಮಹಿಳೆಯರು ವಾರ್ಡ್ ಸದಸ್ಯರಿಗೆ, ಮುಖಂಡರಿಗೆ ತಿಳಿಸಿದ್ದಾರೆ. ಆದರೆ ಯಾವುದೇ ಪ್ರಯೋಜನವಾಗಿಲ್ಲ. ಈಗ ಆ ಜಾಗದಲ್ಲಿ ಶೆಡ್ ನಿರ್ಮಿಸಲು ಉದ್ದೇಶಿಸಿದ್ದನ್ನು ಗಮನಿಸಿದ ಮಹಿಳೆಯರು ಮುತ್ತಿಗೆ ಹಾಕಲು ಮುಂದಾಗಿದ್ದಾರೆ. ಆದ್ದರಿಂದ ಈ ಜಾಗವನ್ನು ಅತಿಕ್ರಮಣ ಮಾಡುವವರ ಮೇಲೆ ಕ್ರಮ ಕೈಗೊಂಡು ಜಾಗವನ್ನು ಶೌಚಾಲಯಕ್ಕೆ ನೀಡಬೇಕೆಂದು ಮಹಿಳೆಯರು ಆಗ್ರಹಿಸಿದರು. ಈಗಿರುವ ಶೌಚಾಲಯಗಳಲ್ಲಿ ಮೂರು ಮಾತ್ರ ಬಳಕೆಗೆ ಯೋಗ್ಯವಾಗಿವೆ. ಉಳಿದವುಗಳನ್ನು ದುರಸ್ಥಿಗೊಳಿಸಿಕೊಡಬೇಕೆಂದು ಆಗ್ರಹಿಸಿದರು.


ಉದಯವಾಹಿನಿ ಚಿತ್ರ

---

## ಸಹಕಾರ ಮನೋಭಾವ ಬೆಳೆಸಿಕೊಳ್ಳಿ

• ಉದಯವಾಹಿನಿ ಚಿಕ್ಕೋಡಿ


ಪ್ರಶಸ್ತಿಗಳು ಸಮಾಜ ಸೇವೆಗೆ ಪ್ರೇರಣೆಯಾಗುತ್ತವೆ. ಕಾಲು ಎಳೆಯುವ ಜನರ ನಡುವೆ ದಿಟ್ಟತನದಿಂದ ಬೆಳೆದರೆ ಇಂತಹ ಪ್ರಶಸ್ತಿಗಳನ್ನು ಪಡೆದುಕೊಳ್ಳಲು ಸಾಧ್ಯವಿದೆ' ಎಂದು ಚಿಂಚಣಿಯ ಅಲ್ಲಮಪ್ರಭು ಸಿದ್ದಸಂಸ್ಥಾನ ಮಠದ ಶಿವಪ್ರಸಾದ ತಾಲ್ಲೂಕಿನ ಚಿಂಚಣಿ ಗ್ರಾಮದಲ್ಲಿ 2025ನೇ ವರ್ಷದ ರಾಷ್ಟ್ರೀಯ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಅಪ್ಪಾಸಾಹೇಬ ಚೌಗಲಾ ಅವರನ್ನು ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸತ್ಕರಿಸಿ, ಪೂರ್ವಿ ಗಣೇಶ ಫೌಂಡೇಷನ್ ಉದ್ಘಾಟಿಸಿ ಮಾತನಾಡಿ, ಸಮಾಜಸೇವೆ ಮಾಡುವ ಮೂಲಕ ಭಗವಂತ ಕೊಟ್ಟ ಬದುಕನ್ನು ಸಾರ್ಥಕ ಮಾಡಿಕೊಳ್ಳಬೇಕು. ಕಷ್ಟದಲ್ಲಿ ಸಹಕಾರಿಯಾಗಿ ಬಾಳುವ ಗುಣವನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು ಎಂದರು.

---

# ಪ್ರಜಾಸೌಧ ನಿರ್ಮಾಣಕ್ಕೆ ಗೊಂದಲ: 4 ಎಕರೆ ಜಮೀನಿನಲ್ಲಿ ನಿರ್ಮಾಣದ ಗುರಿ

### ಶಿಕ್ಷಣ ಇಲಾಖೆಯ ಜಾಗದಲ್ಲಿ ಪ್ರಜಾಸೌಧ ನಿರ್ಮಾಣ ಮಾಡುವುದು ಬೇಡ ಎಂದು ಕೆಲ ಸಂಘಟನೆಗಳು ಒತ್ತಾಯ

• ಉದಯವಾಹಿನಿ ಶಹಾಪುರ


ಉದಯವಾಹಿನಿ ಚಿತ್ರ

**ನಿರ್ಮಾಣಕ್ಕೆ 17ಕೋಟಿ ಮಂಜೂರು**

ಭೀಮರಾಯನಗುಡಿ-ಕಲಬುರಗಿ ನಡುವೆ ಹೆದ್ದಾರಿಗೆ ಹೊಂದಿಕೊಂಡಿರುವ ನಗರದ ಪ್ರಥಮ ದರ್ಜೆ ಕಾಲೇಜಿನ ಜಾಗದಲ್ಲಿ ಪ್ರಜಾಸೌಧ ನಿರ್ಮಾಣಕ್ಕೆ ಶಿಕ್ಷಣ ಇಲಾಖೆಯಿಂದ ನಾಲ್ಕು ಎಕರೆ ಜಮೀನು ಕಂದಾಯ ಇಲಾಖೆಗೆ ಹಸ್ತಾಂತರಗೊಂಡಿದೆ. ಆದರೆ ಶಿಕ್ಷಣ ಇಲಾಖೆಯ ಜಾಗದಲ್ಲಿ ಪ್ರಜಾಸೌಧ ನಿರ್ಮಾಣ ಮಾಡುವುದು ಬೇಡ ಎಂದು ಕೆಲ ಸಂಘಟನೆಗಳು ಒತ್ತಾಯಪಡಿಸುತ್ತಿರುವುದು ಗೊಂದಲಕ್ಕೆ ಕಾರಣವಾಗಿದೆ.

ಸಾರ್ವಜನಿಕರ ಕೆಲಸ ಒಂದೇ ಸೂರಿನ ಅಡಿಯಲ್ಲಿ ಕಚೇರಿಗಳನ್ನು ನಿರ್ಮಿಸಬೇಕು ಎಂಬ ಉದ್ದೇಶದಿಂದ ಪ್ರತಿ ತಾಲ್ಲೂಕಿನಲ್ಲಿ ಪ್ರಜಾಸೌಧ ನಿರ್ಮಾಣಕ್ಕೆ ಸರ್ಕಾರದ ಮುಂದಾಗಿದೆ. ಸಚಿವ ಸಂಪುಟ ನಿರ್ಣಯದಂತೆ ಪ್ರಜಾಸೌಧ ನಿರ್ಮಾಣಕ್ಕೆ 17ಕೋಟಿ ಮಂಜೂರು ಆಗಿದೆ. ಸರ್ಕಾರದ ನಿರ್ದೇಶನದಂತೆ ಸ್ವಚ್ಛತೆಯ ಕೆಲಸವನ್ನು ಆರಂಭಿಸಿದೆ ಎಂದು ತಹಶೀಲ್ದಾರ್ ಸಿದ್ಧಾರೂಢ ಬನ್ನಿಕೊಪ್ಪ ಮಾಹಿತಿ ನೀಡಿದರು.

ಇಲ್ಲಿನ ಪ್ರಥಮ ದರ್ಜೆ ಕಾಲೇಜಿನ ತೆಕ್ಕೆಯಲ್ಲಿ ಒಟ್ಟು 88 ಎಕರೆ ಜಮೀನು ಇದೆ. ಅದರಲ್ಲಿ ಮಾದರಿ ಸರ್ಕಾರಿ ಕಾಲೇಜಿಗೆ 10 ಎಕರೆ, ಆದರ್ಶ ವಿದ್ಯಾಲಯಕ್ಕೆ 4 ಎಕರೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ 17 ಎಕರೆ ಜಮೀನು ಇದೆ. ಇನ್ನೂ ಹೆಚ್ಚುವರಿಯಾಗಿ ಶಿಕ್ಷಣ ಇಲಾಖೆಗೆ 50 ಎಕರೆ ಜಮೀನು ಲಭ್ಯವಿದೆ. ಪ್ರಜಾಸೌಧ ನಿರ್ಮಾಣದಿಂದ ಯಾವುದೇ ತೊಂದರೆ ಆಗುವುದಿಲ್ಲ. ಆದರೆ ಕೆಲ ಸಂಘಟನೆಗಳು ತಮ್ಮ ಸ್ವಾರ್ಥಕ್ಕಾಗಿ ಕೀಳು ಮಟ್ಟದ ಪ್ರಚಾರಕ್ಕೆ ಇಳಿಯಬಾರದು. ಅಭಿವೃದ್ಧಿ ಕೆಲಸಕ್ಕೆ ರಾಜಕೀಯ ಲೇಪನ ಹಚ್ಚಬಾರದು. ಪ್ರಜಾಸೌಧ ನಿರ್ಮಿಸುತ್ತಿರುವುದು ಕಾಂಗ್ರೆಸ್ ಪಕ್ಷದ ಕಚೇರಿಯಲ್ಲ ಎಂಬುವುದು ಹೋರಾಟ ಮಾಡುವವರು ಅರಿತುಕೊಳ್ಳಬೇಕು ಎಂದು ಬಿಜೆಪಿಯ ಹಿರಿಯ ಮುಖಂಡ ಯಲ್ಲಯ್ಯ ನಾಯಕ ವನದುರ್ಗ ಸಲಹೆ ನೀಡಿದರು. ಹಳೆ ತಹಶೀಲ್ದಾರ್ ಕಚೇರಿಯ ಜಾಗದಲ್ಲಿ ಈಗಾಗಲೇ ತಾಯಿ ಮಗು ಆಸ್ಪತ್ರೆ ನಿರ್ಮಾಣಕ್ಕೆ ರೂ. 20 ಕೋಟಿ ಅನುದಾನ ಬಂದಿದೆ.

ಅಲ್ಲದೆ ಸರ್ಕಾರಿ ಆಸ್ಪತ್ರೆಯನ್ನು ಉನ್ನತಿಕರಿಸಬೇಕು ಎಂಬ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದೆ' ಎನ್ನುತ್ತಾರೆ ಆರೋಗ್ಯ ಇಲಾಖೆಯ ಅಧಿಕಾರಿ ಒಬ್ಬರು.

ರೈತ ಸಂಘಟನೆಯ ಹೆಸರಿನಲ್ಲಿ ಮುಖವಾಡ ಹೊತ್ತುಕೊಂಡು ಅಲೆಯುತ್ತಿರುವ ನಾಯಕರ ಬಗ್ಗೆ ನಾವು ಎಚ್ಚರದಿಂದ ಇರಬೇಕು. ಪ್ರಜಾಸೌಧ ನಿರ್ಮಾಣದಿಂದ ಆಡಳಿತಾತ್ಮಕ ದೃಷ್ಟಿಯಿಂದ ಅನುಕೂಲವಾಗುತ್ತದೆ. ಜಿಲ್ಲಾ ಉಸ್ತುವಾರಿ ಸಚಿವರು ತೆಗೆದುಕೊಂಡ ನಿರ್ಧಾರ ಜನಪರವಾಗಿದೆ.

> **ನಾಲ್ಕು ಎಕರೆ ಜಮೀನಿನಲ್ಲಿ ಪ್ರಜಾಸೌಧ ನಿರ್ಮಾಣಕ್ಕಾಗಿ ಶಿಕ್ಷಣ ಇಲಾಖೆಯಿಂದ ಕಂದಾಯ ಇಲಾಖೆಗೆ ಜಮೀನು ಹಸ್ತಾಂತರವಾಗಿದೆ. ಸಾಕಷ್ಟು ಜಾಗವಿದೆ. ಪ್ರಜಾಸೌಧ ನಿರ್ಮಾಣದಿಂದ ವಿದ್ಯಾರ್ಥಿಗಳ ಕಲಿಕೆಗೆ ಯಾವುದೇ ತೊಂದರೆ ಆಗದು.**
> **-ಸಿದ್ಧಾರೂಢ ಬನ್ನಿಕೊಪ್ಪ , ತಹಶೀಲ್ದಾರ್**

#### ಅಭಿವೃದ್ಧಿ ಕೆಲಸಕ್ಕೆ ತಕರಾರು ಇಲ್ಲ

**ನಮ್ಮದು ಅಭಿವೃದ್ಧಿ ಕೆಲಸಕ್ಕೆ ತಕರಾರು ಇಲ್ಲ. ಆದರೆ ಶೈಕ್ಷಣಿಕ ಉದ್ದೇಶಕ್ಕಾಗಿ ಮೀಸಲಿಟ್ಟ ಜಾಗದಲ್ಲಿಯೇ ಹಠಕ್ಕೆ ಬಿದ್ದು ಪ್ರಜಾಸೌಧ ನಿರ್ಮಾಣ ಮಾಡುತ್ತಿರುವುದು ಏಕೆ?. ಸದ್ಯ ತಹಶೀಲ್ದಾರ್ ಕಚೇರಿಯ ಪ್ರದೇಶದಲ್ಲಿ ಸಾಕಷ್ಟು ಜಾಗವಿದೆ. ಇಲ್ಲವೆ ಬೇರೆಡೆ ನಿರ್ಮಿಸಿ. ಪ್ರಜಾಸೌಧ ನಿರ್ಮಾಣದಿಂದ ಗದ್ದಲದ ವಾತವರಣ ಉಂಟಾಗಿ ಕಾಲೇಜು ವಿದ್ಯಾರ್ಥಿಗಳಿಗೆ ಅದರಲ್ಲಿಯೂ ವಿದ್ಯಾರ್ಥಿನಿಯರಿಗೆ ಹೆಚ್ಚಿನ ತೊಂದರೆಯಾಗುವ ಆತಂಕವಿದೆ. ಯಾವ ಉದ್ದೇಶಕ್ಕಾಗಿ ಸರ್ಕಾರ ಜಮೀನು ವಶಪಡಿಸಿಕೊಂಡಿದಿಯೋ ಅದೇ ಉದ್ದೇಶಕ್ಕಾಗಿ ಉಪಯೋಗಿಸಬೇಕು ಎಂಬುವುದು ನಮ್ಮ ವಾದವಾಗಿದೆ' ಎಂದು ಅಖಂಡ ಕರ್ನಾಟಕ ರೈತ ಸಂಘದ ಜಿಲ್ಲಾ ಸಂಚಾಲಕ ಮಲ್ಲಣ್ಣ ಪರಿವಾಣ ಗೋಗಿ ತಿಳಿಸಿದ್ದಾರೆ.**

---

## ಹೆಚ್‌ಎಎಲ್‌ನಲ್ಲಿ ಮಾಜಿ ಸೈನಿಕರಿಗೆ ಗುತ್ತಿಗೆ ಆಧಾರದಲ್ಲಿ ಉದ್ಯೋಗಾವಕಾಶ

• ಉದಯವಾಹಿನಿ ಚಿತ್ರದುರ್ಗ

ಬೆಂಗಳೂರಿನ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಹೆಚ್‌ಎಎಲ್)ನಲ್ಲಿ ಸೆಕ್ಯೂರಿಟಿ ಗಾರ್ಡ್ ಮತ್ತು ಫೈರ್‌ಮೆನ್ ಹುದ್ದೆಗಳಿಗೆ ನಾಲ್ಕು ವರ್ಷಗಳ ಅವಧಿಗೆ ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡುಕೊಳ್ಳುತ್ತಿದ್ದು, ಮಾಜಿ ಸೈನಿಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಡಿ.26 ಅರ್ಜಿ ಸಲ್ಲಿಸಲು ಕೊನೆಯ ದಿನ. ನೇಮಕಾತಿಯು ದೈಹಿಕ ಪರೀಕ್ಷೆ ಮತ್ತು ಲಿಖಿತ ಪರೀಕ್ಷೆಗಳ ಮೆರಿಟ್ ಆಧಾರದಲ್ಲಿ ನಡೆಯುವುದು. ಆಯ್ಕೆಯಾದವರು ಬೆಂಗಳೂರಿನಲ್ಲಿ ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ಆಯ್ಕೆಯಾದವರಿಗೆ ರೂ.21000/-ಗಳ ಮೂಲ ವೇತನವಿದ್ದು, ತುಟ್ಟಿ ಭತ್ಯೆ, ಹಾಗೂ ಇತರೆ ಭತ್ಯೆಗಳು ಕೂಡ ಲಭ್ಯವಿದೆ. ಮಾಜಿ ಸೈನಿಕರು ನಿಗದಿತ ನಮೂನೆಯ ಅರ್ಜಿಯನ್ನು ಇದೇ ಡಿಸೆಂಬರ್ 26ರೊಳಗೆ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಶಿವಮೊಗ್ಗ ಇಲ್ಲಿಗೆ ಸಲ್ಲಿಸಿ, ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬಹುದು.

ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ 08182-220982 ಗೆ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ಶಿವಮೊಗ್ಗ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪನಿರ್ದೇಶಕ ಡಾ.ಸಿ.ಎ.ಹಿರೇಮಠ ತಿಳಿಸಿದ್ದಾರೆ.

# ಅಮೆರಿಕದ ನರನಾಡಿಗೆ ಹರಡಿದ ವಲಸೆ ವಿರೋಧಿ ವಿಷ

## ಗ್ರೀನ್ ಕಾರ್ಡ್ ಸಂದರ್ಶನದ ವೇಳೆ ಭಾರತೀಯ ಮಹಿಳೆ ಬಂಧನ, ಭಾರತೀಯರ ಸಂಕಷ್ಟ ಅದೆಷ್ಟು ಹೇಳತೀರದಾಗಿದೆ ಎಂಬುದಕ್ಕೆ ಸಾಕ್ಷಿ



**ಕೆಲಸಕ್ಕೆ ಮರಳಲು ತಯಾರಿ**

**ವಾಷಿಂಗ್ಟನ್:** ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಲಸೆ ವಿರೋಧಿ ನೀತಿ ಎಂಬ ವಿಷ, ಅಮೆರಿಕದ ನರನಾಡಗಳಿಗೆ ಹರಡಿಕೊಂಡಿದೆ. ವಲಸಿಗರನ್ನು ಹೊರಗಿನವರಂತೆ ಕಾಣುವ ಪರಿಪಾಠ ಅಮೆರಿಕದಲ್ಲಿ ಬೆಳೆಯುತ್ತಿದ್ದು, ಭಾರತೀಯ ವಲಸಿಗರ ಹೋರಾಟದ ಬದುಕು ಮುಂದುವರೆದಿದೆ. ಇದಕ್ಕೆ ಪುಷ್ಠಿ ಎಂಬಂತೆ ಅಮೆರಿಕದಲ್ಲಿ ಸುಮಾರು 30 ವರ್ಷಗಳಿಂದ ನೆಲೆಸಿರುವ ಭಾರತೀಯ ಮೂಲದ ಮಹಿಳೆಯೋರ್ವರನ್ನು, ಗ್ರೀನ್ ಕಾರ್ಡ್ ಸಂದರ್ಶನದ ವೇಳೆ ಅಲ್ಲಿನ ವಲಸೆ ಅಧಿಕಾರಿಗಳು ಬಂಧಿಸಿದ್ದಾರೆ. ಗ್ರೀನ್ ಕಾರ್ಡ್ ಸಂದರ್ಶನದ ಕೊನೆಯ ಸುತ್ತನ್ನು ಪ್ರವೇಶಿಸಿದ್ದ 60 ವರ್ಷದ ಬಬ್ಲಿಜಿತ್ ಕೌರ್ ಅವರನ್ನು ವಲಸೆ ಅಧಿಕಾರಿಗಳು ಬಂಧಿಸಿ ಕರೆದೊಯ್ದಿದ್ದಾರೆ.

ಈ ಕುರಿತು ಮಾಹಿತಿ ನೀಡಿರುವ ಬಬ್ಲಿ ಕೌರ್ ಅವರ ಪುತ್ರಿ ಜ್ಯೋತಿ, 1994ರಿಂದ ಅಮೆರಿಕದಲ್ಲಿ ನೆಲೆಸಿರುವ ನನ್ನ ತಾಯಿಯನ್ನು, ಗ್ರೀನ್ ಕಾರ್ಡ್ ಸಂದರ್ಶನದ ಕೊನೆಯ ಸುತ್ತಾದ ಬಯೋಮೆಟ್ರಿಕ್ ಸ್ಕ್ಯಾನ್ ಅಪಾಯಿಂಟ್ಮೆಂಟ್ ಸಮಯದಲ್ಲಿ ಫೆಡರಲ್ ಏಜೆಂಟ್‌ಗಳು ಬಂಧಿಸಿದ್ದಾರೆ ಎಂದು ತಿಳಿಸಿದ್ದಾರೆ. ಡಿಸೆಂಬರ್ 1 ರಂದು ನನ್ನ ತಾಯಿ ಯುಎಸ್ ವಲಸೆ ಮತ್ತು ಕಸ್ಟಮ್ಸ್ ಜಾರಿ ಕಚೇರಿಗೆ ಗ್ರೀನ್ ಕಾರ್ಡ್ ಸಂದರ್ಶನಕ್ಕಾಗಿ ಭೇಟಿ ನೀಡಿದ್ದರು. ವಿಚಾರಣೆ ವೇಳೆ ವಲಸೆ ವಕೀಲರೊಂದಿಗೆ ದೂರವಾಣಿಯಲ್ಲಿ ಮಾತನಾಡಲು ಬಬ್ಲಿ ಕೌರ್ ಅವರಿಗೆ ಅವಕಾಶ ನೀಡಲಾಯಿತಾದರೂ, ಅಂತಿಮವಾಗಿ ಅವರನ್ನು ವಶಕ್ಕೆ ಪಡೆದುಕೊಳ್ಳಲಾಗೊಗಿದೆ. ಬಬ್ಲಿ ಕೌರ್ ಅವರನ್ನು ಎಲ್ಲಿಗೆ ಕರೆದೊಯ್ಯಲಾಗಿದೆ ಎಂಬ ಮಾಹಿತಿಯನ್ನೂ ಅವರ ಕುಟುಂಬಸ್ಥರೊಂದಿಗೆ ವಲಸೆ ಅಧಿಕಾರಿಗಳು ಹಂಚಿಕೊಳ್ಳದಿರುವುದು ನಿಜಕ್ಕೂ ದುರದೃಷ್ಟಕರ. ಅಮೆರಿಕದಲ್ಲಿ ಭಾರತೀಯರ ಸಂಕಷ್ಟ ಅದೆಷ್ಟು ಹೇಳತೀರದಾಗಿದೆ ಎಂಬುದಕ್ಕೆ ಇದೇ ಸಾಕ್ಷಿ. ತಡರಾತ್ರಿ ಬಬ್ಲಿ ಕೌರ್ ಅವರನ್ನು ಅಡೆಲಾಂಟೊಗೆ ವರ್ಗಾಯಿಸಲಾಗಿರುವ ಬಗ್ಗೆ ವಲಸೆ ಅಧಿಕಾರಿಗಳು ಕುಟುಂಬಸ್ಥರಿಗೆ ಮಾಹಿತಿ ನೀಡಿದ್ದಾರೆ. ಅಡೆಲಾಂಟೊ ICE ಬಂಧನ ಕೇಂದ್ರವಾಗಿ ಬಳಸಲ್ಪಡುವ ಹಿಂದಿನ ಫೆಡರಲ್ ಜೈಲು ಎಂಬುದು ಇಲ್ಲಿ ಉಲ್ಲೇಖನೀಯ. ಬಬ್ಲಿ ಕೌರ್ ಅವರ ಕುಟುಂಬ ಅಮೆರಿಕಕ್ಕೆ ವಲಸೆ ಬಂದ ನಂತರ, ಮೊದಲು ಲಗುನಾ ಬೀಚ್‌ನಲ್ಲಿ ನೆಲೆಸಿತ್ತು. ಆ ನಂತರ ಲಾಂಗ್ ಬೀಚ್‌ಗೆ ಸ್ಥಳಾಂತರಗೊಂಡ ಕುಟುಂಬ, ಅಂತಿಮವಾಗಿ ಬೆಲ್ಮಾಂಟ್ ಶೋರ್ ಪ್ರದೇಶದಲ್ಲಿ ನೆಲೆ ಕಂಡಿತು. ಬಬ್ಲಿ ಕೌರ್, ಅವರ ಪತಿಗೆ ಮೂವರು ಮಕ್ಕಳಿದ್ದಾರೆ. ಈ ಪೈಕಿ 34 ವರ್ಷದ ಜ್ಯೋತಿ DACA ಅಡಿಯಲ್ಲಿ ಅಮೆರಿಕದಲ್ಲಿ ಕಾನೂನುಬದ್ಧ ಸ್ಥಾನಮಾನವನ್ನು ಹೊಂದಿದ್ದಾರೆ. ಆಕೆಯ ಅಣ್ಣ ಮತ್ತು ಸಹೋದರಿ ಕೂಡ ಯುಎಸ್ ನಾಗರಿಕರಾಗೊದ್ದಾರೆ. ಎರಡು ದಶಕಗಳಿಗೂ ಹೆಚ್ಚು ಕಾಲ ಬಬ್ಲಿ ಕೌರ್ ಮತ್ತು ಅವರ ಪತಿ ಬೆಲ್ಮಾಂಟ್ ಶೋರ್‌ನ 2ನೇ ಬೀದಿಯಲ್ಲಿ ನಟರಾಜ್ ಕ್ಯುಸಿನ್ ಆಫ್ ಇಂಡಿಯಾ ಮತ್ತು ನೇಪಾಳ ಎಂಬ ಉಪಾಹಾರ ಗೃಹವನ್ನು ನಡೆಸುತ್ತಿದ್ದರು. ಇತ್ತೀಚೆಗೆ ಅವರು ರಾಯಲ್ ಇಂಡಿಯನ್ ಕರಿ ಹೌಸ್‌ನಲ್ಲಿ ರೆಸ್ಟೋರೆಂಟ್ ಕೆಲಸಕ್ಕೆ ಮರಳಲು ತಯಾರಿ ನಡೆಸುತ್ತಿದ್ದರು.

> **ಬಯೋಮೆಟ್ರಿಕ್ ಸ್ಕ್ಯಾನ್ ಮಾಡುವ ಸಂದರ್ಭದಲ್ಲಿ ಕಚೇರಿಗೆ ಆಗಮಿಸಿದ ಫೆಡರಲ್ ಏಜೆಂಟರು, ಬಬ್ಲಿ ಕೌರ್ ಅವರನ್ನು ಪ್ರತ್ಯೇಕ ಕೋಣೆಗೆ ಕರೆದೊಯ್ದು ವಿಚಾರಣೆ ನಡೆಸಿದರು. ಬಳಿಕ ಅವರನ್ನು ಬಂಧಿಸಿ ಕರೆದೊಯ್ದರು.**
> **-ಜ್ಯೋತಿ , ಪುತ್ರಿ**

### ಬಬ್ಲಿ ಕೌರ್ ಬಿಡುಗಡೆಗೆ ಒತ್ತಾಯ

**ಸದ್ಯ ಅಮೆರಿಕದಲ್ಲಿ ಬಬ್ಲಿ ಕೌರ್ ಅವರ ಬಿಡುಗಡೆಗೆ ಒತ್ತಾಯ ಕೇಳಿಬಂದಿದ್ದು, ಲಾಂಗ್ ಬೀಚ್ ಪ್ರತಿನಿಧಿಸುವ ಡೆಮಾಕ್ರಟಿಕ್ ಕಾಂಗ್ರೆಸ್ಸಿಗ ರಾಬರ್ಟ್ ಗಾರ್ಸಿಯಾ ಅವರು, ಕೌರ್ ಬಿಡುಗಡೆಗೆ ಕರೆ ನೀಡಿದ್ದಾರೆ. ಕೌರ್ ಅವರನ್ನು ಬಾಂಡ್ ಮೇಲೆ ಬಿಡುಗಡೆ ಮಾಡಲು ಅನುವು ಮಾಡಿಕೊಡುವ ಹೆಚ್ಚುವರಿ ಕಾನೂನು ದಾಖಲಾತಿಗಳನ್ನು ಅವರ ಕುಟುಂಬ ಸಿದ್ಧಪಡಿಸುತ್ತಿರುವುದರಿಂದ, ಈ ವಿಷಯದ ಬಗ್ಗೆ ಅವರು ಫೆಡರಲ್ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ. ಡೊನಾಲ್ಡ್ ಟ್ರಂಪ್ ಆಡಳಿತ ಇತ್ತೀಚಿಗಷ್ಟೇ H-1B ವೀಸಾ ಅರ್ಜಿದಾರರ ಸಾಮಾಜಿಕ ಮಾಧ್ಯಮ ಪರಿಶೀಲನೆ ನಿಯಮವನ್ನು ಜಾರಿಗೆ ತಂದಿರುವುದನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬಹುದು.**

# ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ರಾಹುಲ್, ಸೋನಿಯಾಗೆ ತಾತ್ಕಾಲಿಕ ರಿಲೀಫ್




**ನವದೆಹಲಿ:** ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಅವರಿಗೆ ತಾತ್ಕಾಲಿಕ ರಿಲೀಫ್ ದೊರೆತಿದೆ. ಸೋನಿಯಾ, ರಾಹುಲ್. ಇತರ ಐವರ ವಿರುದ್ಧ ಜಾರಿ ನಿರ್ದೇಶನಾಲಯದ ಹಣ ವರ್ಗಾವಣೆ ಆರೋಪದ ವಿಚಾರವನ್ನು ವಿಚಾರಣೆಗೆ ತೆಗೆದುಕೊಳ್ಳಲು ಇಲ್ಲಿನ ರೂಸ್ ಅವೆನ್ಯೂ ನ್ಯಾಯಾಲಯ ನಿರಾಕರಿಸಿದೆ. ವಿಶೇಷ ನ್ಯಾಯಾಧೀಶ ವಿಶಾಲ್ ಗೋಗ್ನೆ ಅವರು, ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್ಎ) ಅಡಿಯಲ್ಲಿ ಜಾರಿ ನಿರ್ದೇಶನಾಲಯ (ಇಡಿ) ಸಲ್ಲಿಸಿದ ದೂರು ವಿಶೇಷ ನ್ಯಾಯಾಧೀಶ ವಿಶಾಲ್‌ಗೋಗ್ನೆ ಅವರು ಪ್ರಕರಣದಲ್ಲಿ ಸಲ್ಲಿಸಲಾದ ಆರೋಪ ಪಟ್ಟಿಯು ಖಾಸಗಿ ವ್ಯಕ್ತಿಯ ದೂರಿನ ತನಿಖೆಯನ್ನು ಆಧರಿಸಿದೆ ಮತ್ತು ಪೂರ್ವಭಾವಿ ಅಪರಾಧದ ಎಫ್ ಐಆರ್ ಅನ್ನು ಆಧರಿಸಿಲ್ಲ ಎಂದು ಗಮನಿಸಿದರು.

ಇದರ ಅರಿವು ಕಾನೂನಿನಲ್ಲಿ ಸ್ವೀಕಾರಾರ್ಹವಲ್ಲ ಎಂದು ನ್ಯಾಯಾಧೀಶರು ಹೇಳಿದರು. ಆದೇಶದ ಕಾರ್ಯಕಾರಿ ಭಾಗವನ್ನು ಓದಿದ ನ್ಯಾಯಾಧೀಶರು, ದೆಹಲಿ ಪೊಲೀಸರ ಆರ್ಥಿಕ ಅಪರಾಧಗಳ ವಿಭಾಗವು ಈಗಾಗಲೇ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸಿದೆ ಮತ್ತು ಆದ್ದರಿಂದ ಅರ್ಹತೆಯ ಆಧಾರದ ಮೇಲೆ ಪ್ರಕರಣದಲ್ಲಿ ಇಡಿಯ ವಾದಗಳ ಮೇಲೆ ತೀರ್ಪು ನೀಡುವುದು ಅಕಾಲಿಕವಾಗಿರುತ್ತದೆ ಎಂದು ಹೇಳಿದರು.

### ಹಣ ವರ್ಗಾವಣೆ ಆರೋಪ

**ಇಡಿ ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಹಾಗೆಯೇ ಪಕ್ಷದ ದಿವಂಗತ ನಾಯಕರಾದ ಮೋತಿಲಾಲ್ ವೋರಾ, ಆಸ್ಕರ್ ಫರ್ನಾಂಡಿಸ್, ಸುಮನ್ ದುಬೆ, ಸ್ಯಾಮ್ ಪಿತ್ರೋಡಾ ಮತ್ತು ಯಂಗ್ ಇಂಡಿಯನ್ ಎಂಬ ಖಾಸಗಿ ಕಂಪನಿಯನ್ನು ಪಿತೂರಿ, ಹಣ ವರ್ಗಾವಣೆ ಆರೋಪಿಸಿದೆ.**

# ಪಾಕಿಸ್ತಾನ ಭಯೋತ್ಪಾದನೆಯ ಜಾಗತಿಕ ಕೇಂದ್ರಬಿಂದು



**ನ್ಯೂಯಾರ್ಕ್:** ಶಾಂತಿಗಾಗಿ ನಾಯಕತ್ವ ಕುರಿತ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಮುಕ್ತ ಚರ್ಚೆಯಲ್ಲಿ ಭಾರತ ಸ್ಥಳೀಯ ಕಾಲಮಾನ ಪಾಕಿಸ್ತಾನಕ್ಕೆ ತೀಕ್ಷ್ಣವಾದ ಪ್ರತಿಕ್ರಿಯೆ ನೀಡಿದೆ. ಜಮ್ಮು ಮತ್ತು ಕಾಶ್ಮೀರದ ಪರಿಹರಿಸಲಾಗದ ವಿವಾದಗಳು ಕುರಿತು ಪಾಕಿಸ್ತಾನ ಆರೋಪಗಳು ಅನಗತ್ಯ ಎಂದು ದೃಢವಾಗಿ ತಿರಸ್ಕರಿಸಿದೆ ಲಡಾಖ್ ಜೊತೆಗೆ ಕೇಂದ್ರಾಡಳಿತ ಪ್ರದೇಶವು ಭಾರತದ ಅವಿಭಾಜ್ಯ, ಬೇರ್ಪಡಿಸಲಾಗದ ಭಾಗವಾಗಿದೆ ಎಂದು ಪುನರುಚ್ಚರಿದೆ.


ಜಮ್ಮು-ಕಾಶ್ಮೀರ ಯಾವಾಗಲೂ ಭಾರತದ ಅವಿಭಾಜ್ಯ ಅಂಗ ಎಂದು ಒತ್ತಿ ಹೇಳಿದೆ. ಚರ್ಚೆಯ ಸಮಯದಲ್ಲಿ ಪಾಕಿಸ್ತಾನದ ಹೇಳಿಕೆಗಳನ್ನು ಉಲ್ಲೇಖಿಸಿ, ವಿಶ್ವಸಂಸ್ಥೆಯಲ್ಲಿ ಭಾರತದ ಖಾಯಂ ಪ್ರತಿನಿಧಿ, ರಾಯಭಾರಿ ಹರೀಶ್ ಪರ್ವತನೇನಿ, ಪಾಕಿಸ್ತಾನವನ್ನು ಭಯೋತ್ಪಾದನೆಯ ಜಾಗತಿಕ ಕೇಂದ್ರಬಿಂದು ಎಂದು ಕರೆದಿದ್ದಾರೆ. ಭಾರತ ಮತ್ತು ಭಾರತೀಯರಿಗೆ ಇನ್ನಷ್ಟು ಹಾನಿ ಮಾಡಲು ವಿಶ್ವಸಂಸ್ಥೆಯ ವೇದಿಕೆಯನ್ನು ಬಳಸುತ್ತಿದ್ದಾರೆ ಎಂದು ಆರೋಪಿಸಿದರು. ವಿಭಜಕ ಕಾರ್ಯಸೂಚಿಯನ್ನು ಅನುಸರಿಸುವ ಪಾಕಿಸ್ತಾನವು ಶಾಶ್ವತವಲ್ಲದ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸದಸ್ಯನಾಗಿ ತನ್ನ ಅಂತಾರಾಷ್ಟ್ರೀಯ ಜವಾಬ್ದಾರಿಗಳನ್ನು ದುರ್ಬಲಗೊಳಿಸುತ್ತದೆ ಎಂದು ಹೇಳಿದರು.

ನಾನು ಮಂಗಳವಾರ ಪಾಕಿಸ್ತಾನದ ಪ್ರತಿನಿಧಿ ನೀಡಿದ ಹೇಳಿಕೆಯನ್ನು ಉಲ್ಲೇಖಿಸುತ್ತೇನೆ. ಜಮ್ಮು-ಕಾಶ್ಮೀರ ಮತ್ತು ಲಡಾಖ್ ಕೇಂದ್ರಾಡಳಿತ ಪ್ರದೇಶಗಳು ಭಾರತದ ಅವಿಭಾಜ್ಯ ಮತ್ತು ಬೇರ್ಪಡಿಸಲಾಗದ ಭಾಗವಾಗಿದೆ ಎಂದು ಭಾರತ ಪುನರುಚ್ಚರಿಸಲು ಬಯಸುತ್ತದೆ. ಅವು ಭಾರತದ ಅವಿಭಾಜ್ಯ ಅಂಗವಾಗಿ ಇದ್ದವು, ಈಗಲೂ ಇವೆ ಮತ್ತು ಮುಂದೆಯೂ ಯಾವಾಗಲೂ ಹಾಗೆಯೇ ಇರುತ್ತವೆ. ಇಂದಿನ ಮುಕ್ತ ಚರ್ಚೆಯಲ್ಲಿ ಪಾಕಿಸ್ತಾನದ ಜಮ್ಮು ಮತ್ತು ಕಾಶ್ಮೀರದ ಬಗ್ಗೆ ಅನಗತ್ಯ ಉಲ್ಲೇಖವು ಭಾರತ ಮತ್ತು ಭಾರತೀಯರಿಗೆ ಹಾನಿ ಮಾಡುವತ್ತ ಅದರ ಗೀಳಿಗೆ ಸಾಕ್ಷಿಯಾಗಿದೆ ಎಂದರು.

ತನ್ನ ವಿಭಜನಾತ್ಮಕ ಕಾರ್ಯಸೂಚಿಯನ್ನು ಅನುಸರಿಸುವಲ್ಲಿ ವಿಶ್ವಸಂಸ್ಥೆಯ ಎಲ್ಲಾ ಸಭೆಗಳು ಮತ್ತು ವೇದಿಕೆಗಳಲ್ಲಿ ಈ ಅಭ್ಯಾಸ ಮತ್ತಷ್ಟು ಹೆಚ್ಚಿಸಲು ಆಯ್ಕೆ ಮಾಡುವ ಶಾಶ್ವತವಲ್ಲದ ಭದ್ರತಾ ಮಂಡಳಿಯ ಸದಸ್ಯರು ಅದರ ಗೊತ್ತುಪಡಿಸಿದ ಜವಾಬ್ದಾರಿಗಳು, ಬಾಧ್ಯತೆಗಳನ್ನು ಪೂರೈಸುತ್ತಾರೆ ಎಂದು ನಿರೀಕ್ಷಿಸಲಾಗುವುದಿಲ್ಲ ಎಂದು ಹೇಳಿದರು. ಭಯೋತ್ಪಾದನೆಯನ್ನು ಪ್ರಾಯೋಜಿಸುವ ಪಾಕಿಸ್ತಾನದ ದೀರ್ಘ ದಾಖಲೆಯನ್ನು ಎತ್ತಿತೋರಿಸಿದ ಭಾರತೀಯ ರಾಯಭಾರಿ, ಸಿಂಧೂ ಜಲ ಒಪ್ಪಂದವನ್ನು ಸ್ಥಗಿತಗೊಳಿಸುವ ಭಾರತದ ನಿರ್ಧಾರವನ್ನು ಬಲವಾಗಿ ಸಮರ್ಥಿಸಿಕೊಂಡರು.

ಭಾರತವು 65 ವರ್ಷಗಳ ಹಿಂದೆ ಉತ್ತಮ ನಂಬಿಕೆಯಿಂದ ಒಪ್ಪಂದವನ್ನು ಮಾಡಿಕೊಂಡಿದ್ದರೂ, ಪಾಕಿಸ್ತಾನವು ಮೂರು ಯುದ್ಧಗಳನ್ನು ನಡೆಸುವ ಮೂಲಕ ಮತ್ತು ಭಾರತದ ವಿರುದ್ಧ ಸಾವಿರಾರು ಭಯೋತ್ಪಾದಕ ದಾಳಿಗಳನ್ನು ನಡೆಸುವ ಮೂಲಕ ತನ್ನ ಚೈತನ್ಯವನ್ನು ಪದೇ ಪದೇ ಉಲ್ಲಂಘಿಸಿದೆ ಎಂದು ಆರೋಪಿಸಿದರು. ಏಪ್ರಿಲ್ 2025 ರ ಪಹಲ್ಗಾಮ್ ಭಯೋತ್ಪಾದಕ ದಾಳಿಯನ್ನು ಉಲ್ಲೇಖಿಸಿದ ಅವರು, ಧರ್ಮ ಆಧಾರಿತ ಗುರಿ ದಾಳಿಯಲ್ಲಿ 26 ಅಮಾಯಕ ನಾಗರಿಕರು ಮೃತಪಟ್ಟರು. ಈ ಘಟನೆಯು ಪಾಕಿಸ್ತಾನ ಭಯೋತ್ಪಾದನೆಗೆ ನಿರಂತರ ಬೆಂಬಲವನ್ನು ಸ್ಪಷ್ಟವಾಗಿ ಒತ್ತಿಹೇಳುತ್ತದೆ ಎಂದರು.

# ಬೋಂಡಿ ಬೀಚ್ ಗುಂಡಿನ ದಾಳಿ: ಭಾರತೀಯ ಪ್ರಜೆಯಾಗಿ ಹಂತಕನ ತಂದೆ ಫಿಲಿಪೈನ್ಸ್ ಪ್ರವೇಶ



**ಸಿಡ್ನಿ:** ಆಸ್ಟ್ರೇಲಿಯಾದ ಬೋಂಡಿ ಬೀಚ್ ಸಾಮೂಹಿಕ ಗುಂಡಿನ ದಾಳಿಯಲ್ಲಿ ಭಾಗಿಯಾಗಿದ್ದ ತಂದೆ ಮತ್ತು ಮಗ ನವೆಂಬರ್ ತಿಂಗಳು ಫಿಲಿಪೈನ್ಸ್‌ನಲ್ಲಿ ಕಳೆದಿದ್ದಾರೆ ಎಂದು ಮನಿಲಾದ ವಲಸೆ ಇಲಾಖೆ ಮಂಗಳವಾರ ದೃಢಪಡಿಸಿದೆ, ಹಂತಕನ ತಂದೆ ಭಾರತೀಯ ಪ್ರಜೆಯಾಗಿ ದೇಶವನ್ನು ಪ್ರವೇಶಿಸಿದ್ದಾನೆ.

ಸಿಡ್ನಿಯ ಬೋಂಡಿ ಬೀಚ್‌ನಲ್ಲಿ ನಡೆದ ಹನುಕ್ಕಾ ಆಚರಣೆಯಲ್ಲಿ 15 ಜನರನ್ನು ಕೊಂದ, ಡಜನ್‌ಗಟ್ಟಲೆ ಜನರನ್ನು ಗಾಯಗೊಳಿಸಿದ ಸಾಜಿದ್ ಅಕ್ರಮ್ ಮತ್ತು ಆತನ ಮಗ ನವೀದ್ ನವೆಂಬರ್ 1ರಂದು ದಕ್ಷಿಣ ಪ್ರಾಂತ್ಯದ ದಾವೊಗೆ ಆಗಮಿಸಿದರು. ಭಾರತೀಯ ಪ್ರಜೆ ಸಾಜಿದ್ ಅಕ್ರಮ್ (50), ಆಸ್ಟ್ರೇಲಿಯಾದ ಪ್ರಜೆ ನವೀದ್‌ಅಕ್ರಮ್ (24) ಕಳೆದ ನವೆಂಬರ್ 1, 2025 ರಂದು ಆಸ್ಟ್ರೇಲಿಯಾದ ಸಿಡ್ನಿಯಿಂದ ಫಿಲಿಪೈನ್ಸ್‌ಗೆ ಆಗಮಿಸಿದ್ದಾರೆ ಎಂದು ವಲಸೆ ವಕ್ತಾರೆ ಡಾನಾ ಸ್ಯಾಂಡೋವಲ್ AFPಗೆ ತಿಳಿಸಿದರು. ಈ ಇಬ್ಬರು ನವೆಂಬರ್ 28 ರಂದು ಅಲ್ಲಿಂದ ಹೊರಟಿದ್ದಾರೆ. ದೇಶದ ಯಹೂದಿಗಳಲ್ಲಿ ಭೀತಿ ಮೂಡಿಸಲು ದಾಳಿ ನಡೆಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಆಸ್ಟ್ರೇಲಿಯಾದ ಪ್ರಧಾನಿ ಆಂಥೋನಿ ಅಲ್ಬನೀಸ್ ಮಂಗಳವಾರ ಈ ಜೋಡಿ ದ್ವೇಷದ ಸಿದ್ಧಾಂತದಿಂದ ಈ ದಾಳಿ ನಡೆಸಿದ್ದಾರೆ ಎಂದು ಸುಳಿವು ನೀಡಿದ್ದಾರೆ ಎಂದು ತಿಳಿಸಿದ್ದಾರೆ. ಇದು ಇಸ್ಲಾಮಿಕ್ ಸ್ಟೇಟ್ ISIS ಸಿದ್ಧಾಂತದಿಂದ ಪ್ರೇರಿತರಾಗದ್ದಾರೆ ಎಂದು ತೋರುತ್ತದೆ ಎಂದು ಅಲ್ಬನೀಸ್ ಎಬಿಸಿಗೆ ತಿಳಿಸಿದರು. ಒಂದು ದಶಕದ ಹಿಂದೆ ಉದಯವಾದ ಐಸಿಸ್ ನೊಂದಿಗೆ ಜಗತ್ತು ಉಗ್ರವಾದ ಮತ್ತು ದ್ವೇಷಪೂರಿತ ಸಿದ್ಧಾಂತದೊಂದಿಗೆ ಹೋರಾಡುತ್ತಿದೆ ಎಂದು ಅವರು ಸಂದರ್ಶನವೊಂದರಲ್ಲಿ ಹೇಳಿದರು.

**ವಲಸೆ ಅಧಿಕಾರಿಗಳ ಮಾಹಿತಿ**


ಗುಂಡಿನ ದಾಳಿಯ ನಂತರ ಬೀಚ್ ಬಳಿ ನಿಂತಿದ್ದ ನವೀದ್ ಅಕ್ರಮ್ ಹೆಸರಿನಲ್ಲಿ ನೋಂದಾಯಿಸಲಾದ ಕಾರನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ. ಸುಧಾರಿತ ಬಾಂಬ್‌ಗಳು ಮತ್ತು ಮನೆಯಲ್ಲಿ ತಯಾರಿಸಿದ ಐಸಿಸ್ ಎರಡು ಧ್ವಜಗಳು ಕಾರಿನಲ್ಲಿ ಸಿಕ್ಕಿವೆ ಎಂದು ನ್ಯೂ ಸೌತ್ ವೇಲ್ಸ್ ಪೊಲೀಸ್ ಆಯುಕ್ತ ಮಾಲ್ ಲ್ಯಾನ್ಯನ್ ಮಂಗಳವಾರ ತಿಳಿಸಿದ್ದಾರೆ.

ಇಟ್ಟಿಗೆ ಕೆಲಸಗಾರ ಎಂದು ವರದಿಯಾದ ನವೀದ್ ಅಕ್ರಮ್ 2019ರಲ್ಲಿ ಆಸ್ಟ್ರೇಲಿಯಾದ ಗುಪ್ತಚರ ಸಂಸ್ಥೆಯ ಗಮನಕ್ಕೆ ಬಂದಿದ್ದ, ಆದರೆ ಆ ಸಮಯದಲ್ಲಿ ಅವನಿಂದ ಅಪಾಯವಿದೆ ಎಂದು ಪರಿಗಣಿಸಲಾಗಿಲ್ಲ ಎಂದು ಅಲ್ಬನೀಸ್ ಹೇಳಿದರು. ಅವರು ಅವನನ್ನು ಸಂದರ್ಶಿಸಿದರು, ಅವನ ಕುಟುಂಬ ಸದಸ್ಯರನ್ನು ಸಂದರ್ಶಿಸಿದರು. ಅವನ ಸುತ್ತಲಿನ ಜನರನ್ನು ಸಂದರ್ಶಿಸಿದರು ಎಂದು ಅಲ್ಬನೀಸ್ ಹೇಳಿದರು. ಆ ಸಮಯದಲ್ಲಿ ಆತನ ಬಗ್ಗೆ ಯಾವುದೇ ಸಂಶಯ ಮೂಡಲಿಲ್ಲ ಎಂದು ತಿಳಿಸಿದ್ದಾರೆ.

ಕಳೆದ ತಿಂಗಳು ಫಿಲಿಪೈನ್ಸ್ ಪ್ರವಾಸದಲ್ಲಿ ಅವರು ಇಸ್ಲಾಮಿಸ್ಟ್ ಉಗ್ರಗಾಮಿಗಳನ್ನು ಭೇಟಿಯಾಗಿದ್ದಾರೆಯೇ ಎಂಬ ಪ್ರಶ್ನೆ ಮೂಡಿದೆ. ಅವರು ಫಿಲಿಪೈನ್ಸ್‌ಗೆ ಏಕೆ ಹೋದರು, ಮತ್ತು ಉದ್ದೇಶ ಏನು ಅವರು ಎಲ್ಲಿಗೆ ಹೋದರು ಎಂಬುದು ಪ್ರಸ್ತುತ ತನಿಖೆಯಲ್ಲಿದೆ ಎಂದು ಲ್ಯಾನ್ಯನ್ ಮಂಗಳವಾರ ವರದಿಗಾರರಿಗೆ ತಿಳಿಸಿದರು. ದಾಳಿಯ ದಿನದಂದು ನವೀದ್ ತನ್ನ ತಾಯಿಗೆ ಮೀನುಗಾರಿಕೆ ಪ್ರವಾಸಕ್ಕೆ ನಗರದಿಂದ ಹೊರಡುತ್ತಿದ್ದೇನೆ ಎಂದು ಹೇಳಿದ್ದಾನೆ ಎಂದು ವರದಿಯಾಗಿದೆ. ಆದರೆ ಆತ ತನ್ನ ತಂದೆಯೊಂದಿಗೆ ಬಾಡಿಗೆ ಅಪಾರ್ಟ್‌ಮೆಂಟ್‌ನಲ್ಲಿ ಇದ್ದ ಎಂದು ಅಧಿಕಾರಿಗಳು ಅನುಮಾನ ವ್ಯಕ್ತ ಪಡಿಸಿದ್ದಾರೆ.

# ಭಾಷಣ ಎಡಿಟ್ ಮಾಡಿ ಪ್ರಸಾರ: ಬಿಬಿಸಿ ವಿರುದ್ಧ ಗುಡುಗಿದ ಟ್ರಂಪ್

• **ಉದಯವಾಹಿನಿ, ವಾಷಿಂಗ್ಟನ್**



ಕಳೆದ ವರ್ಷ ಪ್ರಸಾರವಾದ ಸುದ್ದಿ ಸಾಕ್ಷ್ಯಚಿತ್ರವೊಂದರಲ್ಲಿ ತಮ್ಮ ಭಾಷಣವನ್ನು ಎಡಿಟ್ ಮಾಡಿ ಪ್ರಸಾರ ಮಾಡಿದ್ದಕ್ಕಾಗಿ ಬಿಬಿಸಿ ವಿರುದ್ಧ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಗುಡುಗಿದ್ದು, 10 ಬಿಲಿಯನ್ ಡಾಲರ್ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ. 33 ಪುಟಗಳ ಮೊಕದ್ದಮೆಯಲ್ಲಿ ಟ್ರಂಪ್‌ಅವರು, ಬಿಬಿಸಿ ಸುದ್ದಿ ವಿರುದ್ಧ ಕಿಡಿಕಾರಿದ್ದು, ಸುಳ್ಳು, ಮಾನನಷ್ಟಕರ, ಮೋಸಗೊಳಿಸುವ, ಅವಹೇಳನಕಾರಿ, ಪ್ರಚೋದನಕಾರಿ ಮತ್ತು ದುರುದ್ದೇಶಪೂರಿತ ಚಿತ್ರಣವನ್ನು ಪ್ರಸಾರ ಮಾಡಿದೆ ಎಂದು ಆರೋಪಿಸಿದ್ದಾರೆ.

ಇದನ್ನು 2024ರ ಅಮೆರಿಕಾ ಅಧ್ಯಕ್ಷೀಯ ಚುನಾವಣೆಯಲ್ಲಿ ಹಸ್ತಕ್ಷೇಪ ಮಾಡುವ, ಪ್ರಭಾವ ಬೀರುವ ಪ್ರಯತ್ನ ಎಂದು ಆರೋಪಿಸಿದ್ದಾರೆ.

ಉದ್ದೇಶಪೂರ್ವಕವಾಗಿ ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸುವ ಸಲುವಾಗಿ ಭಾಷಣವನ್ನು ಎಡಿಟ್ ಮಾಡಿ ಬಿಬಿಸಿ ಪ್ರಸಾರ ಮಾಡಿದೆ ಎಂದು ಹೇಳಿದ್ದಾರೆ. ಆರೋಪ ಹಿನ್ನೆಲೆಯಲ್ಲಿ ಸಂಸ್ಥೆಯ ಉನ್ನತ ಅಧಿಕಾರಿಗಳು ರಾಜೀನಾಮೆ ನೀಡಿದ್ದಲ್ಲದೆ, ಭಾರತೀಯ ಮೂಲದ ಬಿಬಿಸಿ ಅಧ್ಯಕ್ಷ ಸಮೀರ್ ಶಾ ಕ್ಷಮೆಯಾಚಿಸಿದ್ದರು.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಭಾಷಣವನ್ನು ಎಡಿಟ್ ಮಾಡಿ, 2021ರ ಕ್ಯಾಪಿಟಲ್ ಗಲಭೆಗೆ ಕುಮ್ಮಕ್ಕು ನೀಡಿದಂತೆ ಬಿಂಬಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ (ಬಿಬಿಸಿ) ಟ್ರಂಪ್ ಅವರನ್ನು ಕ್ಷಮೆಯಾಚಿಸಿತ್ತು. ಇದೇ ವೇಳೆ, ಟ್ರಂಪ್ ಅವರ ಮಾನಹಾನಿ ಮಾಡಿಲ್ಲ ಎಂದು ಅದು ಸ್ಪಷ್ಟಪಡಿಸಿತ್ತು. ಈ ಮೂಲಕ, 1 ಶತಕೋಟಿ ಡಾಲರ್ (ಅಂದಾಜು 8,873 ಕೋಟಿ) ಪರಿಹಾರ ಕೋರುವ ಮಾನನಷ್ಟ ಮೊಕದ್ದಮೆ ಬೆದರಿಕೆಯನ್ನು ಅದು ತಳ್ಳಿಹಾಕಿತ್ತು.

ವೈಯಕ್ತಿಕವಾಗಿ ಶ್ವೇತಭವನಕ್ಕೆ ಪತ್ರ ಬರೆದಿದ್ದ ಬಿಬಿಸಿ ಮುಖ್ಯಸ್ಥ ಸಮೀರ್ ಶಾ ಅವರು, ಟ್ರಂಪ್ ಅವರ ಭಾಷಣವನ್ನು ತಪ್ಪಾಗಿ ನಿರೂಪಿಸಿದ್ದಕ್ಕಾಗಿ ನಾನು, ಸಂಸ್ಥೆ ಕ್ಷಮೆಯಾಚಿಸುತ್ತೇವೆ ಎಂದು ತಿಳಿಸಿದ್ದರು.

ಆದರೆ, ಈ ಕ್ಷಮೆಯನ್ನು ನಿರಾಕರಿಸಿರುವ ಡೊನಾಲ್ಡ್ ಟ್ರಂಪ್ ಅವರು, ಇದೀಗ ಬಿಬಿಸಿ ವಿರುದ್ಧ 10 ಬಿಲಿಯನ್ ಡಾಲರ್ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ.

### ಎರಡು ಪ್ರತ್ಯೇಕ ಭಾಷಣ

**ಟ್ರಂಪ್ ಅವರ ಭಾಷಣವಿರುವ ಸಾಕ್ಷ್ಯಚಿತ್ರವನ್ನು ಮರುಪ್ರಸಾರ ಮಾಡುವ ಯೋಜನೆ ಇಲ್ಲ ಎಂದೂ ಅವರು ಸ್ಪಷ್ಟಪಡಿಸಿದ್ದರು. ಸಾಕ್ಷ್ಯಚಿತ್ರದಲ್ಲಿ ಟ್ರಂಪ್ ಅವರ ಎರಡು ಪ್ರತ್ಯೇಕ ಭಾಷಣದ ತುಣುಕುಗಳನ್ನು ಬಳಸಿಕೊಳ್ಳಲಾಗಿತ್ತು. ಆದರೆ ಅವರು ಏಕಕಾಲದಲ್ಲಿ ಮಾತನಾಡಿದಂತೆ ಎಡಿಟ್ ಮಾಡಲಾದ ಕಾರಣ, ಕ್ಯಾಪಿಟಲ್ ಗಲಭೆಗೆ ಅವರು ನೇರವಾಗಿ ಪ್ರಚೋದನೆ ನೀಡಿದಂತೆ ಅದು ಭಾಸವಾಗುತಿತ್ತು. ಇದು ಉದ್ದೇಶಪೂರ್ವಕವಾಗಿ ಮಾಡಿದ ತಪ್ಪಲ್ಲ ಎಂದು ತಿಳಿಸಿದ್ದರು.**

# 1 ಲಕ್ಷ ರೂ. ಸಾಲ, ಬಡ್ಡಿ, ಚಕ್ರಬಡ್ಡಿ ಸೇರಿ ಆದದ್ದು 74 ಲಕ್ಷ ರೂ: ಕಿಡ್ನಿ ಮಾರಾಟ ಮಾಡಿದ ರೈತ



**ಮಹಾರಾಷ್ಟ್ರ:** ತೆಗೆದುಕೊಂಡಿದ್ದ ಒಂದು ಲಕ್ಷ ರೂಪಾಯಿ ಸಾಲಕ್ಕೆ ಪ್ರತಿದಿನ 10,000 ಬಡ್ಡಿ ಸೇರಿದಂತೆ 74 ಲಕ್ಷ ರೂ. ಆಗಿದ್ದರಿಂದ ಮಹಾರಾಷ್ಟ್ರದ ರೈತರೊಬ್ಬರು, ಕಾಂಬೋಡಿಯಾಗೆ ತೆರಳಿ ತನ್ನ ಕಿಡ್ನಿ ಮಾರಾಟ ಮಾಡಿರುವ ಘಟನೆ ನಡೆದಿದೆ.

ಚಂದ್ರಾಪುರ ಜಿಲ್ಲೆಯ ರೈತ ರೋಶನ್ ಸದಾಶಿವ್ ಕುಡೆ, ಕೃಷಿಯಲ್ಲಿ ನಿರಂತರವಾಗಿ ನಷ್ಟ ಅನುಭವಿಸಿದ್ದು, ಡೈರಿ ವ್ಯವಹಾರ ಆರಂಭಿಸಲು ನಿರ್ಧರಿಸಿದ್ದಾರೆ. ಅದಕ್ಕಾಗಿ ಅನೇಕ ಸಾಲಗಾರರಿಂದ 1 ಲಕ್ಷ ರೂ. ಸಾಲ ತೆಗೆದುಕೊಂಡಿದ್ದಾರೆ. ಡೈರಿ ವ್ಯವಹಾರ ಆರಂಭಕ್ಕೂ ಮುನ್ನಾ ಅವರು ಸಾಲ ತೆಗೆದುಕೊಂಡಿದ್ದರು. ಆದರೆ, ಅವರು ಖರೀದಿಸಿದ್ದ ಹಸುಗಳು ಸಾವನ್ನಪ್ಪಿದ್ದವು. ಬೆಳೆ ನಷ್ಟ ಆಗಿದ್ದರಿಂದ ಸಾಲದ ಸಮಸ್ಯೆ ದಿನದಿಂದ ದಿನಕ್ಕೆ ಬಿಗಡಾಯಿಸಿತು.

ಸಾಲ ಕೊಟ್ಟವರು ಕುಡೆ ಹಾಗೂ ಅವರ ಕುಟುಂಬಕ್ಕೆ ಕಿರುಕುಳ ನೀಡಲು ಆರಂಭಿಸಿದ್ದಾರೆ. ತದನಂತರ ಅವರು ಸಾಲ ತೀರಿಸಲು ತನ್ನ ಜಮೀನು, ಟ್ರಾಕ್ಟರ್ ಮತ್ತಿತರ ಮನೆಯಲ್ಲಿದ್ದ ಮೌಲ್ಯಯುತ ವಸ್ತುಗಳನ್ನು ಮಾರಾಟ ಮಾಡಿದರು. ಆದರೆ, ಅದು ಸಾಕಾಗಿಲ್ಲ.

**8 ಲಕ್ಷ ರೂಪಾಯಿಗೆ ಕಿಡ್ನಿ ಮಾರಾಟ:** ಇನ್ನೂ ಸಾಲ ಉಳಿದಿದ್ದಾಗ ಕಿಡ್ನಿ ಮಾರಾಟ ಮಾಡುವಂತೆ ಸಾಲಕೊಟ್ಟಿದ್ದ ವ್ಯಕ್ತಿಯೊಬ್ಬ ಸಲಹೆ ನೀಡಿದ್ದಾನೆ.

ಮಧ್ಯವರ್ತಿಯೊಬ್ಬರ ಮೂಲಕ ಕೊಲ್ಕತ್ತಾಗೆ ತೆರಳಿದ ಕುಡೆ, ಪರೀಕ್ಷೆ ನಡೆಸಿದ್ದಾರೆ. ತದನಂತರ ಕಾಂಬೋಡಿಯಾಗೆ ತೆರಳಿ, ಕಿಡ್ನಿ ತೆಗೆಸಿದ್ದು, ರೂ.8 ಲಕ್ಷಕ್ಕೆ ಮಾರಾಟ ಮಾಡಿದ್ದಾರೆ. ಸಾಲ ಕೊಟ್ಟವರಿಂದ ಕಿರುಕುಳದ ಬಗ್ಗೆ ದೂರು ನೀಡಿದ್ದರೂ ಪೊಲೀಸರು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ನಿರಂತರವಾಗಿ ಮಾನಸಿಕ ಹಾಗೂ ದೈಹಿಕವಾಗಿ ನೋವು ಅನುಭವಿಸುತ್ತಿರುವುದಾಗಿ ಎಂದು ಕುಡೆ ಹೇಳಿದ್ದಾರೆ. ಈಗ ನನಗೆ ನ್ಯಾಯ ಸಿಗದಿದ್ದರೆ, ರಾಜ್ಯ ಸರ್ಕಾರದ ಪ್ರದಾನ ಕಚೇರಿ, ಮುಂಬೈನ ಮಂತ್ರಾಲಯದ ಎದುರು ನಾನು ಮತ್ತು ನನ್ನ ಕುಟುಂಬ ಬೆಂಕಿ ಹಚ್ಚಿಕೊಂಡು ಸಾಯುತ್ತೇವೆ ಎಂದು ಅವರು ಹೇಳಿದ್ದಾರೆ.

## ಮಿನಿ ನ್ಯೂಸ್

### ಪಶ್ಚಿಮ ಬಂಗಾಳದಲ್ಲಿ ಡಿಲಿಟ್ ಮಾಡಿರುವ ಮತದಾರರ ಹೆಸರು ಬಿಡುಗಡೆ

**ಕೋಲ್ಕತ್ತಾ:** ಮುಂದಿನ ವರ್ಷದ ಆರಂಭದಲ್ಲಿ ವಿಧಾನಸಭಾ ಚುನಾವಣೆಗಳು ನಡೆಯಲಿರುವ ಪಶ್ಚಿಮ ಬಂಗಾಳದ ಕರಡು ಮತದಾರರ ಪಟ್ಟಿಯ ಪ್ರಕಟಣೆಗೆ ಕೆಲವೇ ಗಂಟೆಗಳ ಮೊದಲು, ಚುನಾವಣಾ ಆಯೋಗವು ಮಂಗಳವಾರ ಬೆಳಿಗ್ಗೆ ತನ್ನ ವೆಬ್‌ಸೈಟ್‌ನಲ್ಲಿ ಅಳಿಸಲಾದ ಮತದಾರರ ಹೆಸರನ್ನು ಬಿಡುಗಡೆ ಮಾಡಿದೆ. 2025ರಲ್ಲಿ ರಾಜ್ಯದ ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸಲ್ಪಟ್ಟ ಆದರೆ 2026ರ ಕರಡು ಪಟ್ಟಿಯಿಂದ ಅಳಿಸಲಾದ ಮತದಾರರನ್ನು ಪಟ್ಟಿ ಒಳಗೊಂಡಿದೆ.ಈ ಪಟ್ಟಿಯು ಪ್ರಸ್ತುತ ಆಯೋಗದ ಪೋರ್ಟಲ್ ಲಿಂಕ್‌ನಲ್ಲಿ ಲಭ್ಯವಿದೆ.

ಸಂಗ್ರಹಿಸಲಾಗದ ಎಣಿಕೆ ನಮೂನೆಗಳ ಸಂಖ್ಯೆ, ಆಯೋಗದ ಮೂಲಗಳ ಪ್ರಕಾರ, 58 ಲಕ್ಷ ಮೀರಿದೆ ಮತ್ತು ಅವರ ನೋಂದಾಯಿತ ವಿಳಾಸಗಳಿಂದ ಗೈರುಹಾಜರಾಗಿರುವುದು, ಶಾಶ್ವತವಾಗಿ ಸ್ಥಳಾಂತರಗೊಂಡಿರುವುದು, ಸತ್ತಿರುವುದು, ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ನಕಲಿ ಮತದಾರರೆಂದು ಗುರುತಿಸಲ್ಪಟ್ಟಿರುವ ಆಧಾರದ ಮೇಲೆ ಅಳಿಸಲಾಗಿದೆ. ಹಕ್ಕುಗಳು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಅವಧಿಯಲ್ಲಿ ಅಂದರೆ 16/12/2025 ರಿಂದ 15/01/2026 ರವರೆಗೆ ಕರಡು ಪಟ್ಟಿಯನ್ನು ಪ್ರಕಟಿಸಿದ ನಂತರ, ಬಾಧಿತ ವ್ಯಕ್ತಿಗಳು ತಮ್ಮ ಹಕ್ಕುಗಳನ್ನು ಘೋಷಣೆ ನಮೂನೆ ಮತ್ತು ಪೋಷಕ ದಾಖಲೆಗಳೊಂದಿಗೆ ಫಾರ್ಮ್ 6ರಲ್ಲಿ ಸಲ್ಲಿಸಬಹುದು ಎಂದು ಆಯೋಗದ ವೆಬ್‌ಸೈಟ್ ತಿಳಿಸಿದೆ. 294 ಸದಸ್ಯರ ಪಶ್ಚಿಮ ಬಂಗಾಳ ವಿಧಾನಸಭೆಗೆ ಚುನಾವಣೆಗಳು ಮುಂದಿನ ವರ್ಷದ ಆರಂಭದಲ್ಲಿ ನಡೆಯಲಿವೆ.

### ಎಕ್ಸ್‌ಪ್ರೆಸ್‌ವೇಯಲ್ಲಿ ಮಂಜಿನಿಂದಾಗಿ ಸರಣಿ ಅಪಘಾತ, ನಾಲ್ವರ ಸಾವು



**ಮಥುರಾ:** ಇಲ್ಲಿನ ಯಮುನಾ ಎಕ್ಸ್‌ಪ್ರೆಸ್‌ವೇಯಲ್ಲಿ ಮಂಗಳವಾರ ಮುಂಜಾನೆ ವಾಹನಗಳ ಸರಣಿ ಅಪಘಾತದಲ್ಲಿ 4 ಮಂದಿ ಸಾವನ್ನಪ್ಪಿದ್ದು, 24ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಮುಂಜಾನೆ 4.30ರ ಸುಮಾರಿಗೆ ದಟ್ಟವಾದ ಮಂಜಿನಲ್ಲಿ ಕನಿಷ್ಠ ಏಳು ಬಸ್‌ಗಳು ಮತ್ತು ಹಲವಾರು ಸಣ್ಣ ವಾಹನಗಳು ಪರಸ್ಪರ ಡಿಕ್ಕಿ ಹೊಡೆದಿವೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಬಲದೇವ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ಯಮುನಾ ಎಕ್ಸ್‌ಪ್ರೆಸ್‌ವೇಯ ಆಗ್ರಾದಿಂದ ನೋಯ್ಡಾಕ್ಕೆ ಹೋಗುವ ಬದಿಯಲ್ಲಿ ಕಡಿಮೆ ಗೋಚರತೆಯಿಂದಾ ವಾಹನಗಳು ಡಿಕ್ಕಿ ಹೊಡೆದವು. ಇದರಲ್ಲಿ ಕೆಲವು ವಾಹನಗಳಿಗೂ ಬೆಂಕಿ ಹೊತ್ತಿಕೊಂಡಿದೆ ಎಂದು ವರದಿಯಾಗಿದೆ. ಎಲ್ಲಾ ಗಾಯಾಳುಗಳನ್ನು ಆಸ್ಪತ್ರೆಗೆ ಕಳುಹಿಸಲಾಗಿದೆ ಎಂದು ಮಥುರಾ ಜಿಲ್ಲಾ ಎಸ್‌ಎಸ್‌ಪಿ ಶ್ಲೋಕ್‌ಕುಮಾರ್ ಹೇಳಿದರು. ಸ್ಥಳದಿಂದ ಬಂದ ದೃಶ್ಯಗಳಲ್ಲಿ ಬೆಂಕಿ ಹೊತ್ತಿಕೊಂಡ ಬಸ್‌ಗಳ ಸುಟ್ಟ ಅವಶೇಷಗಳು ಕಂಡುಬಂದಿವೆ. ಅಪಗಾತಗೊಂಡ ವಾಹನವನ್ನು ರಸ್ತೆಯಿಂದ ತೆಗೆದುಹಾಕಲು ಕ್ರೇನ್‌ಗಳನ್ನು ಬಳಸಲಾಗಿದೆ .ಕೆಲ ಪ್ರಯಾಣಿಕರನ್ನು ಸರ್ಕಾರಿ ವಾಹನಗಳಲ್ಲಿ ಅವರವರ ಸ್ಥಳಗಳಿಗೆ ಕಳುಹಿಸಲಾಗಿದೆ ಎಂದು ಅಧಿಕಾರಿ ಹೇಳಿದರು. ಅಪಘಾತದಿಂದ ವಾಹನ ಸಂಚಾರಕ್ಕೆ ಕೆಲ ಸಮಯ ನಿರ್ಬಂಧಿಸಲ್ಪಟ್ಟಿರುವುದರಿಂದ, ವಾಹನ ಸಾಮಚಾರಕ್ಕೆ ಮಾರ್ಗ ಬದಲಾವಣೆಗಳನ್ನು ಮಾಡಲಾಗುತ್ತು ಬೆಳಿಗ್ಗೆ 10 ಗಂಟೆ ವೇಳೆಗೆ ಸಹಜ ಸ್ಥಿತಿಗೆ ತರಲಾಗಿದೆ ಎಂದು ಅವರು ಹೇಳಿದರು.

### ಬೋಂಡಿ ಬೀಚ್ ದಾಳಿಯಲ್ಲಿ ಮೂವರು ಭಾರತೀಯ ವಿದ್ಯಾರ್ಥಿಗಳಿಗೂ ಗಾಯ

**ಮೆಲ್ಬರ್ನ್:** ಸಿಡ್ನಿಯ ಬೋಂಡಿ ಬೀಚ್‌ನಲ್ಲಿ ನಡೆದ ಉಗ್ರ ದಾಳಿಯಲ್ಲಿ ಗಾಯಗೊಂಡ 40 ಮಂದಿಯ ಪೈಕಿ ಮೂವರು ಭಾರತದ ವಿದ್ಯಾರ್ಥಿಗಳಿದ್ದಾರೆ ಎಂದು ಮಾಧ್ಯಮಗಳು ಮಂಗಳವಾರ ವರದಿ ಮಾಡಿವೆ. ಈ ಪೈಕಿ ಇಬ್ಬರು ವಿದ್ಯಾರ್ಥಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು 'ಆಸ್ಟ್ರೇಲಿಯಾ ಟುಡೆ' ಪತ್ರಿಕೆ ವರದಿ ಮಾಡಿದೆ. ಗಾಯಗೊಂಡ ಭಾರತದ ವಿದ್ಯಾರ್ಥಿಗಳ ಹೆಸರು ಇನ್ನೂ ಬಹಿರಂಗಗೊಂಡಿಲ್ಲ. ಗುಂಡಿನ ದಾಳಿಯಿಂದ ಗಾಯಗೊಂಡ ಭಾರತದ ವಿದ್ಯಾರ್ಥಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರ ಸದ್ಯದ ಪರಿಸ್ಥಿತಿ ಬಗ್ಗೆ ಯಾವುದೇ ಖಚಿತ ಮಾಹಿತಿ ಇಲ್ಲ ಎಂದು ಅದು ಹೇಳಿದೆ.

ಪ್ರವಾಸಿ ತಾಣ ಬೋಂಡಿ ಬೀಚ್‌ನಲ್ಲಿ ಹನುಕ್ಕಾ ಯಹೂದಿ ಹಬ್ಬದ ಪ್ರಾರಂಭೋತ್ಸವಕ್ಕಾಗಿ ಸೇರಿದ್ದ ಅಪಾರ ಸಂಖ್ಯೆಯ ಜನರ ಮೇಲೆ ನವೀದ್ ಅಕ್ರಮ್ (24), ಆತನ 50 ವರ್ಷದ ತಂದೆ ಗುಂಡಿನ ದಾಳಿ ನಡೆಸಿದ್ದರು. ಘಟನೆಯಲ್ಲಿ 10 ವರ್ಷದ ಮಗು ಸೇರಿದಂತೆ ಕನಿಷ್ಠ 15 ಮಂದಿ ಸಾವಿಗೀಡಾಗಿದ್ದಾರೆ. ಗಾಯಗೊಂಡ ಐವರ ಪರಿಸ್ಥಿತಿ ಗಂಭೀರವಾಗಿದೆ. ಗಾಯಗೊಂಡ ಇಬ್ಬರು ಪೊಲೀಸ್ ಅಧಿಕಾರಿಗಳ ಪರಿಸ್ಥಿತಿಯೂ ಗಂಭೀರವಾಗಿದೆ.

# ಬಿಜೆಪಿ ಸರ್ಕಾರಕ್ಕೆ ಹೆಸರು ಬದಲಿಸುವ ಗೀಳು ಇರೋದ್ಯಾಕೆ

## ಮಹಾತ್ಮ ಗಾಂಧಿ ನನಗಷ್ಟೇ ಅಲ್ಲ ಇಡೀ ದೇಶದ ಕುಟುಂಬದವರು; G Ram G ವಿರುದ್ಧ ಪ್ರಿಯಾಂಕಾ ಗಾಂಧಿ ಕಿಡಿ

**ಹೊಸದಿಲ್ಲಿ:** ಗ್ರಾಮೀಣ ಭಾಗದ ಜನರ ಜೀವನಾಡಿಯಾಗಿದ್ದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ರದ್ದುಪಡಿಸಿ, ಅದರ ಬದಲಿಗೆ ಹೊಸ 'ವಿಬಿ-ಜಿ ರಾಮ್ ಜಿ' ಮಸೂದೆಯನ್ನು ತರಲು ಬಿಜೆಪಿ ಸರ್ಕಾರವು ಮುಂದಾಗಿದ್ದು, ಈ ಸಂಬಂಧ ಲೋಕಸಭೆಯಲ್ಲಿ ಮಂಡಿಸಲಾದ ಹೊಸ ಮಸೂದೆ ವಿರುದ್ಧ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ವಾಗ್ದಾಳಿ ನಡೆಸಿದ್ದಾರೆ.

ಕೇಂದ್ರ ಸರ್ಕಾರಕ್ಕೆ ಹೆಸರು ಬದಲಾಯಿಸುವ ಗೀಳು ಹಿಡಿದಿದೆ ಎಂದು ಕಿಡಿಕಾರಿದ್ದಾರೆ. ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು, ಹಳೆಯ ಮನರೇಗಾ ಕಾಯ್ದೆಯನ್ನು ರದ್ದುಪಡಿಸಿ, ಅದರ ಬದಲಿಗೆ ವಿಕಸಿತ ಭಾರತ-ಉದ್ಯೋಗ ಖಾತರಿ, ಜೀವನೋಪಾಯ ಮಿಷನ್ (ಗ್ರಾಮೀಣ) (ವಿಬಿ-ಜಿ ರಾಮ್ ಜಿ) ಮಸೂದೆ, 2025ಅನ್ನು ಮಂಡಿಸಲು ಅನುಮತಿ ಕೋರಿದರು.

- **ಹೊಸ ಮಸೂದೆಯು ಬಡವರ ಉದ್ಯೋಗದ ಹಕ್ಕನ್ನು ದುರ್ಬಲಗೊಳಿಸುತ್ತದೆ. ಇದು ಸಂವಿಧಾನದಕ್ಕೆ ವಿರೋಧವಾದದ್ದು ಎಂದ ಪ್ರಿಯಾಂಕಾಗಾಂಧಿ**
- **ರಾಮನ ಹೆಸರು ಇರುವುದೇ ಕಾಂಗ್ರೆಸ್‌ನ ಸಮಸ್ಯೆಗೆ ಕಾರಣ ಎಂದು ಬಿಜೆಪಿ ನಾಯಕ ಮುಖ್ತಾರ್ ಅಬ್ಬಾಸ್ ನಖ್ವಿ ಲೇವಡಿ**



**ಮಹಾತ್ಮ ನಮ್ಮ ಕುಟುಂಬದವರಲ್ಲ:** ಇದೇ ಸಮಯದಲ್ಲಿ ವಯನಾಡ್ ಸಂಸದೆ ಪ್ರಿಯಾಂಕಾ ಗಾಂಧಿ ಅವರು ನರೇಗಾ ಯೋಜನೆಯ ಮಹತ್ವದ ಬಗ್ಗೆ ಸಂಸತ್‌ನಲ್ಲಿ ಮಾತಾನಾಡುತ್ತಿದ್ದರು.

ಬಿಜೆಪಿ ಸಂಸದರು ಮಧ್ಯಪ್ರವೇಶಿಸಿ, ಮಹಾತ್ಮ ಗಾಂಧಿಯವರು ನಿಮ್ಮ ಕುಟುಂಬದವರಲ್ಲ ಎಂದು ಟೀಕಿಸಿದರು. ಇದಕ್ಕೆ ಖಡಕ್ ಆಗಿ ಪ್ರಿಯಾಂಕಾ ಗಾಧಿಯವರು ಉತ್ತರಿಸಿದ್ದು, ಮಹಾತ್ಮ ಗಾಂಧಿಯವರು ನನ್ನ ಕುಟುಂಬದವರಲ್ಲ ಹೌದು ಅದು ನಿಜ. ಆದರೆ, ಅವರು ನನಗೆ ಕುಟುಂಬದವರಿದ್ದಂತೆ. ಕೇವಲ ನನಗಷ್ಟೇ ಅಲ್ಲ, ಇಡೀ ದೇಶದ ಭಾವನೆಯೂ ಇದೆ ಆಗಿದೆ ಎಂದು ಪ್ರಿಯಾಂಕಾ ಗಾಂಧಿ ಸಂಸತ್‌ನಲ್ಲಿ ಉತ್ತರಿಸಿದರು. ಸರ್ಕಾರದ ಈ ಕ್ರಮವು ಕೇಂದ್ರದ ನಿಯಂತ್ರಣವನ್ನು ವಿಸ್ತರಿಸುವ, ಜವಾಬ್ದಾರಿಗಳಿಂದ ನುಣುಚಿಕೊಳ್ಳುವ ಪ್ರಯತ್ನವಾಗಿದೆ. ಯಾರದ್ದೋ ಒಬ್ಬರ ಹವ್ಯಾಸ, ಮಹತ್ವಾಕಾಂಕ್ಷೆ ಮತ್ತು ಪೂರ್ವಾಗ್ರಹದ ಆಧಾರದ ಮೇಲೆ ಕಾನೂನು ಜಾರಿಯಾಗಬಾರದು ಸರ್ಕಾರಕ್ಕೆ ಹೆಸರು ಬದಲಾಯಿಸುವ ಈ ಗೀಳು ಹೆಚ್ಚಾಗುತ್ತಿರುವುದಾದರೂ ಯಾಕೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಹೆಸರು ಬದಲಾವಣೆಯು ಭಾರಿ ವೆಚ್ಚವನ್ನು ಒಳಗೊಂಡಿರುತ್ತದೆ. ಅನಗತ್ಯವಾಗಿ ಅವರು ಈ ಕ್ರಮ ಕೈಗೊಳ್ಳುತ್ತಿರೋದಾದರೂ ಯಾಕೆ? ಎಂದು ಪ್ರಶ್ನಿಸಿದರು.

**ಕೂಲಿ ಹೆಚ್ಚಿಸಿದ್ದೀರಾ?:** ಮುಂದುವರೆದು, ನರೇಗಾ ಅಡಿಯಲ್ಲಿ ಬಡವರಿಗೆ 100 ದಿನಗಳ ಉದ್ಯೋಗದ ಹಕ್ಕನ್ನು ನೀಡಲಾಗಿತ್ತು. ಆದರೆ ಈ ಹೊಸ ಮಸೂದೆ ಆ ಹಕ್ಕನ್ನು ದುರ್ಬಲಗೊಳಿಸುತ್ತದೆ. ಇದರಿಂದ ಕಾರ್ಮಿಕ ವರ್ಗದವರಿಗೆ ಸಮಸ್ಯೆಯಾಗಲಿದೆ. ಹೊರಗಿನಿಂದ ನೋಡುವಾಗ ದಿನಗಳ ಸಂಖ್ಯೆ ಹೆಚ್ಚಿಸಿದಂತೆ ಕಾಣುತ್ತದೆ. ಆದರೆ ನೀವು ಕೂಲಿ ಹೆಚ್ಚಿಸಿದ್ದೀರಾ? ಎಂದು ಪ್ರಶ್ನಿಸಿದರು.

### ಕಾಂಗ್ರೆಸ್ ವಿರುದ್ಧ ಬಿಜೆಪಿ ಟೀಕೆ

**ವಿಬಿ-ಜಿ ರಾಮ್‌ಜಿ ಮಸೂದೆಯೂ 'ವಿಕಸಿತ್ ಭಾರತ್ 2047' ದೃಷ್ಟಿಕೋನಕ್ಕೆ ಅನುಗುಣವಾಗಿದೆ. ಬೇಡಿಕೆ ಆಧಾರಿತ ಮಾದರಿಯು ಅನಿರೀಕ್ಷಿತ ಹಂಚಿಕೆಗಳಿಗೆ ಕಾರಣವಾಗುತ್ತಿತ್ತು. ಆದರೆ ಹೊಸ ಮಾದರಿಯು ನಿರ್ದಿಷ್ಟ ಮಾನದಂಡಗಳನ್ನು ಬಳಸುತ್ತದೆ, ಇದು ಬಜೆಟ್ ಯೋಜನೆಯನ್ನು ಸುಲಭಗೊಳಿಸುತ್ತದೆ ಮತ್ತು ಅರ್ಹ ಕಾರ್ಮಿಕರಿಗೆ ಉದ್ಯೋಗ ಅಥವಾ ನಿರುದ್ಯೋಗ ಭತ್ಯೆಯನ್ನು ಖಾತರಿಪಡಿಸುತ್ತದೆ ಎಂದು ಸರ್ಕಾರ ಸಮರ್ಥಿಸಿಕೊಂಡಿದೆ ಎನ್ನಲಾಗುತ್ತಿದೆ. ರಾಮನ ಹೆಸರಿರುವುದು ಕಾಂಗ್ರೆಸ್‌ಗೆ ಸಹಿಸಲಾಗುತ್ತಿಲ್ಲ ಹೀಗಾಗಿ ಪ್ರತಿಭಟನೆ ನಡೆಸುತ್ತಿದ್ದಾರೆ ಎಂದು ಬಿಜೆಪಿ ನಾಯಕರು ಆಕ್ರೋಶ ವ್ಯಕ್ತಪಡಿಸಿದರು.**

### ಸಂಸತ್ ಆವರಣದಲ್ಲಿ ವಿಪಕ್ಷಗಳ ಪ್ರತಿಭಟನೆ

**ಇನ್ನು ಸಂಸತ್ ಆವರಣದಲ್ಲಿಯೂ ಸಹ ವಿಪಕ್ಷ ನಾಯಕರು ಪ್ರತಿಭಟನೆ ನಡೆಸಿದರು. ಮಹಾತ್ಮ ಗಾಂಧಿಯವರ ಭಾವಚಿತ್ರಗಳನ್ನು ಹಿಡಿದು ಪ್ರತಿಭಟನೆ ನಡೆಸಿದರು. ಪ್ರಿಯಾಂಕಾ ಗಾಂಧಿ, ಕೆಸಿ ವೇಣುಗೋಪಾಲ್ ಸೇರಿದಂತೆ ಹಲವರು ಇದ್ದರು. ಇದು ಕೇವಲ ಹೆಸರು ಬದಲಾವಣೆಯಲ್ಲ, ಇದು MGNREGA ಅನ್ನು ಮುಗಿಸಲು ಬಿಜೆಪಿ ಮತ್ತು ಆರ್‌ಎಸ್‌ಎಸ್ ನಡೆಸುತ್ತಿರುವ ಪಿತೂರಿ. ವಿದೇಶದಲ್ಲಿ ಗಾಂಧೀಜಿ ಪ್ರತಿಮೆಗೆ ಹೂವು ಇಡುವ ಮೋದಿ ಸರ್ಕಾರ, ದೇಶದಲ್ಲಿ ಅವರ ಹೆಸರನ್ನು ಅಳಿಸುತ್ತಿದೆ ಎಂದು ಮಲ್ಲಿಕಾರ್ಜುನ ಖರ್ಗೆ ಅವರು ಕಿಡಿಕಾರಿದರು.**



# 10 ಸಾವಿರ ಕೋಟಿ ಕಲೆಕ್ಷನ್ ಮಾಡಿದ ಎನಿಮೇಟೆಡ್ ಚಿತ್ರ

ವಿಶ್ವಮಟ್ಟದಲ್ಲಿ ತರುವ ಪ್ರಯತ್ನ

'ಝೂಟೋಪಿಯಾ 2' ಸಿನಿಮಾ 10,000 ಕೋಟಿ ರೂಪಾಯಿ ಗಳಿಸಿ ವಿಶ್ವದ ಗಮನ ಸೆಳೆದಿದೆ. ಅನಿಮೇಟೆಡ್ ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಯಶಸ್ಸು ಕಾಣುವುದಿಲ್ಲ ಎಂಬ ನಂಬಿಕೆಯನ್ನು ಈ ಚಿತ್ರ ಸುಳ್ಳು ಮಾಡಿದೆ. 2000 ಕೋಟಿ ಬಜೆಟ್‌ನಲ್ಲಿ ತಯಾರಾದ ಈ ಹಾಲಿವುಡ್ ಚಿತ್ರ, ಭಾರತೀಯ ನಿರ್ಮಾಪಕರಿಗೂ ಅನಿಮೇಟೆಡ್ ಸಿನಿಮಾಗಳಲ್ಲಿ ಹೂಡಿಕೆ ಮಾಡಲು ಪ್ರೇರಣೆ ನೀಡಿದೆ. ಹಾಲಿವುಡ್‌ನಲ್ಲಿ ತಯಾರಿಸೋ ಸಿನಿಮಾಗಳು ಸೂಪರ್ ಹಿಟ್ ಆಗುತ್ತವೆ. ಈ ಚಿತ್ರಗಳು ಸಾವಿರಾರು ಕೋಟಿ ರೂಪಾಯಿ ಗಳಿಕೆ ಮಾಡಿದ ಉದಾಹರಣೆ ಇದೆ. ಇದಕ್ಕೆ ಕಾರಣ ಸಿನಿಮಾದ ಅದ್ದೂರಿತನ. ಈಗ ಎನಿಮೇಟೆಡ್ ಚಿತ್ರವೊಂದು 10 ಸಾವಿರ ಕೋಟಿ ರೂಪಾಯಿ ಕಲೆಕ್ಷನ್ ಮಾಡಿದರೆ ಎಂದರೆ ನೀವು ನಂಬ್ತೀರಾ ನಂಬಲೇಬೇಕು. ಇಂತಹ ಅಪರೂಪದ ಸಾಧನೆಯನ್ನು 'ಝೂಟೋಪಿಯಾ 2' ಸಿನಿಮಾ ಮಾಡಿದೆ. ಈ ಸಿನಿಮಾ ವಿಶ್ವಾದ್ಯಂತ 1.137 ಬಿಲಿಯನ್ ಡಾಲರ್ ಗಳಿಸಿದೆ. ಇದನ್ನು ಭಾರತೀಯ ರುಪಾಯಿಗೆ ಬದಲಾವಣೆ ಮಾಡಿದರೆ 10 ಸಾವಿರ ಕೋಟಿ ರೂಪಾಯಿ ಆಗಲಿದೆ. ಅನಿಮೇಟೆಡ್ ಸಿನಿಮಾಗಳನ್ನ ಜನರು ನೋಡೋದಿಲ್ಲ ಎಂಬುದು ಅನೇಕರ ನಂಬಿಕೆ. ಹಣ ಹಾಕಿದರೆ ಹಣ ಹಿಂದಿರುಗೋದಿಲ್ಲ ಎಂಬ ಮನಸ್ಥಿತಿ ಭಾರತೀಯ ನಿರ್ಮಾಪಕರಲ್ಲಿ ಇದೆ. ಇಷ್ಟೇ ಅಲ್ಲ, ಈ ಚಿತ್ರಗಳು ಥಿಯೇಟರ್‌ನಲ್ಲಿ ಯಾವುದೇ ಕಾರಣಕ್ಕೂ ಹಿಟ್ ಆಗುವುದಿಲ್ಲ ಎನ್ನುವ ನಿರ್ಧಾರಕ್ಕೆ ಬಂದಾಗಿದೆ.

ಆದರೆ, ಇದನ್ನು ಸುಳ್ಳು ಮಾಡಿದೆ 'ಝೂಟೋಪಿಯಾ 2' ಸಿನಿಮಾ. 2016ರಲ್ಲಿ 'ಝೂಟೋಪಿಯಾ' ಚಿತ್ರ ರಿಲೀಸ್ ಆಯಿತು. ಝೂಟೋಪಿಯಾ ಎಂಬ ಕಾಲ್ಪನಿಕ ಊರು. ಇಲ್ಲಿ ಕ್ರೂರ ಪ್ರಾಣಿ, ಸೌಮ್ಯ ಪ್ರಾಣಿಗಳು ಒಟ್ಟಾಗಿ ವಾಸಿಸುತ್ತವೆ. ಕಾಮಿಡಿ ಶೈಲಿಯಲ್ಲಿ ಈ ಸಿನಿಮಾ ಮೂಡಿ ಬಂದಿತ್ತು. ಇದರ ಸೀಕ್ವೆಲ್ ಆಗಿ 'ಝೂಟೋಪಿಯಾ 2' ಸಿನಿಮಾ ಮೂಡಿ ಬಂದಿದೆ. ಇದು ಇಂಗ್ಲಿಷ್ ಸಿನಿಮಾ. ಈ ಚಿತ್ರದ ಬಜೆಟ್ 2 ಸಾವಿರ ಕೋಟಿ ರೂಪಾಯಿ. ಈ ಸಿನಿಮಾ ವಿಶ್ವಾದ್ಯಂತ 10 ಸಾವಿರ ಕೋಟಿ ರೂಪಾಯಿ ಅಷ್ಟು ಗಳಿಸಿದೆ. ಇದರಲ್ಲಿ ಅರ್ಧದಷ್ಟು ಗಳಿಕೆ ಚೀನಾ ಮಾರುಕಟ್ಟೆಯಿದ ಬಂದಿದೆ ಎನ್ನಲಾಗುತ್ತಿದೆ. ಇದರಿಂದ ಅನಿಮೇಟೆಡ್ ಚಿತ್ರಗಳನ್ನು ವಿಶ್ವಮಟ್ಟದಲ್ಲಿ ತರುವ ಪ್ರಯತ್ನ ಆಗಬೇಕು ಎಂಬ ಮಾತು ಕೇಳಿ ಬಂದಿದೆ. ಹೊಂಬಾಳೆ ಫಿಲ್ಮ್ಸ್ ಪ್ರೆಸೆಂಟ್ ಮಾಡಿದ 'ಮಹಾವತಾರ ನರಸಿಂಹ' ಸೂಪರ್ ಹಿಟ್ ಆಯಿತು. ಈ ಚಿತ್ರ ಬಾಕ್ಸ್ ಆಫೀಸ್‌ನಲ್ಲಿ 300 ಕೋಟಿ ರೂಪಾಯಿಗೂ ಹೆಚ್ಚಿನ ಕಲೆಕ್ಷನ್ ಮಾಡಿತ್ತು.



# ಚೆನ್ನೈನಲ್ಲಿ ಹೃದಯ ಗೆದ್ದ ಮಾದರಿಯಾದ ಸುದೀಪ್

ಕಿಚ್ಚ ಸುದೀಪ್ ನಟನೆಯ 'ಮಾರ್ಕ್' ಸಿನಿಮಾ ಕೆಲವೇ ದಿನಗಳಲ್ಲಿ ಬಿಡುಗಡೆ ಆಗಲಿದ್ದು, ಸಿನಿಮಾದ ಪ್ರಚಾರಾರ್ಥ ಚೆನ್ನೈನಲ್ಲಿ ಇತ್ತೀಚೆಗಷ್ಟೆ ಸುದ್ದಿಗೋಷ್ಠಿ ನಡೆಸಲಾಗಿತ್ತು. ಸುದ್ದಿಗೋಷ್ಠಿಯಲ್ಲಿ ಪತ್ರಕರ್ತರೊಬ್ಬರು ಉದ್ದೇಶಪೂರ್ವಕವಾಗಿ ವಿವಾದಾತ್ಮಕ ಪ್ರಶ್ನೆ ಕೇಳಿದಾಗ ಸುದೀಪ್ ಕೊಟ್ಟ ಉತ್ತರ ಅಲ್ಲಿದ್ದವರ ಮನಸ್ಸು ಗೆದ್ದಿದೆ.

ಸುದೀಪ್ ನಟನೆಯ 'ಮಾರ್ಕ್' ಸಿನಿಮಾ ಕೆಲವೇ ದಿನಗಳಲ್ಲಿ ಬಿಡುಗಡೆ ಆಗಲಿದೆ. ಸಿನಿಮಾವನ್ನು ಕನ್ನಡ ಮಾತ್ರವಲ್ಲದೆ ಇತರೆ ಭಾಷೆಗಳಲ್ಲಿಯೂ ಬಿಡುಗಡೆ ಮಾಡಲು ಚಿತ್ರತಂಡ ಸಜ್ಜಾಗಿದ್ದು, ಇತ್ತೀಚೆಗಷ್ಟೆ ಚೆನ್ನೈನಲ್ಲಿ ಸಿನಿಮಾದ ಪ್ರಚಾರ ಕಾರ್ಯ ನಡೆದಿತ್ತು, ಕಾರ್ಯಕ್ರಮದಲ್ಲಿ ಸುದೀಪ್, ತಮಿಳು ನಟ ಯೋಗಿ ಇನ್ನೂ ಹಲವರು ಭಾಗವಹಿಸಿದ್ದರು. ಸುದ್ದಗೋಷ್ಠಿಯಲ್ಲಿ ಸುದೀಪ್ ಅವರಿಗೆ ತಮಿಳು ಪತ್ರಕರ್ತರು ಥರ-ಥರದ ಪ್ರಶ್ನೆಗಳನ್ನು ಕೇಳಿದರು. ಆದರೆ ಸುದೀಪ್ ನೀಡಿದ ಉತ್ತರ ಖಡಕ್ ಆಗಿತ್ತು. ಮಾತ್ರವಲ್ಲದೆ, ಉದ್ದೇಶಪೂರ್ವಕವಾಗಿ ವಿವಾದಾತ್ಮಕ ಪ್ರಶ್ನೆ ಕೇಳಿದ ಪತ್ರಕರ್ತನ ಬಾಯಿ ಮುಚ್ಚಿಸಿದರು ಸುದೀಪ್. 'ಮಾರ್ಕ್' ಸಿನಿಮಾನಲ್ಲಿ ನಾಯಕಿಯಾಗಿರುವ ದೀಪ್ಶಿಕಾ ಮತ್ತು ರೋಷನಿ ಅವರುಗಳು ಸಹ ಚೆನ್ನೈನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿದ್ದರು. ನಟಿಯೊಬ್ಬರಿಗೆ ಪ್ರಶ್ನೆ ಕೇಳಿದ ಪತ್ರಕರ್ತರೊಬ್ಬರು, 'ಸಿನಿಮಾದ ಟ್ರೈಲರ್ ಚೆನ್ನಾಗಿದೆ, ಆದರೆ ನಿಮ್ಮ ಪಾತ್ರ ಹೇಗಿದೆ, ಈಗ ವೇದಿಕೆ ಮೇಲೆ ನಿಮ್ಮನ್ನು ಸೈಡಿನಲ್ಲಿ ಕುಳಿಸಿರುವಂತೆ ಸಿನಿಮಾನಲ್ಲಿಯೂ ನಿಮ್ಮನ್ನು ಸೈಡ್ ಲೈನ್ ಮಾಡಲಾಗಿದೆಯೇ' ಎಂದು ಉದ್ದೇಶಪೂರ್ವಕವಾಗಿ ಪ್ರಚೋದನಾತ್ಮಕ ಪ್ರಶ್ನೆಯನ್ನು ಪತ್ರಕರ್ತ ಕೇಳಿದರು.


ಸುದೀಪ್ ಖಡಕ್ ಉತ್ತರ

ಪತ್ರಕರ್ತನ ಪ್ರಶ್ನೆಯಿಂದ ನಟಿ ಗಾಬರಿಗೊಳಗಾದರು ಏಕೆಂದರೆ ವೇದಿಕೆ ಮೇಲೆ ಅವರನ್ನು ಸೈಡ್ ಲೈನ್ ಮಾಡಿರಲಿಲ್ಲ ಬದಲಿಗೆ ಎಲ್ಲರಿಗೂ ಒಂದೇ ರೀತಿಯ ಕುರ್ಚಿ ಹಾಕಿ, ಒಂದೇ ಸಾಲಿನಲ್ಲಿಯೇ ಕೂರಿಸಲಾಗಿತ್ತು. ಪತ್ರಕರ್ತನ ಪ್ರಶ್ನೆಗೆ ಏನೆಂದು ಉತ್ತರಿಸಬೇಕೆಂದು ನಟಿ ಗೊಂದಲಕ್ಕೊಳಗಾದರು, ಕೂಡಲೇ ಮಧ್ಯ ಪ್ರವೇಶಿಸಿದ ಸುದೀಪ್, 'ಸಿನಿಮಾನಲ್ಲಿ ನಟಿಯರ ಪಾತ್ರ ಬಹಳ ಚೆನ್ನಾಗಿದೆ, ನಿಮಗೆ ಅವರನ್ನು ಸಾಲಿನ ಕೊನೆಯಲ್ಲಿ ಕೂರಿಸುವುದು ಕಷ್ಟವಾದರೆ ನಾನೇ ಅಲ್ಲಿ ಕುಳಿತುಕೊಳ್ಳುತ್ತೇನೆ' ಎಂದವರೇ ನಟಿಯರಿಬ್ಬರನ್ನೂ ಮಧ್ಯದಲ್ಲಿ ಕೂರಿಸಿ ತಾವು ಹೋಗಿ ನಟಿಯರು ಕೂತಿದ್ದ ಜಾಗದಲ್ಲಿ ಕುಳಿತುಕೊಂಡರು. ಕೂಡಲೇ ಅಲ್ಲಿ ನೆರೆದಿದ್ದವರೆಲ್ಲ ಚಪ್ಪಾಳೆ ತಟ್ಟಿ ಅಭಿನಂದಿಸಿದರು. ಬಳಿಕ ಮಾತನಾಡಿದ ಸುದೀಪ್, 'ಸಿನಿಮಾದಲ್ಲಿ ನಾಯಕಿಯರಿಗೆ ಬಹಳ ಒಳ್ಳೆಯ ಪಾತ್ರವನ್ನು ನೀಡಲಾಗಿದೆ. ಈ ಕಾರ್ಯಕ್ರಮ ಒಂದು ರೀತಿಯ ಸಂಭ್ರಮ, ಈ ಸಂಭ್ರಮವನ್ನು ಇಂಥಹಾ ಪ್ರಶ್ನೆಗಳ ಮೂಲಕ ಹಾಳು ಮಾಡಬೇಡಿ' ಎಂದು ನೇರವಾಗಿಯೇ ಹೇಳಿದ್ದಾರೆ ನಟ ಸುದೀಪ್.

# ಬಾಲಿವುಡ್‌ಗೆ ಹೊರಟ ಮತ್ತೊಬ್ಬ ಕನ್ನಡದ ನಿರ್ದೇಶಕ



ದಕ್ಷಿಣ ಭಾರತ ಚಿತ್ರರಂಗದ ನಿರ್ದೇಶಕರುಗಳು ಒಬ್ಬೊಬ್ಬರಾಗಿ ಬಾಲಿವುಡ್ ಕಡೆ ಮುಖ ಮಾಡಿದ್ದಾರೆ. ದಕ್ಷಿಣದ ಸಿನಿಮಾಗಳು ಹಿಂದಿ ಭಾಷಿಕ ಪ್ರದೇಶದಲ್ಲಿ ದೊಡ್ಡ ಹಿಟ್ ಆಗುತ್ತಿರುವ ಕಾರಣ, ಬಾಲಿವುಡ್ ಸ್ಟಾರ್ ನಟರುಗಳು ದಕ್ಷಿಣದ ನಿರ್ದೇಶಕರುಗಳನ್ನು ಕರೆದು, ಸಿನಿಮಾ ನಿರ್ದೇಶನಕ್ಕೆ ಅವಕಾಶ ನೀಡುತ್ತಿದ್ದಾರೆ. ತೆಲುಗು ಮತ್ತು ತಮಿಳಿನ ಕೆಲ ನಿರ್ದೇಶಕರುಗಳು ಈಗಾಗಲೇ ಹಿಂದಿಯಲ್ಲಿ ಸಿನಿಮಾ ನಿರ್ದೇಶಿಸಿದ್ದಾರೆ. ಕನ್ನಡದ ಹರ್ಷ ಸಹ ಟೈಗರ್ ಶ್ರಾಫ್ ಅವರಿಗೆ ಸಿನಿಮಾ ನಿರ್ದೇಶಿಸಿ ಬಂದಿದ್ದಾರೆ. ಲೂಸಿಯಾ ಪವನ್ ಸಹ ಹಿಂದಿ ಸಿನಿಮಾ ನಿರ್ದೇಶಿಸಲು ಮುಂದಾಗಿದ್ದಾರೆ. ಇದೀಗ ಕನ್ನಡದ ಮತ್ತೊಬ್ಬ ನಿರ್ದೇಶಕ ಬಾಲಿವುಡ್ ಕಡೆ ಮುಖ ಮಾಡಿದ್ದಾರೆ.




ರಾಷ್ಟ್ರಪ್ರಶಸ್ತಿ ವಿಜೇತ ಸಿನಿಮಾ ನಿರ್ದೇಶಕ ಮಂಸೋರೆ ಅವರು ಇದೀಗ ಹಿಂದಿ ಸಿನಿಮಾ ಒಂದನ್ನು ನಿರ್ದೇಶಿಸಲಿದ್ದಾರೆ. ಕನ್ನಡದಲ್ಲಿ 'ನಾತಿಚರಾಮಿ', 'ಹರಿವು', 'ಆಕ್ಟ್ 1978', '19.20.21' ಇತ್ತೀಚೆಗಷ್ಟೆ ಬಿಡುಗಡೆ ಆದ 'ದೂರ ತೀರ ಯಾನ' ಸಿನಿಮಾಗಳನ್ನು ನಿರ್ದೇಶಿಸಿರುವ ಮಂಸೋರೆ ಇದೀಗ ಬಾಲಿವುಡ್ ಸಿನಿಮಾ ನಿರ್ದೇಶಿಸಲು ತಯಾರಾಗಿದ್ದಾರೆ. ಸಿನಿಮಾದ ಹೆಸರು 'ಜೂಲಿಯೆಟ್'. ಮುಖೇಶ್ ಗುಪ್ತಾ ಮತ್ತು ರೋಹಿತ್ ಕೆ ಹಾಗೂ ನೀರಜ್ ತಿವಾರಿ ಒಡೆತನದ ಆಗಾಜ್ ಎಂಟರ್‌ಟೈನ್‌ಮೆಂಟ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು 'ಜೂಲಿಯೆಟ್' ಸಿನಿಮಾದ ನಿರ್ಮಾಣ ಮಾಡುತ್ತಿದೆ. ವಕೀಲ್ ಶರ್ಮಾ ಮತ್ತು ಕವಿತಾ ಶಿಬಾಗ್ ಕಪೂರ್ ಅವರುಗಳು ಈ ಸಿನಿಮಾದ ಸಹ-ನಿರ್ಮಾಪಕರುಗಳಾಗಿದ್ದಾರೆ.



# ಎಂ.ಎಸ್ ಸುಬ್ಬಲಕ್ಷ್ಮಿ ಬಯೋಪಿಕ್‌ನಲ್ಲಿ ನಟನೆ ಫಿಕ್ಸ್

ಭಾರತೀಯ ಸಂಗೀತ ಕ್ಷೇತ್ರದ ದಂತಕಥೆ ಎಂ.ಎಸ್. ಸುಬ್ಬಲಕ್ಷ್ಮಿ ಅವರ ಜೀವನ ಚರಿತ್ರೆ ಆಧಾರಿತ ಚಿತ್ರದಲ್ಲಿ ಸಾಯಿ ಪಲ್ಲವಿ ಪ್ರಧಾನ ಪಾತ್ರದಲ್ಲಿ ನಟಿಸುವುದು ಬಹುತೇಕ ಖಚಿತವಾಗಿದೆ. ಅಧಿಕೃತವಾಗಿ ಘೋಷಣೆಯಷ್ಟೇ ಬಾಕಿ ಇದೆ. ಈ ಚಿತ್ರವನ್ನು ಗೌತಮ್ ತಿನ್ನನುರಿ ನಿರ್ದೇಶಿಸಲಿದ್ದು, ಗೀತಾ ಆರ್ಟ್ಸ್ ಚಿತ್ರ ನಿರ್ಮಿಸಲಿದೆ. ಈ ಸಿನಿಮಾ ಪ್ರಸ್ತುತ ಪ್ರೀ ಪ್ರೊಡಕ್ಷನ್ ಹಂತದಲ್ಲಿದೆ. ಶಾಸ್ತ್ರೀಯ ಸಂಗೀತದ ಮೇರು ಗಾಯಕಿ ಎಂ.ಎಸ್ ಸುಬ್ಬಲಕ್ಷ್ಮಿ ಜೀವನಗಾಥೆಯ ಪಾತ್ರಕ್ಕಾಗಿ ಸಾಯಿ ಪಲ್ಲವಿ ನಟಿಸುತ್ತಿರುವುದು ವಿಶೇಷ. ಈಗಾಗ್ಲೇ ಅನೇಕ ಬಯೋಪಿಕ್ ಚಿತ್ರಗಳಲ್ಲಿ ನಟಿಸಿ ಪಾತ್ರಕ್ಕೆ ಜೀವ ತುಂಬಿರುವ ಸಹಜ ಸೌಂದರ್ಯವತಿ ಇದೀಗ ಭಾರತದ ಸಂಗೀತ ಕ್ಷೇತ್ರದ ಧೀಮಂತೆಯ ಪಾತ್ರದಲ್ಲಿ ಹೇಗೆ ಕಾಣಿಸಿಕೊಳ್ತಾರೆ ಅನ್ನೋದನ್ನ ನೋಡುವ ಕುತೂಹಲ ಅವರ ಅಭಿಮಾನಿಗಳಲ್ಲಿ ಮನೆಮಾಡಿದೆ. ಎಂ.ಎಸ್ ಸುಬ್ಬಲಕ್ಷ್ಮಿ ಸಂಗೀತ ಕ್ಷೇತ್ರದಲ್ಲಿ ಭಾರತ ರತ್ನ ಪಡೆದ ಮೊದಲಿಗರು. 1966ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಪ್ರದರ್ಶನ ನೀಡಿರುವುದು ಇತಿಹಾಸ. ಹೀಗೆ ಹೆಸರಾಂತ ಹಾಗೂ ಶ್ರೇಷ್ಠ ಗಾಯಕಿಯ ಪಾತ್ರದಲ್ಲಿ ಸಾಯಿ ಪಲ್ಲವಿಕಾಣಿಸಿಕೊಳ್ಳುತ್ತಿರುವುದು ವಿಶೇಷ. ರಾಮಾಯಣ ಚಿತ್ರದಲ್ಲಿ ಸೀತೆ ಪಾತ್ರದಲ್ಲಿ ನಟಿಸುತ್ತಿರುವ ಸಾಯಿಪಲ್ಲವಿ ಬಳಿಕ ಈ ಪಾತ್ರಕ್ಕಾಗಿ ಸಂಪೂರ್ಣ ತೊಡಗಿಕೊಳ್ಳುವ ಸಾಧ್ಯತೆ ಇದೆ.

# ಶಾರುಖ್ ಜೊತೆ ನಟಿಸಲಿದ್ದಾರಾ ಜೂ ಎನ್‌ಟಿಆರ್



ಜೂ ಎನ್‌ಟಿಆರ್ ಸ್ಟಾರ್ ಪ್ಯಾನ್ ಇಂಡಿಯಾ ನಟ. ದಕ್ಷಿಣ ಭಾರತದಲ್ಲಿ ಅವರಿಗೆ ಭಾರಿ ದೊಡ್ಡ ಅಭಿಮಾನಿ ವರ್ಗವೇ ಇದೆ. 'ವಾರ್ 2' ಸಿನಿಮಾ ಮೂಲಕ ಜೂ ಎನ್‌ಟಿಆರ್ ಬಾಲಿವುಡ್‌ಗೂ ಪ್ರವೇಶ ಮಾಡಿದ್ದಾರೆ. ಆದರೆ ನಿರೀಕ್ಷಿತ ಯಶಸ್ಸು ಅವರಿಗೆ ಸಿಕ್ಕಿಲ್ಲ. ಆದರೆ ಇದೀಗ ಅವರು ಮತ್ತೊಂದು ಹಿಂದಿ ಸಿನಿಮಾನಲ್ಲಿ ನಟಿಸಲಿದ್ದಾರೆ. ಅದೂ ಈ ಬಾರಿ ಶಾರುಖ್ ಖಾನ್ ಜೊತೆಗಂತೆ... 'ಆರ್‌ಆರ್‌ಆರ್' ಸಿನಿಮಾದ ಬಳಿಕ ಜೂ ಎನ್‌ಟಿಆರ್ ಪ್ಯಾನ್ ಇಂಡಿಯಾ ಸ್ಟಾರ್ ನಟ ಎನಿಸಿಕೊಂಡಿದ್ದಾರೆ. ಈಗಾಗಲೇ 'ವಾರ್ 2' ಸಿನಿಮಾ ಮೂಲಕ ಬಾಲಿವುಡ್‌ಗೂ ಪ್ರವೇಶ ಪಡೆದಿರುವ ಜೂ ಎನ್‌ಟಿಆರ್, ಅಲ್ಲಿಯೂ ಸಹ ದೊಡ್ಡ ಅಭಿಮಾನಿ ವರ್ಗ ಹೊಂದಿದ್ದಾರೆ. ಆದರೆ ಅವರು ನಟಿಸಿದ ಮೊದಲ ಬಾಲಿವುಡ್ ಸಿನಿಮಾ 'ವಾರ್ 2' ಫ್ಲಾಪ್ ಆಗಿತ್ತು. ಆದರೆ ಇದೀಗ ಬಾಲಿವುಡ್‌ನ ಮತ್ತೊಬ್ಬ ಸ್ಟಾರ್ ನಟನ ಜೊತೆಗೆ ನಟಿಸಲು ಜೂ ಎನ್‌ಟಿಆರ್ ಮುಂದಾಗಿದ್ದಾರೆ ಎಂಬ ಸುದ್ದಿಗಳು ಹರಿದಾಡುತ್ತಿವೆ. ಶಾರುಖ್ ಖಾನ್ ಜೊತೆಗೆ ಜೂ ಎನ್‌ಟಿಆರ್ ನಟಿಸಲಿದ್ದಾರೆ ಎಂಬ ಮಾತುಗಳು ಗಟ್ಟಿಯಾಗಿ ಕೇಳಿ ಬರುತ್ತಿವೆ. 'ವಾರ್ 2' ನಿರ್ಮಿಸಿದ್ದ ಯಶ್ ರಾಜ್ ಫಿಲಮ್ಸ್‌ನವರ ಮತ್ತೊಂದು ಸ್ಪೈ ಸಿನಿಮಾ 'ಪಠಾಣ್'ನಲ್ಲಿ ಶಾರುಖ್ ಖಾನ್ ನಟಿಸಿದ್ದು, ಇದೀಗ 'ಪಠಾಣ್' ಸಿನಿಮಾದ ಸೀಕ್ವೆಲ್ ಮಾಡಲು ವೈಆರ್‌ಎಫ್ ಮುಂದಾಗಿದೆ. 'ಪಠಾಣ್' ಸಿನಿಮಾದ ಸೀಕ್ವೆಲ್‌ನಲ್ಲಿ ಶಾರುಖ್ ಖಾನ್ ಜೊತೆಗೆ ಜೂ ಎನ್‌ಟಿಆರ್ ಅವರು ನಟಿಸಲಿದ್ದಾರೆ ಎಂಬ ಸುದ್ದಿ ಹರಿದಾಡುತ್ತಿದೆ. 'ವಾರ್ 2' ಸಿನಿಮಾನಲ್ಲಿ ಜೂ ಎನ್‌ಟಿಆರ್ ಮೇಜರ್ ರಘು ವಿಕ್ರಂ ಛಲಪತಿ ಹೆಸರಿನ ಪಾತ್ರದಲ್ಲಿ ನಟಿಸಿದ್ದರು. 'ವಾರ್ 2' ಸಿನಿಮಾನಲ್ಲಿ ಹೃತಿಕ್ ರೋಷನ್‌ಗೆ ಸಖತ್ ಟಕ್ಕರ್ ನೀಡಿದ್ದರು. ಸಿನಿಮಾನಲ್ಲಿ ಜೂ ಎನ್‌ಟಿಆರ್ ಪಾತ್ರಕ್ಕೂ ಪ್ರಶಂಸೆ ವ್ಯಕ್ತವಾಗಿತ್ತು. ಇದೀಗ ಅದೇ ಪಾತ್ರ 'ಪಠಾಣ್ 2' ಸಿನಿಮಾನಲ್ಲಿಯೂ ಇರಲಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ. ವೈಆರ್‌ಎಫ್ ಹಲವು ಸ್ಪೈ ಸಿನಿಮಾಗಳನ್ನು ನಿರ್ಮಿಸಿದ್ದು, ಒಂದಕ್ಕೊಂದು ಲಿಂಕ್ ಇಡುತ್ತಲೇ ಬಂದಿದೆ. 'ಪಠಾಣ್' ಸಿನಿಮಾನಲ್ಲಿ 'ಟೈಗರ್' ಸಿನಿಮಾದ ಪಾತ್ರಧಾರಿ ಸಲ್ಮಾನ್ ಖಾನ್ ಅತಿಥಿ ಪಾತ್ರದಲ್ಲಿ ಬಂದು ಹೋಗಿದ್ದಾರೆ, ಈಗ ಜೂ ಎನ್‌ಟಿಆರ್ ಸಹ ಎಂಟ್ರಿ ನೀಡುತ್ತಿದ್ದಾರೆ.

# ಮೊದಲ ಸುತ್ತಿನಲ್ಲಿ ನಾಲ್ವರು ಅನ್‌ಸೋಲ್ಡ್ ಇಬ್ಬರು ಸೋಲ್ಡ್



ಇಂಡಿಯನ್ ಪ್ರೀಮಿಯರ್ ಲೀಗ್‌ನ 19ನೇ ಆವೃತ್ತಿಗಾಗಿ ಅಬುಧಾಬಿಯ ಇತಿಹಾದ್ ಅರೇನಾದಲ್ಲಿ ಹರಾಜು ಪ್ರಕ್ರಿಯೆ ನಡೆಯುತ್ತಿದೆ. ಈ ಹರಾಜಿನಲ್ಲಿ ಬರೋಬ್ಬರಿ 369 ಆಟಗಾರರ ಹೆಸರು ಕಾಣಿಸಿಕೊಂಡಿದೆ. ಇವರಲ್ಲಿ ಮೊದಲ ಸುತ್ತಿನಲ್ಲಿ ಮಾರಾಟವಾದ ಹಾಗೂ ಮಾರಾಟವಾಗದ ಆಟಗಾರರ ಪಟ್ಟಿ ಈ ಕೆಳಗಿನಂತಿದೆ...

**ಐಪಿಎಲ್ 2026:** ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-19ರ ಹರಾಜು ಶುರುವಾಗಿದೆ. ಮೊದಲ ಸುತ್ತಿನಲ್ಲಿ ಒಟ್ಟು 6 ಆಟಗಾರರಿಗಾಗಿ ಬಿಡ್ಡಿಂಗ್ ನಡೆದಿದ್ದು, ಇವರಲ್ಲಿ ಕೇವಲ ಇಬ್ಬರು ಮಾತ್ರ ಬಿಕರಿಯಾಗಿದ್ದಾರೆ. ಇನ್ನುಳಿದ ನಾಲ್ವರು ಮೊದಲ ಸುತ್ತಿನಲ್ಲಿ ಅನ್‌ಸೋಲ್ಡ್ ಆಗಿ ಉಳಿದಿದ್ದಾರೆ. ಅದರಂತೆ ಮೊದಲ ಸುತ್ತಿನಲ್ಲಿ ಸೋಲ್ಡ್ ಹಾಗೂ ಅನ್‌ಸೋಲ್ಡ್ ಆದ 6 ಆಟಗಾರರ ಪಟ್ಟಿ ಈ ಕೆಳಗಿನಂತಿದೆ...

**ಡೆವೊನ್ ಕಾನ್ವೆ:** ನ್ಯೂಝಿಲೆಂಡ್ ತಂಡದ ಎಡಗೈ ದಾಂಡಿಗ ಡೆವೊನ್ ಕಾನ್ವೆ ಕಳೆದ ಸೀಸನ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಪರ ಕಣಕ್ಕಿಳಿದಿದ್ದರು. ಈ ಬಾರಿ 2 ಕೋಟಿ ರೂ. ಮೂಲ ಬೆಲೆಯೊಂದಿಗೆ ಕಾಣಿಸಿಕೊಂಡಿದ್ದ ಕಾನ್ವೆಯನ್ನು ಸಹ ಯಾವುದೇ ಮೊದಲ ಸುತ್ತಿನಲ್ಲಿ ಯಾವುದೇ ಫ್ರಾಂಚೈಸಿ ಖರೀದಿಸಿಲ್ಲ.

**ಜೇಕ್ ಫ್ರೇಸರ್ ಮೆಕ್‌ಗುರ್ಕ್:** ಆಸ್ಟ್ರೇಲಿಯಾದ ಯುವ ಸ್ಫೋಟಕ ದಾಂಡಿಗ ಐಪಿಎಲ್ 2025 ರಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಪರ ಕಣಕ್ಕಿಳಿದಿದ್ದರು. ಈ ಬಾರಿ 2 ಕೋಟಿ ರೂ. ಮೂಲ ಬೆಲೆಯೊಂದಿಗೆ ಕಾಣಿಸಿಕೊಂಡಿದ್ದ ಜೇಕ್ ಪ್ರೇಸರ್‌ನನ್ನು ಮೊದಲ ಸುತ್ತಿನಲ್ಲಿ ಯಾವುದೇ ಫ್ರಾಂಚೈಸಿ ಖರೀದಿಸಿಲ್ಲ.

**ಡೇವಿಡ್ ಮಿಲ್ಲರ್:** ಸೌತ್ ಆಫ್ರಿಕಾ ತಂಡದ ಸ್ಫೋಟಕ ದಾಂಡಿಗ ಡೇವಿಡ್ ಮಿಲ್ಲರ್ ಐಪಿಎಲ್ 2025 ರಲ್ಲಿ ಲಕ್ನೋ ಸೂಪರ್ ಜೈಂಟ್ಸ್ ತಂಡದ ಪರ ಕಣಕ್ಕಿಳಿದಿದ್ದರು. ಈ ಬಾರಿ 2 ಕೋಟಿ ರೂ. ಆಕ್ಷನ್ ಪ್ರೈಸ್ ಘೋಷಿಸಿದ್ದ ಮಿಲ್ಲರ್ ಅವರನ್ನು ಡೆಲ್ಲಿ ಕ್ಯಾಪಿಟಲ್ಸ್ ಫ್ರಾಂಚೈಸಿ ಮೂಲ ಬೆಲೆಗೆ ಖರೀದಿಸಿದೆ.

**ಪೃಥ್ವಿ ಶಾ:** ಟೀಮ್ ಇಂಡಿಯಾ ದಾಂಡಿಗ ಪೃಥ್ವಿ ಶಾ ಕಳೆದ ಸೀಸನ್‌ನಲ್ಲಿ ಬಿಕರಿಯಾಗದೇ ಉಳಿದಿದ್ದರು. ಈ ಬಾರಿ 75 ಲಕ್ಷ ರೂ. ಮೂಲ ಬೆಲೆಯೊಂದಿಗೆ ಅದೃಷ್ಟ ಪರೀಕ್ಷೆಗೆ ಇಳಿದಿದ್ದ ಪೃಥ್ವಿ ಶಾ ಅವರನ್ನು ಮೊದಲ ಸುತ್ತಿನಲ್ಲಿ ಯಾವುದೇ ಫ್ರಾಂಚೈಸಿ ಖರೀದಿಸಿಲ್ಲ.

**ಕ್ಯಾಮರೋನ್ ಗ್ರೀನ್:** ಆಸ್ಟ್ರೇಲಿಯಾ ತಂಡದ ಆಲ್‌ರೌಂಡರ್ ಕ್ಯಾಮರೋನ್ ಗ್ರೀನ್ 2 ಕೋಟಿ ರೂ. ಮೂಲ ಬೆಲೆಯೊಂದಿಗೆ ಹರಾಜಿನಲ್ಲಿ ಕಾಣಿಸಿಕೊಂಡಿದ್ದರು. ಇತ್ತ ಗ್ರೀನ್ ಖರೀದಿಗೆ ಕೆಕೆಆರ್ ಹಾಗೂ ಸಿಎಸ್‌ಕೆ ನಡುವೆ ಭರ್ಜರಿ ಪೈಪೋಟಿ ಏರ್ಪಟ್ಟಿತ್ತು. ಅಂತಿಮವಾಗಿ ಕೆಕೆಆರ್ ಬರೋಬ್ಬರಿ 25.20 ಕೋಟಿ ರೂ.ಗೆ ಖರೀದಿಸಿದೆ.

**ಸರ್ಫರಾಝ್ ಖಾನ್:** ಭಾರತದ ಬಲಗೈ ದಾಂಡಿಗ ಸರ್ಫರಾಝ್ ಖಾನ್ ಕಳೆದ ಸೀಸನ್‌ನಲ್ಲಿ ಅನ್‌ಸೋಲ್ಡ್ ಆಗಿದ್ದರು. ಆದರೆ ಈ ಬಾರಿ 75 ಲಕ್ಷ ರೂ. ಮೂಲ ಬೆಲೆಯೊಂದಿಗೆ ಕಾಣಿಸಿಕೊಂಡಿದ್ದ ಸರ್ಫರಾಝ್ ಅವರನ್ನು ಸಹ ಮೊದಲ ಸುತ್ತಿನಲ್ಲಿ ಯಾವುದೇ ಫ್ರಾಂಚೈಸಿ ಖರೀದಿಸಿಲ್ಲ.

# ಏಷ್ಯಾ ಕಪ್‌ನಲ್ಲಿ ಅಜೇಯ ಶತಕ ಸಿಡಿಸಿದ ಅಭಿಗ್ಯಾನ್

125 ಎಸೆತಗಳಲ್ಲಿ 209 ರನ್!

ದುಬೈನಲ್ಲಿ ನಡೆಯುತ್ತಿರುವ 19 ಏಷ್ಯಾಕಪ್‌ನಲ್ಲಿ ಭಾರತ ತಂಡ ಮಲೇಷ್ಯಾ ವಿರುದ್ಧ 408 ರನ್‌ಗಳ ಬೃಹತ್ ಮೊತ್ತ ಕಲೆಹಾಕಿದೆ. ವಿಕೆಟ್ ಕೀಪರ್-ಬ್ಯಾಟ್ಸ್‌ಮನ್ ಅಭಿಗ್ಯಾನ್ ಕುಂಡು ಅಜೇಯ 209 ರನ್‌ಗಳ ಅದ್ಭುತ ದ್ವಿಶತಕ ಸಿಡಿಸಿ ಮಿಂಚಿದರು. ವೇದಾಂತ್ ತ್ರಿವೇದಿ ಜೊತೆ 209 ರನ್‌ಗಳ ಜೊತೆಯಾಟವಾಡಿ ತಂಡದ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದರು. ದುಬೈನಲ್ಲಿ ನಡೆಯುತ್ತಿರುವ 19 ವರ್ಷದೊಳಗಿನವರ ಏಷ್ಯಾಕಪ್ ಟೂರ್ನಿಯ ತನ್ನ ಮೂರನೇ ಲೀಗ್ ಪಂದ್ಯದಲ್ಲಿ ಭಾರತ ಯುವ ಪಡೆ ಮಲೇಷ್ಯಾ ತಂಡವನ್ನು ಎದುರಿಸುತ್ತಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡ ಬರೋಬ್ಬರಿ 408 ರನ್ ಕಲೆಹಾಕಿದೆ. ತಂಡ ಇಷ್ಟು ಬೃಹತ್ ಮೊತ್ತವನ್ನು ಕಲೆಹಾಕುವಲ್ಲಿ ಪ್ರಮುಖ ಪಾತ್ರವಹಿಸಿದ ವಿಕೆಟ್ ಕೀಪರ್-ಬ್ಯಾಟ್ಸ್‌ಮನ್ ಅಭಿಗ್ಯಾನ್ ಕುಂಡು ಅಜೇಯ ದ್ವಿಶತಕ ಬಾರಿಸಿದ್ದಾರೆ. ಮಾತ್ರವಲ್ಲದೆ ವೇದಾಂತ್ ತ್ರಿವೇದಿ ಅವರೊಂದಿಗೆ 209 ರನ್‌ಗಳ ಜೊತೆಯಾಟವನ್ನು ನಡೆಸಿ ತಂಡವನ್ನು ದಾಖಲೆಯ ಮೊತ್ತಕ್ಕೆ ಕೊಂಡೊಯ್ದರು.

ದುಬೈನ ಸೆವೆನ್ಸ್ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಟಾಸ್ ಗೆದ್ದ ಮಲೇಷ್ಯಾ ಮೊದಲು ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಹೀಗಾಗಿ ಮೊದಲು ಬ್ಯಾಟಿಂಗ್ ಮಾಡಿದ ಭಾರತಕ್ಕೆ ಉತ್ತಮ ಆರಂಭ ಸಿಗಲಿಲ್ಲ. ನಾಯಕ ಆಯುಷ್ 14 ರನ್‌ಗಳಿಗೆ ವಿಕೆಟ್ ಒಪ್ಪಿಸಿದರೆ, ವಿಹಾನ್ ಕೂಡ 7 ರನ್‌ಗಳಿಗೆ ಸುಸ್ತಾದರು. ಆದಾಗ್ಯೂ ಕಳೆದ ಪಂದ್ಯದಲ್ಲಿ ವಿಫಲರಾಗಿದ್ದ ಸ್ಫೋಟಕ ಬ್ಯಾಟ್ಸ್‌ಮನ್ ವೈಭವ್ ಸೂರ್ಯವಂಶಿ ಅರ್ಧಶತಕದ ಇನ್ನಿಂಗ್ಸ್ ಆಡಿದರು. ಆದರೆ ತಮ್ಮ ಅರ್ಧಶತಕವನ್ನು ಶತಕವನ್ನಾಗಿ ಪರಿವರ್ತಿಸುವಲ್ಲಿ ಎಡವಿದ ವೈಭವ್ 50 ರನ್‌ಗಳಿಗೆ ಔಟಾದರು. ಆ ಬಳಿಕ ಜೊತೆಯಾದ ವಿಕೆಟ್ ಕೀಪರ್-ಬ್ಯಾಟ್ಸ್‌ಮನ್ ಅಭಿಗ್ಯಾನ್ ಕುಂಡು ಮತ್ತು ವೇದಾಂತ್ ತ್ರಿವೇದಿ ತಂಡದ ಇನ್ನಿಂಗ್ಸ್ ಕಟ್ಟಿದರು. ಈ ಮೂಲಕ 209 ರನ್‌ಗಳ ಪಾಲುದಾರಿಕೆಯನ್ನು ಹಂಚಿಕೊಂಡರು. ಕುಂಡು 125 ಎಸೆತಗಳಲ್ಲಿ 16 ಬೌಂಡರಿಗಳು ಮತ್ತು ಒಂಬತ್ತು ಸಿಕ್ಸರ್‌ಗಳ ಸಹಿತ ಅಜೇಯ 209 ರನ್ ಬಾರಿಸಿದರೆ, ಶತಕ ವಂಚಿತರಾದ ವೇದಾಂತ್ ತ್ರಿವೇದಿ 106 ಎಸೆತಗಳಲ್ಲಿ 90 ರನ್ ಗಳಿಸಿದರು. ಆರಂಭಿಕ ವೈಭವ್ ಸೂರ್ಯವಂಶಿ 26 ಎಸೆತಗಳಲ್ಲಿ 50 ರನ್ ಗಳಿಸಿ ಔಟಾದರು. ಮಲೇಷ್ಯಾ ಪರ, ಮುಹಮ್ಮದ್ ಅಕ್ರಮ್ 89 ರನ್‌ಗಳಿಗೆ 5 ವಿಕೆಟ್ ಪಡೆದರು.

ದಾಖಲೆ ಪಟ್ಟಿ ಸೇರದ ದ್ವಿಶತಕ

ಯೂತ್ ಏಕದಿನ ಪಂದ್ಯಗಳಲ್ಲಿ ದಾಖಲೆಯನ್ನು ಎಣಿಸಲಾಗುವುದಿಲ್ಲ. ಕುಂಡು ಅವರ ರನ್ ಮತ್ತು ಶತಕವನ್ನು ಯೂತ್ ಏಕದಿನ ಪಂದ್ಯಗಳ ದಾಖಲೆಗೆ ಸೇರಿಸಲಾಗುವುದಿಲ್ಲ. ಏಕೆಂದರೆ ಮಲೇಷ್ಯಾ ಐಸಿಸಿಯ ಪೂರ್ಣ ಸದಸ್ಯತ್ವ ಹೊಂದಿಲ್ಲ. ಆದ್ದರಿಂದ ಈ ಪಂದ್ಯವು 19 ವರ್ಷದೊಳಗಿನವರ ಅಂತರರಾಷ್ಟ್ರೀಯ ಪಂದ್ಯದ ಸ್ಥಾನಮಾನವನ್ನು ಹೊಂದಿಲ್ಲ. ಪಾಕಿಸ್ತಾನದ ಸಮೀರ್ ಮಿನ್ಹಾಸ್ ಮಲೇಷ್ಯಾ ವಿರುದ್ಧ 177 ರನ್ ಗಳಿಸಿದ್ದರು. ಆ ರನ್ ಅನ್ನು ಯೂತ್ ಏಕದಿನ ಪಂದ್ಯಗಳ ದಾಖಲೆಯಲ್ಲಿ ಎಣಿಸಲಾಗುವುದಿಲ್ಲ. ಬಾಂಗ್ಲಾದೇಶದ ಸೌಮ್ಯ ಸರ್ಕಾರ್ ಕೂಡ 2012 ರ ಏಷ್ಯಾಕಪ್‌ನಲ್ಲಿ ಕತಾರ್ ವಿರುದ್ಧ ದ್ವಿಶತಕ ಗಳಿಸಿದರು. ಆ ದಾಖಲೆಯನ್ನು ಯೂತ್ ಏಕದಿನ ಪಂದ್ಯಗಳಲ್ಲಿಯೂ ಎಣಿಸಲಾಗುವುದಿಲ್ಲ.



# ಬರೋಬ್ಬರಿ 25.2 ಕೋಟಿ ರೂ.ಗೆ ಗ್ರೀನ್ ಹರಾಜು

ಇಂಡಿಯನ್ ಪ್ರೀಮಿಯರ್ ಲೀಗ್‌ನ 19ನೇ ಆವೃತ್ತಿಗಾಗಿ ಅಬುಧಾಬಿಯ ಇತಿಹಾದ್ ಅರೇನಾದಲ್ಲಿ ಹರಾಜು ಪ್ರಕ್ರಿಯೆ ನಡೆಯುತ್ತಿದೆ. ಈ ಹರಾಜಿನಲ್ಲಿ ಬರೋಬ್ಬರಿ 369 ಆಟಗಾರರ ಹೆಸರು ಕಾಣಿಸಿಕೊಂಡಿದೆ. ಇವರಲ್ಲಿ ಮೊದಲ ಸುತ್ತಿನಲ್ಲಿ ಆಸ್ಟ್ರೇಲಿಯಾದ ಆಲ್‌ರೌಂಡರ್ ಕ್ಯಾಮರೋನ್ ಗ್ರೀನ್ ಭರ್ಜರಿ ಮೊತ್ತಕ್ಕೆ ಹರಾಜಾಗಿದ್ದಾರೆ.



ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-19 ಮಿನಿ ಹರಾಜಿನಲ್ಲಿ ಆಸ್ಟ್ರೇಲಿಯಾ ತಂಡದ ಆಲ್‌ರೌಂಡರ್ ಕ್ಯಾಮರೋನ್ ಗ್ರೀನ್ ಬರೋಬ್ಬರಿ 25.20 ಕೋಟಿ ರೂ.ಗೆ ಹರಾಜಾಗಿದ್ದಾರೆ. ಹೀಗೆ ಆಸೀಸ್ ಆಟಗಾರನಿಗೆ ಕೋಟಿ ಮೊತ್ತ ನೀಡಿ ಖರೀದಿಸಿರುವುದು ಕೊಲ್ಕತ್ತಾ ನೈಟ್ ರೈಡರ್ಸ್ ತಂಡ. ಕೆಕೆಆರ್ ತಂಡದ ಸ್ಟಾರ್ ಆಲ್‌ರೌಂಡರ್ ಆ್ಯಂಡ್ರೆ ರಸೆಲ್ ಈಗಾಗಲೇ ಐಪಿಎಲ್‌ಗೆ ವಿದಾಯ ಹೇಳಿದ್ದಾರೆ. ಅವರ ಬದಲಿಗೆ ಗ್ರೀನ್ ಅವರನ್ನು ಖರೀದಿಸಲು ಕೊಲ್ಕತ್ತಾ ನೈಟ್ ರೈಡರ್ಸ್ ಫ್ರಾಂಚೈಸಿ ಪ್ಲ್ಯಾನ್ ರೂಪಿಸಿತ್ತು. ಆದರೆ ಅತ್ತ ಕೆಕೆಆರ್ ಫ್ರಾಂಚೈಸಿಗೆ ಸಿಎಸ್‌ಕೆ ಕಡೆಯಿಂದ ಭರ್ಜರಿ ಪೈಪೋಟಿ ಎದುರಾಗಿತ್ತು. ಇದಾಗ್ಯೂ ಅಂತಿಮವಾಗಿ ಬರೋಬ್ಬರಿ 25.20 ಕೋಟಿ ರೂ. ನೀಡುವ ಮೂಲಕ ಕೊಲ್ಕತ್ತಾ ನೈಟ್ ರೈಡರ್ಸ್ ಫ್ರಾಂಚೈಸಿಯು ಕ್ಯಾಮರೋನ್ ಗ್ರೀನ್ ಅವರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಅದರಂತೆ ಗ್ರೀನ್ ಮುಂಬರುವ ಐಪಿಎಲ್‌ನಲ್ಲಿ ಕೆಕೆಆರ್ ಪರ ಕಣಕ್ಕಿಳಿಯಲಿದ್ದಾರೆ. ಕ್ಯಾಮರೋನ್ ಗ್ರೀನ್ ಈ ಹಿಂದೆ ಮುಂಬೈ ಇಂಡಿಯನ್ಸ್ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ಕಣಕ್ಕಿಳಿದಿದ್ದರು. 2023 ರಲ್ಲಿ ಮುಂಬೈ ಇಂಡಿಯನ್ಸ್ ತಂಡಕ್ಕೆ ಎಂಟ್ರಿ ಕೊಟ್ಟಿದ್ದ ಗ್ರೀನ್, 2024 ರಲ್ಲಿ ಆರ್‌ಸಿಬಿ ಪರ ಕಣಕ್ಕಿಳಿದಿದ್ದರು. ಇದೀಗ ಮೂರನೇ ತಂಡವಾಗಿ ಕೆಕೆಆರ್ ಪರ ಹೊಸ ಇನಿಂಗ್ಸ್ ಆರಂಭಿಸಲಿದ್ದಾರೆ.

**ಕೆಕೆಆರ್ ತಂಡ:** ಅಜಿಂಕ್ಯ ರಹಾನೆ, ಅಂಗ್‌ಕ್ರಿಶ್ ರಘುವಂಶಿ, ಅನ್ಕುಲ್ ರಾಯ್, ಹರ್ಷಿತ್ ರಾಣಾ, ಮನೀಶ್ ಪಾಂಡೆ, ರಮಣ್‌ದೀಪ್ ಸಿಂಗ್, ರಿಂಕು ಸಿಂಗ್, ರೋವ್‌ಮನ್ ಪೊವೆಲ್, ಸುನಿಲ್ ನರೈನ್, ಉಮ್ರಾನ್ ಮಲಿಕ್, ವೈಭವ್ ಅರೋರಾ, ವರುಣ್ ಚಕ್ರವರ್ತಿ.

# ಆರ್‌ಸಿಬಿ ತಂಡಕ್ಕೆ ಸ್ಟಾರ್ ಆಲ್‌ರೌಂಡರ್



ಸೀಸನ್-19ರ ಹರಾಜಿಗೂ ಮುನ್ನ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಒಟ್ಟು 17 ಆಟಗಾರರನ್ನು ರಿಟೈನ್ ಮಾಡಿಕೊಂಡಿತ್ತು. ಇದೀಗ 16.40 ಕೋಟಿ ರೂ.ನೊಂದಿಗೆ ಹರಾಜಿನಲ್ಲಿ ಕಾಣಿಸಿಕೊಂಡಿರುವ ಆರ್‌ಸಿಬಿ ಸ್ಟಾರ್ ಆಟಗಾರನನ್ನು ಖರೀದಿಸಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿಯು ವೆಂಕಟೇಶ್ ಅಯ್ಯರ್ ಅವರನ್ನು ಬರೋಬ್ಬರಿ 7 ಕೋಟಿ ರೂ.ಗೆ ಖರೀದಿಸಿದೆ. ಕಳೆದ ಸೀಸನ್ ವೆಂಕಟೇಶ್ ಅಯ್ಯರ್ ಕೊಲ್ಕತ್ತಾ ನೈಟ್ ರೈಡರ್ಸ್ ಪರ ಕಣಕ್ಕಿಳಿದಿದ್ದರು. ಈ ಬಾರಿ ಆರ್‌ಸಿಬಿ ಪರ ಕಣಕ್ಕಿಳಿಯಲಿದ್ದಾರೆ. ಆರ್‌ಸಿಬಿ ತಂಡಕ್ಕೆ ಈ ಬಾರಿ 8 ಆಟಗಾರರನ್ನು ಖರೀದಿಸಲು ಅವಕಾಶವಿದೆ. ಅದರಂತೆ ಇದೀಗ ಓರ್ವ ಆಟಗಾರನನ್ನು ಖರೀದಿಸಿದ್ದು, ಇನ್ನೂ 7 ಮಂದಿಯನ್ನು ಮಾಡಬಹುದು. ಏಕೆಂದರೆ ಐಪಿಎಲ್ ನಿಯಮದ ಪ್ರಕಾರ ಒಂದು ತಂಡದಲ್ಲಿ ಗರಿಷ್ಠ 25 ಆಟಗಾರರನ್ನು ಹೊಂದಬಹುದು. ಅದರಂತೆ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿಯು 16.40 ಕೋಟಿ ರೂ.ನಲ್ಲಿ ಈ ಬಾರಿ ಎಷ್ಟು ಆಟಗಾರರನ್ನು ಖರೀದಿಸಲಿದ್ದಾರೆ ಎಂಬುದನ್ನು ಕಾದು ನೋಡಬೇಕಿದೆ. ಕಳೆದ ಬಾರಿ ಆರ್‌ಸಿಬಿ 22 ಆಟಗಾರರ ತಂಡವನ್ನು ರೂಪಿಸಿತ್ತು ಎಂಬುದು ಇಲ್ಲಿ ಉಲ್ಲೇಖಾರ್ಹ. ಇದಾಗ್ಯೂ ಈ ಬಾರಿ ಹೆಚ್ಚುವರಿ ಆಟಗಾರರನ್ನು ತಂಡಕ್ಕೆ ಸೇರ್ಪಡೆಗೊಳಿಸುವ ಸಾಧ್ಯತೆಯಿದೆ.

**ಆರ್‌ಸಿಬಿ ತಂಡ:** ರಜತ್ ಪಾಟಿದಾರ್ (ನಾಯಕ), ವಿರಾಟ್ ಕೊಹ್ಲಿ, ದೇವದತ್ ಪಡಿಕ್ಕಲ್, ಫಿಲ್ ಸಾಲ್ಟ್, ಜಿತೇಶ್ ಶರ್ಮಾ, ಕೃನಾಲ್ ಪಾಂಡ್ಯ, ಸ್ವಪ್ನಿಲ್ ಸಿಂಗ್, ಟಿಮ್ ಡೇವಿಡ್, ರೊಮಾರಿಯೋ ಶೆಫರ್ಡ್, ಜೇಕಬ್ ಬೆಥೆಲ್, ಜೋಶ್ ಹೇಝಲ್‌ವುಡ್, ಯಶ್ ದಯಾಲ್, ಭುವನೇಶ್ವರ್ ಕುಮಾರ್, ನುವಾನ್ ತುಷಾರ, ರಾಸಿಖ್ ದಾರ್, ಅಭಿನಂದನ್ ಸಿಂಗ್, ಸುಯಶ್ ಶರ್ಮಾ, ವೆಂಕಟೇಶ್ ಅಯ್ಯರ್.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966